


ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
ಫೆಬ್ರವರಿ 7 ಬುಧವಾರ 2024
ಸಂಪುಟ: 44 | ಸಂಚಿಕೆ: 290 | ಪುಟಗಳು: 12
₹4
ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕೇಂದ್ರ–ರಾಜ್ಯದ ನಡುವೆ ತೆರಿಗೆ ತಿಕ್ಕಾಟ: ಇಂದು ದೆಹಲಿಯಲ್ಲಿ

ಕರ್ನಾಟಕ ಸರ್ಕಾರ ಧರಣಿ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಜಂತರ್–ಮಂತರ್‌ನಲ್ಲಿ ಪ್ರತಿಭಟನೆ


(ಸಂಗ್ರಹ ಚಿತ್ರ)

"ರಾಜ್ಯದ ಆರ್ಥಿಕ ಪರಿಸ್ಥಿತಿ ಸಂಬಂಧಿಸಿದಂತೆ ಶ್ವೇತಪತ್ರ ಹೊರಡಿಸಲಿ. ಪ್ರಧಾನಿ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಕಳೆದ 10 ವರ್ಷಗಳಲ್ಲಿ ರಾಜ್ಯಕ್ಕೆ ಬಿಡುಗಡೆ ಮಾಡಿರುವ ಅನುದಾನದ ದಾಖಲೆ ಇದೆ. ಇವರು ಖಜಾನೆ ಖಾಲಿ ಮಾಡಿ, ಜನರ ಮುಂದೆ ಮೊಸಳೆ ಕಣ್ಣೀರು ಹಾಕುತ್ತಿದ್ದಾರೆ. ಚುನಾವಣೆ ಕಾಲದಲ್ಲಿ ಬೀದಿ ನಾಟಕ ಆಡುತ್ತಿದ್ದಾರೆ. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಹಾಗೂ ಈಗಿನ ಎನ್‌ಡಿಎ ಸರ್ಕಾರದ ಕಾಲದಲ್ಲಿ ಬಿಡುಗಡೆಯಾದಂತಹ ಅನುದಾನದ ಬಗ್ಗೆ ದಾಖಲೆ ನೋಡಿ ಚರ್ಚೆಗೆ ಬರಲಿ. ಮೂರು ಪಟ್ಟು ಅಧಿಕ ಅನುದಾನ ಎನ್‌ಡಿಎ ಅವಧಿಯಲ್ಲಿ ನೀಡಲಾಗಿದೆ. ಸುಖಾಸುಮ್ಮನೆ ಜನರನ್ನು ಗೊಂದಲಕ್ಕೀಡುಮಾಡುವ ಕೆಲಸಕ್ಕೆ ಕಾಂಗ್ರೆಸ್ ಸರ್ಕಾರ ಮುಂದಾಗಿದೆ.
–ವಿಪಕ್ಷ ಬಿಜೆಪಿ ಆಕ್ರೋಶ

ಬೆಂಗಳೂರು, ಫೆ.6 (ಕೆಎಂಶಿ)– ಕೇಂದ್ರದ ಮಲತಾಯಿ ಧೋರಣೆ ಖಂಡಿಸಿ, ಇತಿಹಾಸದಲ್ಲೇ ಮೊದಲ ಬಾರಿಗೆ ಕರ್ನಾಟಕ ರಾಜ್ಯ ಸರ್ಕಾರ ದೆಹಲಿಯಲ್ಲಿ ನಾಳೆ ಧರಣಿ ನಡೆಸುತ್ತಿದೆ.

ಸರ್ಕಾರದ ಈ ನಿಲುವನ್ನು ಪ್ರತಿಪಕ್ಷಗಳು ರಾಜಕೀಯ ಪ್ರೇರಿತ ಎನ್ನುವುದರ ಜೊತೆಗೆ ಅಯೋಧ್ಯೆಯ ಬಾಲರಾಮನ ಪ್ರಾಣ ಪ್ರತಿಷ್ಠೆಯ ಯಶಸ್ಸು ಮತ್ತು ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸಿನ ಓಟಕ್ಕೆ ಕಡಿವಾಣ ಹಾಕಲು ಇಂಡಿಯಾ ಒಕ್ಕೂಟಕ್ಕೆ ಸೇರಿದ ರಾಜ್ಯಗಳ ಮುಖ್ಯಮಂತ್ರಿಗಳು ಸಾರ್ವಜನಿಕರ ಗಮನ ಬೇರೆಡೆ ಸೆಳೆಯಲು ಮಾಡುತ್ತಿರುವ ಹೋರಾಟ ಇದಾಗಿದೆ. ಒಂದಲ್ಲಾ ಒಂದು ಕಾರಣಕ್ಕೆ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ಇಲ್ಲವೇ ಆ ರಾಜ್ಯದ ಸಂಸದರು ಪ್ರತಿಭಟನೆಗಳನ್ನು ಸಾಂಕೇತಿಕವಾಗಿ ನಡೆಸಿರುವ ಉದಾಹರಣೆಗಳಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷದ ಎಲ್ಲಾ ಹಂತದ ಜನಪ್ರತಿನಿಧಿಗಳು ನಾಳೆ ಕೇಂದ್ರದ ವಿರುದ್ಧ ದೆಹಲಿಯ ಜಂತರ್–ಮಂತರ್‌ನಲ್ಲಿ ಧರಣಿ ನಡೆಸಿ ರಾಷ್ಟ್ರದ ಗಮನ ಸೆಳೆಯಲು ಮುಂದಾಗಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ಪ್ರಸಕ್ತ ಸಾಲಿನ ಕೊನೆಯ ಮುಂಗಡಪತ್ರದಲ್ಲಿ ರಾಜ್ಯ ಸರ್ಕಾರಕ್ಕೆ ನೀಡಬೇಕಾದ ಅನುದಾನದಲ್ಲಿ ಕೊರತೆ ಮತ್ತು ತಮ್ಮ ಪಾಲಿನ ಹಣವನ್ನು ●9ನೇ ಪುಟಕ್ಕೆ

ಬನ್ನಿ, ಬೆಂಬಲಿಸಿ

ಕೇಂದ್ರ ಬಿಜೆಪಿ ಸಚಿವರು, ಕಾಂಗ್ರೆಸ್ ನಾಯಕರಿಗೆ ಸಿಎಂ ಪತ್ರ

ಕೇಂದ್ರ ಸರ್ಕಾರದ ಮಲತಾಯಿ ಧೋರಣೆ ವಿರೋಧಿಸಿ ನಾಳೆ ದೆಹಲಿಯ ಜಂತರ್–ಮಂತರ್‌ನಲ್ಲಿ ಆಯೋಜಿಸಿರುವ ಪ್ರತಿಭಟನೆಯಲ್ಲಿ ಪಾಲ್ಗೊಂಡು ರಾಜ್ಯದ ಪರ ನಿಲ್ಲುವಂತೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ, ಮಾಜಿ ಪ್ರಧಾನಿ ದೇವೇಗೌಡರು, ರಾಜ್ಯಸಭೆಯ ಪ್ರತಿಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಕೇಂದ್ರ ಸಚಿವರು, ●9ನೇ ಪುಟಕ್ಕೆ





ಪರೀಕ್ಷಾ ಅಕ್ರಮಕ್ಕೆ 10 ವರ್ಷ ಜೈಲು, ಕೋಟಿ ರೂ. ದಂಡ

ಕೇಂದ್ರದಿಂದ ಮಹತ್ವದ ವಿಧೇಯಕ ಅಂಗೀಕಾರ



ನವದೆಹಲಿ: ಸರ್ಕಾರಿ ನೇಮಕಾತಿ ಪರೀಕ್ಷೆಗಳಲ್ಲಿನ ಅಕ್ರಮಗಳ ವಿರುದ್ಧ ಕಠಿಣವಾಗಿ ವ್ಯವಹರಿಸುವ ಮಸೂದೆಯನ್ನು ಲೋಕಸಭೆ ಮಂಗಳವಾರ ಅಂಗೀಕರಿಸಿದ್ದು, ಈ ಮೂಲಕ ಸರ್ಕಾರಿ ಪರೀಕ್ಷಾ ಅಕ್ರಮ ಸಾಬೀತಾದರೆ ಗರಿಷ್ಠ 10 ವರ್ಷಗಳ ಜೈಲು ಶಿಕ್ಷೆ ಮತ್ತು 1 ಕೋಟಿ ರೂ ದಂಡ ವಿಧಿಸಲಾಗುತ್ತದೆ.

ವಿರೋಧ ಪಕ್ಷದ ಸದಸ್ಯರು ಪ್ರಸ್ತಾಪಿಸಿದ ಕೆಲವು ತಿದ್ದುಪಡಿಗಳನ್ನು ತಿರಸ್ಕರಿಸಿದ ನಂತರ ಲೋಕಸಭೆಯು ಮಸೂದೆಯನ್ನು ಅಂಗೀಕರಿಸಿತು. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಕಲು, ಅಕ್ರಮ ತಡೆಗಾಗಿ ಕೇಂದ್ರ ಸರ್ಕಾರವು ಲೋಕಸಭೆಯಲ್ಲಿ ಮಂಡಿಸಿದ ಸಾರ್ವಜನಿಕ ಪರೀಕ್ಷೆ (ಅಕ್ರಮಗಳ ತಡೆ) ವಿಧೇಯಕಕ್ಕೆ ಅಂಗೀಕಾರ ದೊರೆತಿದೆ. ಬಳಿಕ ರಾಜ್ಯಸಭೆಯಲ್ಲಿ ಮಂಡಿಸಲಾಗುತ್ತದೆ. ಅಲ್ಲಿಯೂ ಅಂಗೀಕಾರ ದೊರೆತ ನಂತರ ರಾಷ್ಟ್ರಪತಿ ಸಹಿಗೆ ಕಳುಹಿಸಲಾಗುತ್ತದೆ. ರಾಷ್ಟ್ರಪತಿ ಅಂಗೀಕಾರದ ಬಳಿಕ ವಿಧೇಯಕವು ಕಾಯ್ದೆಯಾಗಿ ಜಾರಿಗೆ ಬರಲಿದೆ. ಸ್ಪರ್ಧಾತ್ಮಕ ಪರೀಕ್ಷೆ ನಡೆಯುವ ವೇಳೆ ನಕಲು ಮಾಡಿದವರು, ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಮಾಡಿದವರು ಸೇರಿ ಹಲವು ರೀತಿಯ ಅಕ್ರಮ ಎಸಗಿದವರಿಗೆ ಕಠಿಣ ಶಿಕ್ಷೆ ವಿಧಿಸುವ ದಿಸೆಯಲ್ಲಿ ವಿಧೇಯಕ ಮಂಡಿಸಲಾಗಿದೆ. ಕರ್ನಾಟಕದಲ್ಲಿ ಭುಗಿಲೆದ್ದ ಪಿಎಸ್‌ಐ ನೇಮಕಾತಿ ಹಗರಣವು ದೇಶಾದ್ಯಂತ ಸುದ್ದಿಯಾದ ಬೆನ್ನಲ್ಲೇ ಕೇಂದ್ರ ಸರ್ಕಾರ ಹೊಸ ವಿಧೇಯಕ ಮಂಡಿಸಿರುವುದು ಮಹತ್ವ ಪಡೆದಿದೆ. ●9ನೇ ಪುಟಕ್ಕೆ



ಮೈಸೂರು ಮಿತ್ರ ಬುಧವಾರ 7 ಫೆಬ್ರವರಿ 2024

ರಾಜ್ಯಮಟ್ಟದ ಗಾಂಧಿ ಪ್ರಬಂಧ ಸ್ಪರ್ಧೆ

ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಬಹುಮಾನ ಪಡೆದ ಜೆಎಸ್‌ಎಸ್ ಕಾಲೇಜು ವಿದ್ಯಾರ್ಥಿನಿ ಕುಸುಮಾ ಬಾಯಿ



ಪ್ರಬಂಧ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ಮೈಸೂರಿನ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನ ತೃತೀಯ ವರ್ಷದ ವಿದ್ಯಾರ್ಥಿನಿ ಕುಸುಮಾ ಬಾಯಿ ಮುಖ್ಯಮಂತ್ರಿಗಳಿಂದ ಪ್ರಶಸ್ತಿ ಹಾಗೂ ನಗದು ಬಹುಮಾನ ಸ್ವೀಕರಿಸಿದರು.

ಮೈಸೂರು,ಫೆ.6–ನಗರದ ಜೆಎಸ್‌ಎಸ್ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಕಾಲೇಜಿನ ತೃತೀಯ ವರ್ಷದ ವಿದ್ಯಾರ್ಥಿನಿ ಕುಸುಮಾಬಾಯಿ ಮುಖ್ಯಮಂತ್ರಿಗಳಿಂದ ಪ್ರಶಸ್ತಿ, ನಗದು ಬಹುಮಾನ ಸ್ವೀಕರಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮೈಸೂರು ವತಿಯಿಂದ ಗಾಂಧಿ ಜಯಂತಿ ಅಂಗವಾಗಿ ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿತ್ತು. ಪದವಿ ವಿಭಾಗದಲ್ಲಿ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ಜೆಎಸ್‌ಎಸ್ ಕಾಲೇಜಿನ ತೃತೀಯ ಬಿಎಸ್ಸಿ ವಿದ್ಯಾರ್ಥಿನಿ ಕುಸುಮಬಾಯಿ ಪ್ರಬಂಧ ರಾಜ್ಯಮಟ್ಟಕ್ಕೆ ಆಯ್ಕೆಯಾಗಿ, ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಗಳಿಸಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ವಿದ್ಯಾರ್ಥಿನಿಗೆ ಪ್ರಶಸ್ತಿ ಹಾಗೂ ನಗದು ಬಹುಮಾನ 11 ಸಾವಿರ ರೂ.ಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಾರ್ಯದರ್ಶಿ ಕೆ.ವಿ.ತ್ರಿಲೋಕ ಚಂದ್ರ, ಆಯುಕ್ತರಾದ ಹೇಮಂತ್ ನಿಂಬಾಳ್ಕರ್, ಜಂಟಿ ನಿರ್ದೇಶಕ ಮಂಜುನಾಥ್ ಡೊಳ್ಳಿನ್ ಇನ್ನಿತರರು ಉಪಸ್ಥಿತರಿದ್ದರು.

ಫೆ.10, ಕಾಯಕ ಶರಣರ ಜಯಂತಿ ಅರ್ಥಪೂರ್ಣವಾಗಿ ಆಚರಣೆ




ಮೈಸೂರು ಡಿಸಿ ಕಚೇರಿಯಲ್ಲಿ ನಡೆದ ಕಾಯಕ ಶರಣರ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಎಡಿಸಿ ಆರ್.ಲೋಕನಾಥ್ ಮಾತನಾಡಿದರು.

ಮೈಸೂರು, ಫೆ.6– ಕಾಯಕ ಶರಣರ ಜಯಂತಿಯನ್ನು ಫೆ10ರಂದು ಬೆಳಗ್ಗೆ 11.30 ಗಂಟೆಗೆ ಕಿರುರಂಗಮಂದಿರದಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲು ಅಧಿಕಾರಿಗಳಿಗೆ ಅಪರ ಜಿಲ್ಲಾಧಿಕಾರಿ ಆರ್.ಲೋಕನಾಥ್ ತಿಳಿಸಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ನಡೆದ ಕಾಯಕ ಶರಣರ ಜಯಂತಿ ಆಚರಣೆ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಮಾತನಾಡಿ, ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಕಲಾತಂಡಗಳಿಂದ ಪ್ರದರ್ಶನ ಏರ್ಪಡಿಸಲಾಗುವುದು. ಆಹ್ವಾನ ಪತ್ರಿಕೆಯ ಮುದ್ರಣ ಮಾಡಿ ಸರ್ಕಾರದ ಶಿಷ್ಟಾಚಾರದಂತೆ ಜನಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಸಂಬಂಧ ಸಮಿತಿಯವರು ಸಹಕರಿಸಬೇಕು ಎಂದರು. ಸಭೆಯಲ್ಲಿ ಕರುನಾಡ ಸರ್ವೋದಯ ಸೇನೆಯ ಎಸ್.ವಿ.ರೇವನಾಯ್ಕಾ, ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷೆ ಭಾನು ಮೋಹನ್, ಮಾನವ ಹಕ್ಕುಗಳ ಜಾಗೃತಿ ದಳದ ಎಸ್.ಮೋಹನ್, ತನುಮನ ಸಂಸ್ಥೆಯ ಲಕ್ಷ್ಮೀರಾಮ್, ಮೈಸೂರು ಕನ್ನಡ ವೇದಿಕೆಯ ಎಸ್.ಬಾಲಕೃಷ್ಣ, ಚಿಕ್ಕ ಜವರಪ್ಪ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

> ಕಾಯಕ ಶರಣರ ಜಯಂತಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ಮಾಡಲು ಅಗತ್ಯ ಕ್ರಮ ವಹಿಸಲಾಗುವುದು. ಜಯಂತಿ ಆಚರಣೆ ಕಾರ್ಯಕ್ರಮ ನಡೆಯುವ ಸ್ಥಳದ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಶಾಮಿಯಾನ ವ್ಯವಸ್ಥೆ ಮಾಡಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಳ್ಳಿ
> –ಆರ್.ಲೋಕನಾಥ್, ಎಡಿಸಿ.



ಮೈಸೂರು, ಚಾಮರಾಜನಗರ ಜಿಲ್ಲಾ ಶಿಕ್ಷಣ ಇಲಾಖೆ ಪ್ರಗತಿ ಪರಿಶೀಲನಾ ಸಭೆ ಸಂಬಂಧ ಮೈಸೂರು ನಗರಕ್ಕೆ ಆಗಮಿಸಿದ್ದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಅವರನ್ನು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅಭಿನಂದಿಸಿದರು. ಈ ವೇಳೆ ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಕೆಪಿಸಿಸಿ ಸದಸ್ಯರಾದ ನಜರ್‌ಬಾದ್ ನಟರಾಜ್, ಚಂದ್ರಶೇಖರ್ ಇತರರು ಉಪಸ್ಥಿತರಿದ್ದರು.



ಕಾವೇರಿ ನ್ಯಾಯಮಂಡಳಿ ತೀರ್ಪಿನ ವಿರುದ್ಧ 92 ದಿನದಿಂದ ಕಾವೇರಿ ಕ್ರಿಯಾ ಸಮಿತಿ ನಡೆಸುತ್ತಿರುವ ಧರಣಿ ಸತ್ಯಾಗ್ರಹದಲ್ಲಿ ಸಾರ್ವಜನಿಕರು, ವಿದ್ಯಾರ್ಥಿಗಳು, ರೈತರು, ಮಹಿಳೆಯರಿಂದ ಸಹಿ ಸಂಗ್ರಹಿಸಿ, ಪ್ರಧಾನಿಗಳಿಗೆ ಮನವಿ ಪತ್ರ ಸಲ್ಲಿಸುವ ಕಾರ್ಯಕ್ರಮ ಸಮಿತಿ ಅಧ್ಯಕ್ಷ ಎಸ್.ಜಯಪ್ರಕಾಶ್ (ಜೆಪಿ) ನೇತೃತ್ವದಲ್ಲಿ ಪುರಭವನದ ಆವರಣದಲ್ಲಿ ಮಂಗಳವಾರ ನಡೆಯಿತು. ಈ ವೇಳೆ ಮೆಲ್ಲಹಳ್ಳಿ ಮಹದೇವಸ್ವಾಮಿ, ಸುರೇಶ್‌ಗೌಡ, ಸಿಂಧುವಳ್ಳಿ ಶಿವಕುಮಾರ್, ರಾಜಶೇಖರ್, ಕೃಷ್ಣಪ್ಪ ನಾಗರಾಜು, ಆಟೋ ಮಹದೇವು, ಹೊನ್ನೇಗೌಡ, ವಿಷ್ಣು, ಡಾ.ರಾಜ್ ಸಂಘದ ಮಹದೇವಸ್ವಾಮಿ, ಪುಷ್ಪವತಿ, ಮಹೇಶ್ ಗೌಡ, ಸಂಜಯ್, ಮಂಜುಳಾ, ಅಶೋಕ್, ಶ್ರೀನಿವಾಸ್ ಇನ್ನಿತರರು ಇದ್ದರು.

ರಾಜ್ಯಮಟ್ಟದ ಮುಳ್ಳೂರು ನಾಗರಾಜ ಕಾವ್ಯ ಪ್ರಶಸ್ತಿಗೆ ಕೃತಿಗಳ ಆಹ್ವಾನ

ಮೈಸೂರು,ಫೆ.6–ಚಾಮರಾಜನಗರದ ರಂಗವಾಹಿನಿ ಸಂಸ್ಥೆಯು 2023ನೇ ಸಾಲಿನ 12ನೇ ವರ್ಷದ ಮುಳ್ಳೂರು ನಾಗರಾಜ ರಾಜ್ಯಮಟ್ಟದ ಕಾವ್ಯ ಪ್ರಶಸ್ತಿಗೆ ಕವನ ಸಂಕಲನಗಳನ್ನು ಆಹ್ವಾನಿಸಿದೆ. ಕವನ ಸಂಕಲನ 2022ರಲ್ಲಿ ಪ್ರಕಟಗೊಂಡಿರಬೇಕು. ಮಾರ್ಚ್ ತಿಂಗಳ 2ನೇ ಶನಿವಾರದಂದು ಮೈಸೂರಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು 10 ಸಾವಿರ ರೂ. ನಗದು, ಪ್ರಶಸ್ತಿ ಫಲಕ ಒಳಗೊಂಡಿರುತ್ತದೆ. ಆಸಕ್ತರು ತಮ್ಮ ಭಾವಚಿತ್ರ, ಕಿರು ಪರಿಚಯದೊಂದಿಗೆ ಕವನ ಸಂಕಲನದ 4 ಪ್ರತಿಗಳನ್ನು ಸಿ.ಎಂ.ನರಸಿಂಹಮೂರ್ತಿ, ಅಧ್ಯಕ್ಷರು, ರಂಗವಾಹಿನಿ, ಜಯದೇಗುಲ, 10ನೇ ಕ್ರಾಸ್, ಕೋರ್ಟ್ ಎದುರು, ಚಾಮರಾಜನಗರ ಈ ವಿಳಾಸಕ್ಕೆ ಫೆ26ರೊಳಗೆ ಸಲ್ಲಿಸಲು ಕೋರಲಾಗಿದೆ. ಮಾಹಿತಿಗೆ ಮೊ.9916115263 ಸಂಪರ್ಕಿಸಬಹುದು.

ಮೈಸೂರು–ಬೆಂಗಳೂರು ನಡುವೆ ಓಡುತ್ತಿವೆ 15 'ಅಶ್ವಮೇಧ'

ಮೈಸೂರು, ಫೆ. 6(ಆರ್‌ಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಬೆಂಗಳೂರಿನ ವಿಧಾನಸೌಧದ ಮುಂದೆ ಚಾಲನೆ ನೀಡಿದ ಸುಧಾರಿತ 'ಅಶ್ವಮೇಧ ಕ್ಲಾಸಿಕ್' ಬಸ್‌ಗಳಲ್ಲಿ 15 ಬಸ್ ಮೈಸೂರು–ಬೆಂಗಳೂರು ಸಂಚಾರ ಆರಂಭಿಸಿವೆ.

ಅವು ಪ್ರತೀದಿನ 30 ಟ್ರಿಪ್‌ಗಳಲ್ಲಿ ಸಂಚರಿಸಲಿವೆ. ಅಲ್ಲದೆ, ಬೆಂಗಳೂರು ಘಟಕದ 10 ಬಸ್‌ಗಳು 20 ಟ್ರಿಪ್ ಮಾಡಲಿವೆ ಎಂದು ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಬಿ.ಶ್ರೀನಿವಾಸ್ ತಿಳಿಸಿದ್ದಾರೆ. ಮೈಸೂರು–ಬೆಂಗಳೂರು ನಡುವೆ ಒಬ್ಬರಿಗೆ 185 ರೂ. ಪ್ರಯಾಣ ದರ ನಿಗದಿಪಡಿಸಲಾಗಿದ್ದು, ಸಾಮಾನ್ಯ ಬಸ್‌ಗಳಂತೆ ಅಶ್ವಮೇಧ ಕ್ಲಾಸಿಕ್ ಬಸ್‌ಗಳಲ್ಲೂ ಮಹಿಳೆಯರಿಗೆ ಉಚಿತ ಪ್ರಯಾಣದ ಅವಕಾಶ ಕಲ್ಪಿಸಲಾಗಿದೆ. ಸೋಮವಾರ ಮಧ್ಯಾಹ್ನದಿಂದಲೇ ಬಸ್‌ಗಳು ಸೇವೆ ಆರಂಭಿಸಿದ್ದು, ಪ್ರಯಾಣಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ. 50 ಆಸನಗಳಿರುವ ಅಶ್ವಮೇಧ ಬಸ್‌ನಲ್ಲಿ ಪ್ಯಾನಿಕ್ ಬಟನ್ ಇದ್ದು, ತುರ್ತು ಸಂದರ್ಭದಲ್ಲಿ ಈ ಬಟನ್ ಒತ್ತಿದರೆ ಮಾಹಿತಿಯು ವ್ಯಾಪ್ತಿಯ ಪೊಲೀಸ್ ಠಾಣೆ, ಸಾರಿಗೆ ಸಂಸ್ಥೆಗೂ ತಲುಪುತ್ತದೆ.

ಪ್ರಯಾಣ ದರ 185 ರೂ.

ಲೊಕೇಷನ್ ಟ್ರ್ಯಾಕಿಂಗ್ ಯೂನಿ, ಮುಂದೆ–ಹಿಂದೆ ಕ್ಯಾಮರಾ ಅಳವಡಿಸಲಾಗಿದೆ. ಎಲ್‌ಇಡಿ ಡೆಸ್ಟಿನೇಷನ್ ಬೋರ್ಡ್, ಉತ್ತಮ ಗುಣಮಟ್ಟದ ಕುಷನ್ ಸೀಟುಗಳು, ವಿಶಾಲ ಸ್ಥಳಾವಕಾಶ, ಅಗಲವಾದ ಕಿಟಕಿ ಗಾಜುಗಳು, ಮ್ಯಾಗಜಿನ್, ವಾಟರ್ ಬಾಟಲ್ ಪೌಚ್‌ಗಳು, ವಿಶಾಲ ಲೆಗ್ ಸ್ಪೇಸ್ ಹೊಂದಿದ್ದು, ಪ್ರಯಾಣ ಸುಖಕರವಾಗಿರುತ್ತದೆ ಎಂದು ತಿಳಿಸಿದ್ದಾರೆ.

ಮೈಸೂರು–ಬೆಂಗಳೂರು ನಡುವೆ ಸಂಚರಿಸುತ್ತಿರುವ ಅಶ್ವಮೇಧ ಕ್ಲಾಸಿಕ್ ಬಸ್‌ಗಳಿಗೆ ಭಾರಿ ಬೇಡಿಕೆ ಇದ್ದು, ಎಲ್ಲಾ ಟ್ರಿಪ್‌ಗಳಲ್ಲೂ ಆಸನಗಳು ಭರ್ತಿಯಾಗುತ್ತಿವೆ. ಮೈಸೂರು ವಿಭಾಗಕ್ಕೆ ಹೆಚ್ಚುವರಿ 30 ಎಲೆಕ್ಟ್ರಿಕ್ ಬಸ್‌ಗಳು ಮಂಜೂರಾಗಿದ್ದು, ಅವುಗಳು ಮೈಸೂರು ನಗರದಿಂದ ಜಿಲ್ಲೆಯ ಎಲ್ಲಾ ತಾಲೂಕು ಕೇಂದ್ರಗಳಿಗೆ ಸಂಚಾರ ಸೇವೆ ಒದಗಿಸಲಿವೆ ಎಂದರು.



ಕೆಎಸ್‌ಆರ್‌ಟಿಸಿ ಅಶ್ವಮೇಧ ಕ್ಲಾಸಿಕ್ ಬಸ್‌ನ ಹೊರ ವಿನ್ಯಾಸ.



ಕೆಎಸ್‌ಆರ್‌ಟಿಸಿ ಅಶ್ವಮೇಧ ಕ್ಲಾಸಿಕ್ ಬಸ್‌ನಲ್ಲಿರುವ ಪ್ರಯಾಣಿಕರು.

> ತಾಲೂಕು ಕೇಂದ್ರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ ಚಾರ್ಜಿಂಗ್ ಘಟಕ ಸ್ಥಾಪಿಸಿದ ನಂತರ ಇ–ಬಸ್ ಸೇವೆ ಆರಂಭವಾಗಲಿದೆ. ಹಾಗೆಯೇ ಕೇಂದ್ರ ಸರ್ಕಾರದ ಯೋಜನೆಯಡಿ ಮೈಸೂರು ನಗರಕ್ಕೆ 100 ಇ–ಬಸ್ ಒದಗಿಸಲು ಸಿದ್ಧತೆ ನಡೆಸಲಾಗಿದೆ. ಅವು ಬಂದ ಮೇಲೆ ಅವಧಿ ಮೀರಿರುವ ಸಿಟಿ ಬಸ್‌ಗಳ ಸೇವೆಯನ್ನು ಸ್ಥಗಿತಗೊಳಿಸಲಾಗುವುದು.
> –ಬಿ.ಶ್ರೀನಿವಾಸ್, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ



ಕೆಎಸ್‌ಆರ್‌ಟಿಸಿ ಅಶ್ವಮೇಧ ಕ್ಲಾಸಿಕ್ ಬಸ್‌ನ ಒಳ ವಿನ್ಯಾಸ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.2.2024 ಬುಧವಾರ, ಮಳೆ ನಕ್ಷತ್ರ: ಧನಿಷ್ಠ 6.2.2024ರಿಂದ 19.02.2024
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯನ, ಹೇಮಂತ ಋತು, ಪುಷ್ಯ ಮಾಸ, ಕೃಷ್ಣ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಪೂಷಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಚಾಯ್ಸ್ ಈಕ್ವಿಟಿ ಗಳಿಕೆ–ಉಳಿಕೆ–ಹೂಡಿಕೆ–ಹಣಕಾಸಿನ ಮಾಹಿತಿಯ ಬಾನುಲಿ ಸರಣಿ, ಪ್ರಸ್ತುತಿ–ಮೂಕನಹಳ್ಳಿ ರಂಗಸ್ವಾಮಿ, 6.40 ಪದ ಸಂಸ್ಕೃತಿ–ಡಾ. ಸಂಗಮೇಶ್ ಸವದತ್ತಿಮಠ, 6.50 ರೈತರಿಗೆ ಸಲಹೆ, 7.15 ಆರೋಗ್ಯವಾಣಿ–ಪ್ರಾಯೋಜಿತ ಕಾರ್ಯಕ್ರಮ, 9.00 ವೃತ್ತಿ ಮಾರ್ಗದರ್ಶನ, 10.00 ಹಿಂದೂಸ್ಥಾನಿ ಸಂಗೀತ–ಪಂಡಿತ್ ವೆಂಕಟೇಶ್‌ಕುಮಾರ್–ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಮಧ್ಯಾಹ್ನ: 12.30 ದೇವರನಾಮ, 12.45 ನಪದ ಸಂಗೀತ–ದುದ್ದ ಹೋಬಳಿ ಮಲ್ಲನಾಯಕನ ಕಟ್ಟೆಯ ಸಾಕಮ್ಮ ಮತ್ತು ಸಂಗಡಿಗರು–ಸೋಬಾನೆ ಪದ, 1.20 ಭಾವಗೀತೆಗಳು–ರಾಮಕೃಷ್ಣ, 3.00 ಬಾಲಾಜಿ ಶಂಕರ್–ಹಾಡುಗಾರಿಕೆ, 4.00ಮಹಿಳಾರಂಗ–ಸ್ತ್ರೀ ಚೇತನ–ಭಾಗವಹಿಸುವವರು "ಹವ್ಯಾಸಿಗಳ ತಾಣ"ದ ಸಂಸ್ಥಾಪಕಿ ಸವಿತಾ ಶಣೈ ಪ್ರಸ್ತುತಿ–ಎಂ.ಎಸ್. ಭಾರತಿ, 4.45 ಹಿಂದಿ ಪಾಠ, ಪ್ರಸ್ತುತಿ– ಡಾ.ಈಶ್ವರ ಭಟ್, 6.50ಕೃಷಿರಂಗ–ಸಾವಯವ ಉತ್ಪನ್ನಗಳಿಗೆ ಮಾರುಕಟ್ಟೆ ಅವಕಾಶಗಳು ಕುರಿತು ಈ ಕುರಿತು ಮೈಸೂರಿನ ಡಾ.ಚೈತ್ರಾಭರತ್ ಅವರೊಂದಿಗೆ ಸಂದರ್ಶನ, 9.30 ಹಿಂದೂಸ್ಥಾನಿ ಸಂಗೀತ– ನಿಖಿಲ್ ಬ್ಯಾನರ್ಜಿ–ಸಿತಾರ್ ವಾದನ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಧುಮೇಹದ ಗಾಯಗಳ ಬಗ್ಗೆ ಚಿಕಿತ್ಸಾ ಶಿಬಿರ, ತೀವ್ರ ತಲೆನೋವು, ಮೈಗ್ರೇನ್ ತಲೆನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ ಸಂಜೆ 4.30 ಗಂಟೆವರೆಗೆ.

■ **ರಾಮ್‌ಸನ್ಸ್ ಬೊಂಬೆ ಮನೆ :** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ ಸಂಜೆ 7ರವರೆಗೆ

■ **ವಿದ್ಯಾವರ್ಧಕ ಕಾನೂನು ಕಾಲೇಜು:** ಎನ್.ನಂಜೇಗೌಡ ಪ್ರಥಮ ಮೆಮೋರಿಯಲ್ ಉಪನ್ಯಾಸ, 50 ವರ್ಷಗಳ ಮೂಲ ರಚನೆಯ ಸಿದ್ಧಾಂತ: ಕೇಶವಾನಂದ ಭಾರತಿ ಪ್ರಕರಣ ಮರು ಪರಿಶೀಲಿಸುವುದು ಕುರಿತು ಉಪನ್ಯಾಸ, ಉದ್ಘಾಟನೆ: ಹೈಕೋರ್ಟ್ ನಿವೃತ್ತ ನ್ಯಾಯಾಧೀಶ ಹೆಚ್.ಎನ್.ನಾಗಮೋಹನ್ ದಾಸ್, ಅಧ್ಯಕ್ಷತೆ: ಗುಂಡಪ್ಪಗೌಡ, ಸ್ಥಳ: ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ದೀಪಾ ಸಂಯುಕ್ತ ಪದವಿಪೂರ್ವ ಕಾಲೇಜು :** ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ, ಉದ್ಘಾಟನೆ : ಮೈಸೂರು ಜಿಲ್ಲಾ ಮಹಿಳಾ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷೆ ಶ್ರೀಮತಿ ಮಂಜುಳಾ ಮಾನಸ, ಅಧ್ಯಕ್ಷತೆ : ಕಾಲೇಜು ಅಧ್ಯಕ್ಷ ಎಂ. ರಾಮಪ್ಪ, ಸ್ಥಳ: ವಿವೇಕಾನಂದ ಸಭಾಂಗಣ, ಕಾಲೇಜು ಆವರಣ, ರೂಪಾನಗರ, ಬೆಳಗ್ಗೆ 11ಕ್ಕೆ.

■ **ಮಾತೃಮಂಡಲಿ ಬಾಲಕಿಯರ ಪದವಿಪೂರ್ವ ಕಾಲೇಜು:** ವಾರ್ಷಿಕೋತ್ಸವ ಸಮಾರಂಭ, ಉದ್ಘಾಟನೆ: ಶ್ರೀ ಮಹಾಮೇದಾನಂದಜೀ ಸ್ವಾಮೀಜಿ, ಮುಖ್ಯ ಅತಿಥಿಗಳು: ಪದವಿಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಎಂ.ಮರಿಸ್ವಾಮಿ, ರಂಗಕರ್ಮಿ ರಾಮೇಶ್ವರಿ ವರ್ಮ, ಕಾಲೇಜು ಕಾರ್ಯದರ್ಶಿ ಎಚ್.ಎ.ವಾಣಿ, ಖಜಾಂಚಿ ವಿಜಯಲಕ್ಷ್ಮಿ ಮುರಳೀಧರ್, ಅಧ್ಯಕ್ಷತೆ : ಮಾತೃಮಂಡಲಿ ವಿದ್ಯಾಸಂಸ್ಥೆ ಅಧ್ಯಕ್ಷೆ ಎಂ. ವಿಜಯಲಕ್ಷ್ಮಿ ಅರಸ್, ಸ್ಥಳ: ವಜ್ರ ಮಹೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ತ್ಯಾಗರಾಜ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ :** ಶ್ರೀ ಪುರಂದರದಾಸರ ಮತ್ತು ಶ್ರೀ ತ್ಯಾಗರಾಜರ ಆರಾಧನೆ ಪ್ರಯುಕ್ತ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ, ಸಂಜೆ 6 ರಿಂದ ಅಮೃತಾ ತಾರಕೇಶ್ ಅವರಿಂದ ಗಾಯನ, ಸಂಜೆ 7.15 ರಿಂದ ಸುಷ್ಮಾ ದೀಪಕ್ ಅವರಿಂದ ಗಾಯನ, ತುಮಕೂರು ಯಶಸ್ವಿ–ಪಿಟೀಲು, ಶುಭಾಂಗ್ ಸಾಮಗ–ಮೃದಂಗ, ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ, ಕೇಂದ್ರ ಗೃಹ ಸಚಿವಾಲಯ, ನೆಹರು ಯುವ ಕೇಂದ್ರ ಸಂಘಟನೆ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ:** 15ನೇ ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು: ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್, ಕೈಪಿಡಿ ಬಿಡುಗಡೆ: ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಬಿ.ನಾಗೇಂದ್ರ, ಅಧ್ಯಕ್ಷತೆ: ಶಾಸಕ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು: ಶಾಸಕ ಸಿ.ಅನಿಲ್ ಚಿಕ್ಕಮಾದು, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಎಚ್.ವಿಶ್ವನಾಥ್, ಮರಿತಿಬ್ಬೇಗೌಡ, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ. ಮಾದೇಗೌಡ, ಡಿ.ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ, ಟಿ.ಎಸ್. ಶ್ರೀವತ್ಸ, ಕರಾಮುವಿವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ, ಸ್ಥಳ: ಕಾವೇರಿ ಸಭಾಂಗಣ, ಮುಕ್ತ ಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಸದ್ವಿದ್ಯಾ ಪ್ರೌಢಶಾಲೆ:** 2023ರ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪುದುವಟ್ಟು ಬಹುಮಾನಗಳ ವಿತರಣಾ ಸಮಾರಂಭ, ಸ್ಥಳ: ಟಿ.ಪಿ.ಕೈಲಾಸಂ ರಂಗ ಮಂಟಪ, ವಿದ್ಯಾಸಂಸ್ಥೆ ಆವರಣ, ಮಧ್ಯಾಹ್ನ 2ಕ್ಕೆ.

■ **ಅಭಿವಕ್ತಾ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ್ಯ, ಮೈಸೂರು ಜಿಲ್ಲಾ ಘಟಕ, ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್:** ಸ್ವಾಮಿ ವಿವೇಕಾನಂದ ಜಯಂತಿ ಪ್ರಯುಕ್ತ ಯುವ ವಕೀಲರ ದಿನ, ಉದ್ಘಾಟನೆ: ಸಾಮಾಜಿಕ ಕಾರ್ಯಕರ್ತ ಅಕ್ಷಯ್, ವಿಶೇಷ ಆಹ್ವಾನಿತರು: ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್ ಅಧ್ಯಕ್ಷ ಡಿ. ರವಿಕುಮಾರ್, ಪ್ರಾಂತ್ಯ ರಾಜ್ಯ ಉಪಾಧ್ಯಕ್ಷ ಬಿ.ಜೆ.ರೋಹಿತ್‌ಗೌಡ, ಕಾರ್ಯದರ್ಶಿ ಎನ್.ಎಸ್.ಚೇತನ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಂ.ಎಸ್.ಪಣೀಚೇತನ್, ಯುವ ಸಂದೇಶ: ಸಮಾಜ ಸೇವಕ ಎಸ್.ಬಿ. ನಿತ್ಯಾನಂದ ವಿವೇಕಾವಂಶಿ, ಅಧ್ಯಕ್ಷತೆ: ಪ್ರಾಂತ್ಯ ಅಧ್ಯಕ್ಷೆ ವಿ.ಶಾರದಾ, ಸ್ಥಳ: ನೇಗಿಲಯೋಗಿ ಸಮಾಜ ಸೇವಾ ಟ್ರಸ್ಟ್, ಹೊಸ ನ್ಯಾಯಾಲಯಗಳ ಸಂಕೀರ್ಣದ ಮುಂಭಾಗ, ಸಂಜೆ 4.15ಕ್ಕೆ.

■ **ಭಾರತೀಯ ರಂಗ ಶಿಕ್ಷಣ ಕೇಂದ್ರ, ರಂಗಾಯಣ, ಶ್ರೀ ಗುಬ್ಬಿ ವೀರಣ್ಣ ಅಧ್ಯಯನ ಪೀಠ, ವಿವಿ ಲಲಿತ ಕಲಾ ಕಾಲೇಜು, ಡಾ॥ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿವಿ:** ರಂಗ ಸಂಯುಕ್ತ, ರಂಗಭೂಮಿ ಹಾಗೂ ರಂಗಭೂಮಿಯ ಪೂರಕ ಕಲೆಗಳ ಉಪನ್ಯಾಸ ಮಾಲಿಕೆ, ಗಾಯಕಿ ಎಂ.ಡಿ.ಪಲ್ಲವಿ ಅವರಿಂದ ಗಾಯನ ಕುರಿತು ಉಪನ್ಯಾಸ, ಸ್ಥಳ: ಬಿ.ವಿ. ಕಾರಂತ ರಂಗಚಾವಡಿ, ಸಂಜೆ 5ರಿಂದ.

■ **ಮೈಸೂರು ವಿವಿ ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ:** ಪ್ರಸಕ್ತ ಸಾಲಿನ ವಿವಿ ಮಟ್ಟದ ಅಂತರ ಕಾಲೇಜು ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸ್ಪರ್ಧೆಗಳ ಸಮಾರೋಪ ಸಮಾರಂಭ, ಅಧ್ಯಕ್ಷತೆ: ಮೈವಿವಿ ಕುಲಸಚಿವ ಪ್ರೊ.ಮಹದೇವನ್, ಉಪಸ್ಥಿತರು: ಮೈಸೂರು ವಿವಿ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ, ಆಡಳಿತಾಧಿಕಾರಿ ಪ್ರೊ. ರಾಮಚಂದ್ರ, ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 5ಕ್ಕೆ

ವಾಜಮಂಗಲದಲ್ಲಿಂದು, ಮೈಸೂರು ತಾಲೂಕು

■ **ಬನಶಂಕರಿ ವಿದ್ಯಾಸಂಸ್ಥೆ:** ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ: ಮಾಜಿ ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ, ಅಧ್ಯಕ್ಷತೆ: ಸಂಸ್ಥೆ ಗೌರವಾಧ್ಯಕ್ಷ ಗಂಗಾಧರ, ಸನ್ಮಾನಿಸತರು: ಬಿಇಓ ವಿವೇಕಾನಂದ, ಆರಕ್ಷಕ ಉಪ ನಿರೀಕ್ಷಕ ಚೇತನ್, ಬಹುಮಾನ ವಿತರಣೆ: ತಿಮ್ಮರಾಜು, ಸ್ಥಳ: ಶಾಲೆ ಆವರಣ, ವಾಜಮಂಗಲ, ಸಂಜೆ 5ಕ್ಕೆ

ಸುತ್ತೂರು ಜಾತ್ರಾ ಮಹೋತ್ಸವದ ಇಂದಿನ ಕಾರ್ಯಕ್ರಮಗಳು



ಕರ್ತೃಗದ್ದುಗೆಯಲ್ಲಿ ಪೂಜಾ ಕೈಂಕರ್ಯ ಮತ್ತು ಮೆರವಣಿಗೆ

ಬೆಳಗ್ಗೆ 4ಕ್ಕೆ ಮಹಾರುದ್ರಾಭಿಷೇಕ, ಲಕ್ಷ ಬಿಲ್ವಾರ್ಚನೆ, ಮಹಾಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ, ಬೆಳಗ್ಗೆ 7.30ಕ್ಕೆ ಸ್ನೇಹ–ಸೌಹಾರ್ದ–ಶಾಂತಿ–ಪ್ರಾರ್ಥನಾ ಪಥ ಸಂಚಲನ, ಬೆಳಗ್ಗೆ 9ಕ್ಕೆ ಷಟ್‌ಸ್ಥಲ ಧ್ವಜಾರೋಹಣ : ಕನಕಪುರ ಶ್ರೀ ದೇಗುಲ ಮಠದ ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳು, ಧರ್ಮ ಸಂದೇಶ : ಶ್ರೀ ಹಿರೇಮಠ ಸಂಸ್ಥಾನ, ಬೇಮಳಖೇಡ ಗೋರಟಾ, ಬೀದರ್ ಜಿಲ್ಲೆಯ ಡಾ. ಶ್ರೀ ರಾಜಶೇಖರ ಶಿವಾಚಾರ್ಯ ಸ್ವಾಮಿಗಳು, ಬೆಳಗ್ಗೆ 9ಕ್ಕೆ ಶ್ರೀಮಠದಿಂದ ಕರ್ತೃಗದ್ದುಗೆಗೆ ಹಾಲರವಿ ಉತ್ಸವ (ಸಹಸ್ರ ಕುಂಭೋತ್ಸವ), ಶ್ರೀ ಸೋಮೇಶ್ವರ ಉತ್ಸವ, ಸಂಜೆ 6ಕ್ಕೆ ಮಹಾರುದ್ರಾಭಿಷೇಕ, ಮಹಾಮಂಗಳಾರತಿ

ಸಾಮೂಹಿಕ ವಿವಾಹ

ಸಮ್ಮುಖ: ಕಾಗಿನೆಲೆ ಶ್ರೀ ಕನಕಗುರು ಪೀಠದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು, ತಿರುವನಂತಪುರ ಶಾಂತಗಿರಿ ಆಶ್ರಮದ ಪ್ರಧಾನ ಕಾರ್ಯದರ್ಶಿ ಸ್ವಾಮಿ ಗುರುರತ್ನಂ ಜ್ಞಾನತಪಸ್ವಿ, ಉದ್ಘಾಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ, ಅಧ್ಯಕ್ಷತೆ: ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಪರಿಕರ ವಿತರಣೆ: ಇಂಧನ ಸಚಿವ ಕೆ.ಜೆ.ಜಾರ್ಜ್, ಮಾಂಗಲ್ಯ ವಿತರಣೆ: ತೋಟಗಾರಿಕೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಪ್ರಮಾಣ ಪತ್ರ ವಿತರಣೆ: ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ, ಪ್ರತಿಜ್ಞಾ ವಿಧಿ ಬೋಧನೆ: ಮೀನುಗಾರಿಕೆ ಸಚಿವ ಮಂಕಾಳ ವೈದ್ಯ, ಮುಖ್ಯ ಅತಿಥಿಗಳು: ವಿರೋಧ ಪಕ್ಷದ ಉಪನಾಯಕ ಅರವಿಂದ ಬೆಲ್ಲದ, ಶಾಸಕರಾದ ಡಾ.ಕೆ.ಗೋವಿಂದರಾಜು, ಹೆಚ್.ಡಿ. ರೇವಣ್ಣ, ಬಣ್ಣಾರಿ ಅಮ್ಮನ್ ಷುಗರ್ಸ್ ಲಿ. ಅಧ್ಯಕ್ಷ ಎಸ್.ವಿ.ಬಾಲಸುಬ್ರಹ್ಮಣ್ಯಂ, ಮೇರಿಲ್ಯಾಂಡ್ ಯುಎಸ್‌ಎ ವಿ.ವೀರಪ್ಪನ್, ಉದ್ಯಮಿ ಮೂಲ್‌ಚಂದ್ ನಹರ್, ಕೆನಡಾ ಟೊರಾಂಟೋದ ಸುಗುಣ ಶಿವಾನಂದ, ಬೆಳಗ್ಗೆ 10ಕ್ಕೆ.

ರಾಜ್ಯ ಮಟ್ಟದ ಭಜನಾ ಮೇಳ, ದೇಸಿ ಆಟಗಳು, ಸೋಬಾನೆ ಪದ, ರಂಗೋಲಿ ಸ್ಪರ್ಧೆ

ಸಮ್ಮುಖ: ಶ್ರೀಶೈಲ ಶ್ರೀ ಅಕ್ಕಮಹಾದೇವಿ ಚೈತನ್ಯಪೀಠದ ತಪೋರತ್ನ ಕರುಣಾದೇವಿ ಮಾತಾ, ಧಾರವಾಡ ಮನೆಗುಂಡಿ ಶ್ರೀ ಗುರುಬಸವ ಮಹಾಮನೆಯ ಶ್ರೀ ಬಸವಾನಂದ ಸ್ವಾಮಿಗಳು, ಅಧ್ಯಕ್ಷತೆ: ಗೃಹ ಸಚಿವ ಡಾ.ಜಿ.ಪರಮೇಶ್ವರ್, ಭಜನಾ ಮೇಳ ಉದ್ಘಾಟನೆ: ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ, ದೇಸಿ ಆಟಗಳು ಉದ್ಘಾಟನೆ: ಯುವ ಸಬಲೀಕರಣ, ಕ್ರೀಡಾ ಸಚಿವ ಬಿ.ನಾಗೇಂದ್ರ, ಸೋಬಾನೆ ಪದ ಮತ್ತು ರಂಗೋಲಿ ಸ್ಪರ್ಧೆ ಉದ್ಘಾಟನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಮುಖ್ಯ ಅತಿಥಿಗಳು: ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಶಾಸಕ ಸಿ.ಸಿ.ಪಾಟೀಲ, ಶಾಸಕರಾದ ಕೆ. ಹರೀಶ್ ಗೌಡ, ಡಿ.ರವಿಶಂಕರ್, ಶರಣಗೌಡ ಕಂದಕೂರ, ಹೆಚ್.ಡಿ. ತಮ್ಮಯ್ಯ, ಸಂಸದೆ ಸುಮಲತಾ ಅಂಬರೀಷ್, ಚಲನಚಿತ್ರ ನಟ ಡಾರ್ಲಿಂಗ್ ಕೃಷ್ಣ, ಯುಎಸ್‌ಎ ಮೇರಿಲ್ಯಾಂಡ್ ಎಸ್.ಕೆ.ಮಂಜುನಾಥ್, ಸಂಜೆ 4ಕ್ಕೆ

ಸಾಂಸ್ಕೃತಿಕ ಕಾರ್ಯಕ್ರಮಗಳು

ಗದ್ದುಗೆ ಆವರಣ: ಬೆಳಗ್ಗೆ 8ಕ್ಕೆ ನಾದಸ್ವರ, 9ಕ್ಕೆ ಸುತ್ತೂರು ಡಾ.ಆರ್.ನಿಂಗರಾಜು ಮತ್ತು ತಂಡದ ಮಲ್ಲುಂಡಿ ಮಹದೇವಸ್ವಾಮಿ ಅವರಿಂದ ಜನಪದ ಮತ್ತು ಸುಗಮ ಸಂಗೀತ, ಮ. 2ಕ್ಕೆ ಬೋಗಾದಿ ಶಿವು ಚಾವಾಡಿ ಮತ್ತು ತಂಡದಿಂದ ಜನಪದ ಗೀತೆ, ಮ. 3ಕ್ಕೆ ನಂಜನಗೂಡು ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಯೋಗ ಪ್ರಾತ್ಯಕ್ಷಿಕೆ, ಸಂಜೆ 6.30ಕ್ಕೆ ಜೆಎಸ್‌ಎಸ್ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳಿಂದ ಯೋಗನೃತ್ಯ, ರಾತ್ರಿ 7ಕ್ಕೆ ವಿಜಯನಗರದ ಕು. ಚೈತನ್ಯ ಷಡಕ್ಷರಿ ಅವರಿಂದ ಭರತನಾಟ್ಯ, ರಾ. 8ಕ್ಕೆ ಚಾಮರಾಜನಗರ ತಾ. ಉಮ್ಮತ್ತೂರಿನ ಬಸವರಾಜು ಮತ್ತು ತಂಡದಿಂದ ಹಾಸ್ಯ ಸಂಜೆ, **ವಸ್ತುಪ್ರದರ್ಶನ ಆವರಣ :** ರಾ. 8.30ಕ್ಕೆ ಶ್ರೀಮತಿ ಸುಮ ರಾಜ್‌ಕುಮಾರ್ ಅವರಿಂದ ಮಾತನಾಡುವ ಗೊಂಬೆ, **ಗದ್ದುಗೆ ಆವರಣ :** ರಾ. 9ಕ್ಕೆ ಬೆಂಗಳೂರು ಕಡಬ ಶ್ರೀನಿವಾಸ ಅವರಿಂದ ಜಾನಪದ ಜಾದೂ.

ಹಿರಿಯ ಮನೆ ಆವರಣ : ನಂಜನಗೂಡು ತಾ. ಬಿಳುಗಲಿ ಶ್ರೀ ಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿಯಿಂದ ಭಕ್ತಪ್ರಹ್ಲಾದ ನಾಟಕ ಪ್ರದರ್ಶನ.

ಶ್ರೀ ಸಿದ್ಧನಂಜ ದೇಶಿಕೇಂದ್ರ ಮಂಗಳ ಮಂಟಪ : ಹಿರಿಯೂರು ತಾ. ಹೊಸಯಳನಾಡು ಶ್ರೀ ಅಂಬಿಕಾ ಕೃಪಾಪೋಷಿತ ನಾಟಕ ಮಂಡಳಿಯವರಿಂದ ಶ್ರೀ ದೇವಿಮಹಾತ್ಮೆ ಅಥವಾ ಮಹಿಷಾಸುರ ಮರ್ದಿನಿ ನಾಟಕ ಪ್ರದರ್ಶನ.

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪಕ್ಕದ ಆವರಣ : ಮಂಡ್ಯ ತಾ. ವೊತ್ತಹಳ್ಳಿ ಶ್ರೀ ಸಿದ್ದೇಶ್ವರ ಕೃಪಾಪೋಷಿತ ನಾಟಕ ಮಂಡಳಿಯವರಿಂದ ಶ್ರೀ ಶನಿಪ್ರಭಾವ ಅಥವಾ ರಾಜಾ ವಿಕ್ರಮ ನಾಟಕ ಪ್ರದರ್ಶನ.

ಶ್ರೀ ಘನಲಿಂಗ ಶಿವಯೋಗಿ ಅತಿಥಿ ಗೃಹದ ಹಿಂಭಾಗ : ಮೈಸೂರು ತಾ., ಮೆಲ್ಲಹಳ್ಳಿ ಶ್ರೀ ಬಾಲಾಜಿ ಕೃಪಾಪೋಷಿತ ನಾಟಕ ಮಂಡಳಿಯವರಿಂದ ದಕ್ಷಯಜ್ಞ ನಾಟಕ ಪ್ರದರ್ಶನ.

ವಿಶೇಷ ಕಾರ್ಯಕ್ರಮಗಳು

ಪ್ರತಿದಿನ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ –ಕೈಮಗ್ಗ, ಜವಳಿ, ಕರಕುಶಲ ಉತ್ಪನ್ನಗಳು, ಗ್ರಾಮೀಣ ಉತ್ಪನ್ನಗಳು, ಕೈಗಾರಿಕೋತ್ಪನ್ನಗಳು, ಗೃಹ ಬಳಕೆ ವಸ್ತುಗಳು, ಪುಸ್ತಕ ಹಾಗೂ ಕಲಾಕೃತಿಗಳ ಪ್ರದರ್ಶನ, ಪ್ರೌಢಶಾಲಾ ವಿದ್ಯಾರ್ಥಿಗಳು ತಯಾರಿಸಿದ ಶೈಕ್ಷಣಿಕ ಮಾದರಿಗಳ ಪ್ರದರ್ಶನ, ವಿವಿಧ ಸಂಸ್ಥೆಗಳು, ಸಹಕಾರ ಸಂಘಗಳು, ಸ್ವಸಹಾಯ ಸಂಘಗಳು, ಸ್ತ್ರೀ ಶಕ್ತಿ ಸಂಘಗಳು ಮತ್ತು ಗುಡಿ ಕೈಗಾರಿಕೆ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ, ಆರೋಗ್ಯ, ವೈದ್ಯಕೀಯ ಮತ್ತು ತಾಂತ್ರಿಕ ವಸ್ತುಪ್ರದರ್ಶನ.

ಕೃಷಿ ಮೇಳ : ಪ್ರತಿದಿನ ಬೆಳಗ್ಗೆ 10 ರಿಂದ ರಾತ್ರಿ 7.30 ರವರೆಗೆ

ಹನಿ ನೀರಾವರಿಯಲ್ಲಿ ಭತ್ತದ ಬೆಳೆ ಪ್ರಾತ್ಯಕ್ಷಿಕೆ, ಕೃಷಿ ಯಂತ್ರೋಪಕರಣಗಳ ಪ್ರದರ್ಶನ ಮತ್ತು ಮಾರಾಟ, ಹಸು, ಕುರಿ, ಮೇಕೆ ಹಾಗೂ ಕೋಳಿಗಳು–ದೇಸಿ ತಳಿಗಳ ಪ್ರದರ್ಶನ, ವೈವಿಧ್ಯಮಯ ಬೆಳೆಗಳ ಪ್ರಾತ್ಯಕ್ಷಿಕೆ, ಒಂದು ಎಕರೆ ಕೃಷಿ ಬ್ರಹ್ಮಾಂಡ, ವಿದೇಶಿ ಆಹಾರ ಬೆಳೆಗಳಾದ ಚಿಯಾ ಮತ್ತು ಟೆಫ್‌ಗಳ ಪ್ರದರ್ಶನ, ದ್ವಿದಳ ಧಾನ್ಯಗಳ ವಿವಿಧ ತಳಿಗಳ ಪ್ರದರ್ಶನ.

ಬೆಳಗ್ಗೆ 6 ರಿಂದ 10 ರವರೆಗೆ : ಜೆಎಸ್‌ಎಸ್ ಆಸ್ಪತ್ರೆ ನುರಿತ ವೈದ್ಯರಿಂದ ಆರೋಗ್ಯ ತಪಾಸಣೆ ಶಿಬಿರ ಮತ್ತು ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ವೈದ್ಯರಿಂದ ಕ್ಯಾನ್ಸರ್ ತಪಾಸಣಾ ಶಿಬಿರ

ದೇಸಿ ಆಟಗಳು

ಜೆಎಸ್‌ಎಸ್ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿಗಳಿಗಾಗಿ : ಗೋಲಿ, ಬುಗುರಿ, ಹುಲಿ–ಕುರಿ, ನವಕಂಕರಿ, ಹಾವು–ಏಣಿ, ಚೌಕಾಬಾರ, ಚದುರಂಗ, ಪಗ್ಗದ ಆಟ, ತಾಬ್ಲ, ಪಂಚೀ, ಸಿಂಗಮ್, ಕೆಸರುಗದ್ದೆ ಓಟ, ಹಗ್ಗ–ಜಗ್ಗಾಟ, ಅಣ್ಣೆಕಲ್ಲು, ಕುಂಟೆಬಿಲ್ಲೆ, ಅಳಿಗುಳಿಮಣೆ.

ಗ್ರಾಮೀಣ ಜನತೆಗಾಗಿ: ಕಲ್ಲುಗುಂಡು ಎತ್ತುವುದು, 50 ಕೆಜಿ ಭಾರದ ಚೀಲ ಹೊತ್ತುಕೊಂಡು ಓಡುವುದು, ಬುಗುರಿ, ಕೆಸರುಗದ್ದೆ ಓಟ, ಕೆಸರುಗದ್ದೆಯಲ್ಲಿ ಹಗ್ಗ ಜಗ್ಗಾಟ, ನಿಂಬೆಹಣ್ಣು ಇರುವ ಚಮಚವನ್ನು ಬಾಯಲ್ಲಿಟ್ಟುಕೊಂಡು ಓಡುವುದು, ಹಗ್ಗಜಗ್ಗಾಟ, ಅಳಗುಳಿಮಣೆ, ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ಮಡಕೆ ಒಡೆಯುವುದು, ಅಣ್ಣೆಕಲ್ಲು, ತುಂಬಿದ ಬಿಂದಿಗೆಯನ್ನು ತಲೆಯ ಮೇಲೆ ಹೊತ್ತು ಓಡುವುದು.

ವಾಸ್ತವ್ಯ ಮತ್ತು ಪ್ರಸಾದ: ಪ್ರತಿನಿತ್ಯ ಭಕ್ತಾದಿಗಳಿಗೆ ಪ್ರಸಾದ ಹಾಗೂ ದೂರದಿಂದ ಬರುವವರಿಗೆ ವಾಸ್ತವ್ಯಕ್ಕೆ ತಾತ್ಕಾಲಿಕ ಕುಟೀರಗಳಲ್ಲಿ ವ್ಯವಸ್ಥೆ.

ಬಸ್ ಸೌಲಭ್ಯ, ನೇರ ಪ್ರಸಾರ

ಬಸ್ ಸೌಲಭ್ಯ: ವಿವಿಧ ತಾಲೂಕುಗಳು ಮತ್ತು ಜಿಲ್ಲೆಗಳಿಂದ ಸುತ್ತೂರು ಜಾತ್ರಾ ವಿಶೇಷವಾಗಿ ಸಾರಿಗೆ ಬಸ್ ಸೌಕರ್ಯ ಕಲ್ಪಿಸಲಾಗಿದೆ. ಮಾಹಿತಿಗೆ ಸುತ್ತೂರು ಶ್ರೀ ಕ್ಷೇತ್ರ, ನಂಜನಗೂಡು, ದೂ. 08221–232223, 232224 **ಜೆಎಸ್‌ಎಸ್ ಮಹಾವಿದ್ಯಾಪೀಠ. ದೂ.0821–2548212–122.** **https://www.youtube.com/@jssmhavidyapeetaonline**ನಲ್ಲಿ **ಸುತ್ತೂರು ಜಾತ್ರೆ ನೇರ ಪ್ರಸಾರ.**

3ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನಗಲಿ ಇಂದಿಗೆ 3 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ದುಃಖತಪ್ತರು: ತಾಯಿ, ಅಕ್ಕ, ಚಿಕ್ಕಪ್ಪಂದಿರು, ಕುಟುಂಬವರ್ಗದವರು ಮತ್ತು ಸ್ನೇಹಿತರು. #6/1, ಗೌರಿಶಂಕರನಗರ, ಊಟಿ ರಸ್ತೆ, ಮೈಸೂರು.



ಎನ್.ಲೋಹಿತ್ (ಕಿರಣ)

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಮೈಸೂರು
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಮೈಸೂರು.


ದೂರವಾಣಿ:0821–2529205 ಫ್ಯಾಕ್ಸ್:0821–2435575
ಇ–ಮೇಲ್: dhomysore@gmail.com
ಸಂಖ್ಯೆ: ಸರಬ/13/2023–24 ದಿನಾಂಕ: 01.02.2024

ಇ–ಟೆಂಡರ್ ಪ್ರಕಟಣೆ

2023–24ನೇ ಸಾಲಿನಲ್ಲಿ ಈ ಕಛೇರಿಯ ಅಧೀನದ ಆಸ್ಪತ್ರೆಗಳಿಗೆ ಅಗತ್ಯ ವೈದ್ಯಕೀಯ ಉಪಕರಣ / ಸಲಕರಣೆಗಳನ್ನು ಖರೀದಿಸುವ ಸಂಬಂಧ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999–2000 ರಂತೆ ಅಧಿಕೃತ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಹೆಚ್ಚಿನ ವಿವರಗಳನ್ನು http://eproc.karnataka.gov.in/ ಮೂಲಕ ಪಡೆಯಬಹುದಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.22.00 ಲಕ್ಷ ಮತ್ತು ಟೆಂಡರ್ ಅಪ್‌ಲೋಡ್ ಮಾಡಲು ದಿ: 01.02.2024 ರಂದು ಮಧ್ಯಾಹ್ನ 03.00 ಗಂಟೆಯಿಂದ ದಿ: 15.02.2024 ರಂದು ಮಧ್ಯಾಹ್ನ 04.30 ಗಂಟೆಯ ವರೆಗೆ ಸಮಯ ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಚೇರಿ ವೇಳೆಯಲ್ಲಿ ಅಥವಾ ದೂರವಾಣಿ ಮೂಲಕ ಪಡೆಯಬಹುದಾಗಿದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು
DIPR/DDMYS/KSMCA/1007/2023-24





VIDYAVARDHAKA SANGHA (R), MYSURU
VIDYAVARDHAKA EDUCATIONAL INSTITUTIONS
WANTED

VIDYAVARDHAKA FIRST GRADE COLLEGE
Sheshadri Iyer Road, Mysuru-01, Phone:0821-2421619, 2422385 | Email:vvfgc@yahoo.co.in

Sl.No	Name of the post	Department	Education Qualification	Remarks
1	Associate Professor	Computer Application	MCA/MSc., in Computer Science (Essential: NET/ K-SET)	01Post
2	Guest Faculty	English	MA in English (Essential: NET/ K-SET)	01Post

Candidate with experience and Ph.D.,will be preferred.

VIDYAVARDHAKA LAW COLLEGE
Sheshadri Iyer Road, Mysuru-01, Phone:0821-2426220 | Email:vidyavardhakalawcollege@gmail.com

Sl.No	Name of the post	Education Qualification
1	Assistant Professor in Law	LL.M
2	Assistant Professor in Political Science	M.A. in Political Science
3	Librarian	M.L.I.Sc/Master of Library & Information Science

Desirable: KSET/NET/Ph.D PGDLAN/PGDCA, with good communication skills will be preferred.

VIDYAVARDHAKA INDUSTRIAL TRAINING INSTITUTE
Gokulam 3rd stage, Mysuru-02, Phone:0821-2419192 | Email: vviti1984mys02@gmail.com

Sl.No	Name of the post	Education Qualification
1	Junior Training Officer (JTO)	Diploma in E&C or ITI in Electronics

Please submit the applications within 7 days along with copies of Certificates, Bio-Data & Passport Size photo to the respective college offices.

Sd/- Hon.President Sd/- Hon. Secretary

ನಿಧನ



ಶ್ರೀಯುತ ಎ.ಪಿ. ಅರ್ಕೇಶ್

(95 ವರ್ಷ) ಯಜಮಾನರು

ಅವರು ದಿನಾಂಕ: 06.02.2024ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಸಂಸ್ಕಾರವನ್ನು ದಿನಾಂಕ 07.02.2024ರ ಬುಧವಾರ ಮಧ್ಯಾಹ್ನ 11.30ಕ್ಕೆ ಸ್ವಗ್ರಾಮ ಅರಕೆರೆಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತರು: ಅರಕೆರೆ ಕುಮಾರ್ ಮತ್ತು ಕುಟುಂಬವರ್ಗದವರು
ಪ್ರಥಮ ದರ್ಜೆ ಗುತ್ತಿಗೆದಾರರು
ಅರಕೆರೆ, ಶ್ರೀರಂಗಪಟ್ಟಣ ತಾಲೂಕು

ಸಾರ್ವಜನಿಕ ಪತ್ರಿಕಾ ಪ್ರಕಟಣೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಗಾಣಗೆರೆ ಹೋಬಳಿ, ಗಾಣಗೆರೆ ಗ್ರಾಮದ ... ಪತ್ರಿಕಾ ಪ್ರಕಟಣೆ. ಮೇಲ್ಕಂಡ ನಮ್ಮ ಕಕ್ಷಿದಾರರು ಷೆಡ್ಯೂಲ್ ನಮೂದಿತ ಸ್ವತ್ತಿನ ಬಾಡಿಗೆದಾರರಾಗಿದ್ದು ... ರೂ.12,00,000/–ಗಳನ್ನು ಸ್ವತ್ತಿನ ಮಾಲೀಕರಾದ ... ರವರಿಗೆ ... ದಿ:13–09–2023ರಂದು ಬಾಡಿಗೆ ಕರಾರು ಪತ್ರ ಮಾಡಿಕೊಂಡಿದ್ದು, ಸದರಿ ಬಾಡಿಗೆ ಕರಾರು ಪತ್ರವು ಚಾಲ್ತಿಯಲ್ಲಿರುತ್ತದೆ. ಸದರಿ ಬಾಡಿಗೆ ಕರಾರಿಗೆ ಸಂಬಂಧಿಸಿದಂತೆ ಷೆಡ್ಯೂಲ್ ಸ್ವತ್ತಿನ ಮಾಲೀಕರಾದ ... ರವರು ಬಾಡಿಗೆ ಕರಾರಿನ ಷರತ್ತು ಮತ್ತು ನಿಯಮಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿದ್ದು, ಈ ಬಗ್ಗೆ ವಕೀಲರ ಮೂಲಕ ನೋಟೀಸ್ ಜಾರಿ ಮಾಡಿದ್ದು, ಷೆಡ್ಯೂಲ್ ನಮೂದಿತ ಸ್ವತ್ತು ನಮ್ಮ ಕಕ್ಷಿದಾರರಿಗಲ್ಲದೇ ಬೇರೆ ಯಾರಿಗೂ ಯಾವುದೇ ರೀತಿಯಾದ ಹಕ್ಕು ಹಿತಾಸಕ್ತಿ ಇರುವುದಿಲ್ಲ. ಹಾಗೇ ನಾವರೂ ಬೇರೆ ಯಾರಾದರೂ ಸದರಿ ಷೆಡ್ಯೂಲ್ ಸ್ವತ್ತಿನ ಮಾಲೀಕರಿಂದ ಬಾಡಿಗೆ ಕರಾರು ಮಾಡಿ ಕೊಳ್ಳಲು ಪ್ರಯತ್ನಿಸುತ್ತಿರುವುದು ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿದ್ದು, ಹಾಗೇನಾದರೂ ಬಾಡಿಗೆ ಕರಾರಿಗೆ ಸಂಬಂಧಿಸಿದಂತೆ ನಿಯಮ ಮತ್ತು ಷರತ್ತುಗಳನ್ನು ಉಲ್ಲಂಘಿಸಿ ಮಾಡಿದ್ದೇ ಆದಲ್ಲಿ ಮುಂದೆ ಆಗುವ ಎಲ್ಲಾ ಖರ್ಚು ವೆಚ್ಚ ನಷ್ಟಗಳಿಗೆ ತಾವೇ ಹೊಣೆಗಾರರಾಗಬೇಕಾಗುತ್ತದೆ ಹಾಗೂ ಸದರಿ ಬಾಡಿಗೆ ಕರಾರು ಪತ್ರವು ಅಸಿಂಧುವಾಗುತ್ತದೆ.

ಆದುದರಿಂದ ಈ ಮೂಲಕ ಪತ್ರಿಕಾ ಪ್ರಕಟಣೆಯಲ್ಲಿ ಕೋರುವುದೇನೆಂದರೆ, ಈ ಷೆಡ್ಯೂಲ್ ನಮೂದಿತ ಸ್ವತ್ತನ್ನು ಯಾರೂ ಬಾಡಿಗೆ ಕರಾರು ಮಾಡಿ ಕೊಳ್ಳಬಾರದಾಗಿ ಕೋರಲಾಗಿದೆ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಗಾಣಗೆರೆ ಹೋಬಳಿ, ಜಾಬಗೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಖಾತೆ ನಂ.94/5 ವಿಸ್ತೀರ್ಣ 600.75 ಚ.ಮೀ.ನಲ್ಲಿ ಅಳವಡಿಸಿರುವ ಇಂಡಿಯನ್ ಆಯಿಲ್ ಕಾರ್ಪೋರೇಷನ್ ಪೆಟ್ರೋಲ್ ಬಂಕ್ ಈ ಸ್ವತ್ತಿಗೆ ಸೇರಿದ ಸ್ವತ್ತಿಗೆ ಚಕ್ಕುಬಂಧಿ:–
ಪೂರ್ವಕ್ಕೆ: ... –ಹುಣಸೂರು ಮುಖ್ಯ ರಸ್ತೆ, ಪಶ್ಚಿಮಕ್ಕೆ: ಕೃಷ್ಣಪ್ಪ ರವರ ನಿವೇಶನ ಉತ್ತರಕ್ಕೆ: ಕೃಷ್ಣಪ್ಪ ರವರ ನಿವೇಶನ ದಕ್ಷಿಣಕ್ಕೆ: ಕೃಷ್ಣಪ್ಪ ರವರ ನಿವೇಶನ

ಸಹಿ/– ಬಿ.ಎಸ್.ಯೋಗಾನಂದಕುಮಾರ್
B.Com, LLB., R.No. KAR703895
ವಕೀಲರು, ನಂ.1, 1ನೇ ಫ್ಲೋರ್,
... ಕಾಂಪ್ಲೆಕ್ಸ್, ಪೋಸ್ಟ್ ಆಫೀಸ್ ರಸ್ತೆ,
ಮೈಸೂರು. ಮೊ: 9845785456



ನಕ್ಕರೆ ಅದೇ ಸ್ವರ್ಗ

ಟೀಚರ್ : ತಿಮ್ಮ, ಯಾವ ಚಿತ್ರ ಬರೀತಿದೀಯಾ?
ತಿಮ್ಮ : ದೇವರ ಚಿತ್ರ ಟೀಚರ್!
ಟೀಚರ್ : ಆದ್ರೆ ದೇವರು ಹೇಗಿರ್ತಾನೆ ಅಂತ ಯಾರಿಗೂ ಗೊತ್ತಿಲ್ವಲ್ಲ?
ತಿಮ್ಮ : ಇನ್ನೊಂದು ಸ್ವಲ್ಪ ಹೊತ್ತಲ್ಲಿ ಗೊತ್ತಾಗುತ್ತೆ!

ಮೈಸೂರು ಮಿತ್ರ
ಬುಧವಾರ, 7 ಫೆಬ್ರವರಿ 2024
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಜೀವನವು ಮಹತ್ವವಲ್ಲ, ಜೀವನದಲ್ಲಿ ನಾವು ತೋರುವ ಧೈರ್ಯ, ಸಾಹಸಗಳು ಮಹತ್ವದವು. –ವಾಲ್ ಪೋಲ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಲ್ಲವನಾದರೂ ಕಲ್ಲು ತಗುಲಿದರೆ ತಲ್ಲಣಿಸದೆ ಇರನು

ನಿಮ್ಮ ಪತ್ರಗಳು

ಜನಜಾಗೃತಿ ಜಾತ್ರೆಯ ಮಹಾಚೇತನ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು

ಮಾನ್ಯರೆ,



ಸುತ್ತೂರು ಸಂಸ್ಥಾನ ಪ್ರಪಂಚದಾದ್ಯಂತ ಧಾರ್ಮಿಕ ಮತ್ತು ಶೈಕ್ಷಣಿಕ ಕ್ಷೇತ್ರದಿಂದ ಪ್ರಸಿದ್ಧಿ ಪಡೆದಿದೆ. ಸುತ್ತೂರು ಜಾತ್ರೆ ಜನಜಾಗೃತಿ ಜಾತ್ರೆಯನ್ನಾಗಿ ಮಾಡಿದ ಕೀರ್ತಿ ಸುತ್ತೂರು ಸಂಸ್ಥಾನದ ಪೀಠಾಧಿಪತಿಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಿಗೆ ಸಲ್ಲುತ್ತದೆ. ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳು ಸುತ್ತೂರು ಕ್ಷೇತ್ರವನ್ನು ದಿವ್ಯ ಕ್ಷೇತ್ರವನ್ನಾಗಿ ಮಾಡಿದರು. ಡಾ.ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಕಾಲದಲ್ಲಿ ಧಾರ್ಮಿಕ ಮತ್ತು ಶಿಕ್ಷಣ ಕ್ರಾಂತಿಯಾಯಿತು. ಅಂದಿನಿಂದ ಎಲ್ಲಾ ಪೂಜ್ಯ ಜಗದ್ಗುರುಗಳು ಸೇವೆ ಮಾಡಿ ಸುತ್ತೂರು ಸಂಸ್ಥಾನವನ್ನು ಪ್ರಸಿದ್ಧಿ ಮಾಡಿದ್ದಾರೆ. ಈ ಬಾರಿಯ ಸುತ್ತೂರು ಜನಜಾಗೃತಿ ಜಾತ್ರೆ ಫೆ.6ರಿಂದ 11ರವರೆಗೆ ಸುತ್ತೂರಿ ನಲ್ಲಿ ನಡೆಯುತ್ತದೆ. ಈ ಜಾತ್ರೆಯಲ್ಲಿ ಭಜನಾ ಮೇಳ, ವಸ್ತುಪ್ರದರ್ಶನ, ಸಾಮೂಹಿಕ ವಿವಾಹ, ಕೃಷಿ ಮೇಳ, ಕೃಷಿ ವಿಜ್ಞಾನ ಸಂಕಿರಣ, ಚಿತ್ರಸಂತೆ, ಕುಸ್ತಿ ಪಂದ್ಯಾವಳಿ, ಆರೋಗ್ಯ ತಪಾಸಣಾ ಶಿಬಿರ, ಅತಿಥಿ ಗೃಹ ಉದ್ಘಾಟನೆ, ಕ್ಯಾನ್ಸರ್ ತಪಾಸಣಾ ಶಿಬಿರ, ದೋಣಿ ವಿಹಾರ, ಗ್ರಾಮೀಣ ಜನತೆಗಾಗಿ ದೇಸಿ ಆಟಗಳು, ದನಗಳ ಪರಿಷೆ, ತೆಪ್ಪೋತ್ಸವ, ಸಾಂಸ್ಕೃತಿಕ ಮೇಳ, ಗಾಯನ, ನೃತ್ಯ, ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ. ಕರ್ನಾಟಕ, ಮಹಾರಾಷ್ಟ್ರ ಮತ್ತು ತಮಿಳುನಾಡು ರಾಜ್ಯಗಳ ಕಲಾತಂಡಗಳವರು ಕಾರ್ಯಕ್ರಮ ನೀಡುತ್ತಾರೆ. ಜಾತ್ರಾ ಮಹೋತ್ಸವದಲ್ಲಿ ವಿವಿಧ ಮಠಾಧೀಶರು, ಮುಖ್ಯಮಂತ್ರಿಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮಂತ್ರಿಗಳು, ಸಂಸದರು, ಶಾಸಕರು, ಗಣ್ಯರು ಭಾಗವಹಿಸುತ್ತಿದ್ದಾರೆ.

ಪೂಜ್ಯ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಮತ್ತು ಮಾರ್ಗದರ್ಶನದಲ್ಲಿ ಈ ಕಾರ್ಯಕ್ರಮಗಳು ನಡೆಯುತ್ತಿವೆ. 25 ಲಕ್ಷಕ್ಕೂ ಹೆಚ್ಚು ಜನ ಜಾತ್ರೆಯಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಎಲ್ಲರಿಗೂ ಉಚಿತ ವಸತಿ ಮತ್ತು ದಾಸೋಹದ ವ್ಯವಸ್ಥೆ ಎಲ್ಲಾ ದಿನಗಳಲ್ಲಿಯೂ ಇರುತ್ತದೆ.

ಸುತ್ತೂರು ಜಾತ್ರೆ ಕೃಷಿ ಜಾತ್ರೆ, ಜನಜಾಗೃತಿ ಜಾತ್ರೆ, ವಿಜ್ಞಾನ ಜಾತ್ರೆಯಾಗಿ ಮಾಡಿದ ಕೀರ್ತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳಿಗೆ ಸಲ್ಲುತ್ತದೆ. ಈ ಜಾತ್ರೆಯಲ್ಲಿ ಪಾಲ್ಗೊಳ್ಳುವುದೇ ಅದೊಂದು ಯೋಗ. ಎಲ್ಲರೂ ಭಾಗವಹಿಸಿ ಧನ್ಯರಾಗೋಣ.

–ಎಸ್.ನಾಗರಾಜ, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು, ಮೈಸೂರು

ತಿ.ನರಸೀಪುರ ಬಸ್ ನಿಲ್ದಾಣದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿ

ಮಾನ್ಯರೆ,

ಟಿ.ನರಸೀಪುರ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಬೇಕು ಮತ್ತು ಭದ್ರತೆ ಹೆಚ್ಚಿಸಬೇಕು. ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಉಚಿತ ಸಾರಿಗೆ ಪ್ರಯಾಣ 'ಶಕ್ತಿ ಯೋಜನೆ'ಯಿಂದ ಮಹಿಳೆಯರು ಮತ್ತು ಮಕ್ಕಳು, ವಿದ್ಯಾರ್ಥಿಗಳು, ಪ್ರವಾಸಿಗರು ಸೇರಿದಂತೆ ಕೆಎಸ್ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಸಾವಿರಾರು ಜನರು ಪ್ರತಿನಿತ್ಯ ಬರುತ್ತಾರೆ. ಅಲ್ಲದೆ ತಮಿಳುನಾಡು, ಕೇರಳ ಸಂಪರ್ಕ ಮಾರ್ಗ ಕೂಡ ಇದಾಗಿದ್ದು, ಹೊರರಾಜ್ಯದ ಪ್ರಯಾಣಿಕರು ಕೂಡ ಆಗಮಿಸುತ್ತಾರೆ. ಇತ್ತೀಚೆಗೆ ಕಳ್ಳರ ಸಂಖ್ಯೆ ಹೆಚ್ಚಾಗಿದೆ. ಕಳ್ಳತನ ಪ್ರಕರಣಗಳು ಕೂಡ ದಾಖಲಾಗಿವೆ. ಇಲ್ಲಿ ಸಿಸಿ ಕ್ಯಾಮರಾಗಳು ಇಲ್ಲ. ಪ್ರಯಾಣಿಕರ ಸೋಗಿನಲ್ಲಿ ಬರುವ ಕಳ್ಳರನ್ನು ಗುರುತಿಸಲು ಕಷ್ಟವಾಗುತ್ತದೆ. ಆದ್ದರಿಂದ ಸಿಸಿ ಕ್ಯಾಮರಾಗಳನ್ನು ಹಾಕಬೇಕು ಮತ್ತು ಪೊಲೀಸ್ ಸಿಬ್ಬಂದಿಗಳನ್ನು ನೇಮಿಸಬೇಕು. ಹಾಗೆಯೇ ಬಸ್ ನಿಲ್ದಾಣದಲ್ಲಿ ಪೊಲೀಸ್ ಉಪಠಾಣೆ ತೆರೆಯಬೇಕು. ಇದರಿಂದ ಮಹಿಳೆಯರು, ವಿದ್ಯಾರ್ಥಿಗಳು, ಪ್ರಯಾಣಿಕರು ನಿರ್ಭೀತಿಯಿಂದ ಓಡಾಡಲು ಕೆಎಸ್ಆರ್‌ಟಿಸಿಯ ವಿಭಾಗೀಯ ನಿಯಂತ್ರಣಾಧಿಕಾರಿಗಳು ಅನುವು ಮಾಡಿಕೊಡಬೇಕು ಮತ್ತು ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕೆಂದು ಈ ಮೂಲಕ ಮನವಿ.

–ಪ್ರಕಾಶ್ ಸಿ. ಆಲಗೂಡು, ಟಿ ನರಸೀಪುರ

ಅಮಾಯಕರ ಸಾವಿಗೆ ಪಾಲಿಕೆ ಕಾರಣ



ಮಾನ್ಯರೆ,

ಮೈಸೂರು ಮಹಾ ನಗರಪಾಲಿಕೆಯ ಬೇಜವಾಬ್ದಾರಿ, ಅವಿವೇಕತನ, ಬೇಕಾಬಿಟ್ಟಿ, ಅಸಡ್ಡೆ, ಕಾಟಾಚಾರ, ಅಡ್ಡಾದಿಡ್ಡಿ, ನಿರ್ಲಕ್ಷ್ಯತನ ಇವೆಲ್ಲಾ ನಮ್ಮ ಪಾಲಿಕೆ ಅಧಿಕಾರಿಗಳ ಆಜನ್ಮ ಸಿದ್ಧ ಹಕ್ಕು. ಇವರ ನಿರ್ಲಕ್ಷ್ಯತನದಿಂದ ಮೂವರು ಯುವಕರು ಜೀವ ಕಳೆದುಕೊಂಡರು. ಇದಕ್ಕೆ ಯಾರು ಹೊಣೆಗಾರರು. ದುಡಿಯುವ ಮಕ್ಕಳನ್ನು ಕಳೆದುಕೊಂಡ ಸಂಸಾರ ಅನಾಥವಾಯಿತು. ಆ ತಂದೆ ತಾಯಿಯರ ಶಾಪ ನಿಮ್ಮನ್ನು ತಟ್ಟದೇ ಇರುತ್ತದೆಯೇ? ಅವರ ಮುಂದಿನ ಜೀವನ ಹೇಗೆ ಸಾಗಬೇಕು? ಇದಕ್ಕೆ ಹೊಣೆಯಾದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ ಕಾನೂನು ಕ್ರಮ ಯಾಕೆ ಜರುಗಿಸುತ್ತಿಲ್ಲ. ಘನ ನ್ಯಾಯಾಲಯ ಸುಮೊಟೊ ಕೇಸ್ ಜರುಗಿಸಲಿ. ಸಾಲದ್ದಕ್ಕೆ ಓಟು ಕೇಳಲು ಅಲೆಮಾರಿಗಳಂತೆ ಅಲೆಯುವ ಯಾವ ಜನಪ್ರತಿನಿಧಿಗಳೂ ಇವರ ಮನೆಯ ಹತ್ತಿರವೂ ಸುಳಿಯಲಿಲ್ಲ. ಯಾವ ಪರಿಹಾರ ಘೋಷಣೆಯೂ ಆಗಲಿಲ್ಲ. ಜನಪ್ರತಿನಿಧಿಗಳ ಮಕ್ಕಳೇ ಸತ್ತಿದ್ದರೆ ಈ ರೀತಿ ಕಲ್ಲೆದೆ ಮಾಡಿಕೊಂಡು ಸುಮ್ಮನಿರುತ್ತಿದ್ದರೆ? ಹೋದ ಜೀವ ವಾಪಸ್ಸು ಬರುತ್ತದೆಯೇ?

ಈ ರೋಡ್ ಹಂಪ್ ಹಾಕಲು ಯಾವುದೇ ಅಳತೆ ಗೋಲು ಇಲ್ಲವೇ? ಒಂದೊಂದು ಕಡೆ ಒಂದೊಂದು ಅಳತೆ, ರೀತಿಯಲ್ಲಿ, ಎತ್ತರ, ಅಗಲಗಳ ಮಾನದಂಡವಿಲ್ಲದೆ ಹಾಕುವುದು. ಇವರು ಇಂಜಿನಿಯರಿಂಗ್ ಓದಿರುವುದು ದಂಡ ಅಲ್ಲವೇ? ಅದಕ್ಕೆ ಸೂಕ್ತ ಪೇಯಿಂಟ್ ಅಥವಾ ರಿಫ್ಲೆಕ್ಟರ್ಸ್ ಅಳವಡಿಸದೆ ಇರುವುದು ಹೆಡ್ಡತನದ ಪರಮಾವಧಿ ಅಲ್ಲವೇ? ಕಾರಿನ ಬಂಪರ್, ಡ್ಯಾಮೇಜ್ ಆಗುವಷ್ಟು ಎತ್ತರ ಹಂಪ್ ಹಾಕುತ್ತಾರೆ. ಈ ಮೊದಲು ಸಿಟಿ ತುಂಬೆಲ್ಲಾ ಹಾಕಿದ ಅಲಂಕಾರಿಕ ಕಂಬಗಳ ಗತಿ ಏನಾಯಿತು, ಏನಾಗಿದೆ? ಇದು ಹಣ ದೋಚುವ ಕಾರ್ಯಕ್ರಮ ಅಲ್ಲದೆ ಇನ್ನೇನು?

–ವಿ. ಕೇಶವಮೂರ್ತಿ, ಜ್ಯೋತಿಷ ವಿದ್ವಾಂಸ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಪಂಪನಿಂದ ಕುವೆಂಪುವರೆಗೆ

ಕನ್ನಡದ ಆದಿಕವಿ ಪಂಪ ಕನ್ನಡಕ್ಕೆ ಚಿರಸ್ಥಾಯಿಯಾದ ಎರಡು ಕಾವ್ಯಗಳನ್ನಿತ್ತನು. **ಆದಿಪುರಾಣ** ಜೈನಧರ್ಮಕ್ಕೆ ಸಂಬಂಧಿಸಿದುದಾದರೆ **ವಿಕ್ರಮಾರ್ಜುನ ವಿಜಯ** ಮಹಾಭಾರತದ ಕಥೆಯನ್ನು ಹೇಳುವ ಲೌಕಿಕ ಕಾವ್ಯ. ಇವೆರಡೂ ಕನ್ನಡ ಸರಸ್ವತಿಯ ಎರಡು ಕಣ್ಣುಗಳಿದ್ದಂತೆ. ಸಹಸ್ರ ವರ್ಷಗಳ ಹಿಂದೆ ಇವು ರಚಿತವಾದರೂ ಗಾಂಭೀರ್ಯದಲ್ಲೂ ಸೌಂದರ್ಯದಲ್ಲೂ ಪಾಂಡಿತ್ಯದಲ್ಲೂ ಇವುಗಳನ್ನು ಮೀರಿಸುವ ಇನ್ನೊಂದು ಕಾವ್ಯ ಕನ್ನಡದಲ್ಲಿ ಬಂದಿಲ್ಲವೆನಿಸುತ್ತದೆ. ಕನ್ನಡ–ಸಂಸ್ಕೃತಗಳಲ್ಲಿ ಸಮಾನ ವಿದ್ವತ್ತುವನ್ನುಳ್ಳ, ಕವಿತ್ವದಲ್ಲಿ ಕಾಳಿದಾಸನನ್ನು ಅತಿಶಯಿಸಿದ ಪಂಪ ಕನ್ನಡಕ್ಕೊಲಿದುದು ಈ ನುಡಿಯ ಸೌಭಾಗ್ಯ. ಪ್ರಪಂಚದ ಯಾವುದೇ ಭಾಷೆಯ ಸಾಹಿತ್ಯಕ್ಕೆ ನಾವು ಕಡಿಮೆಯಲ್ಲ ಎಂದು ಎದೆಯುಬ್ಬಿಸಿ ಹೆಮ್ಮೆಯಿಂದ ನಾವು ಹೇಳುವುದಕ್ಕೆ ಧೈರ್ಯವನ್ನು ಕೊಡುವುದು ಪಂಪನ ಕಾವ್ಯದ್ವಯ. ಅವುಗಳನ್ನು ಮರೆಯುವಂತೆಯೇ ಇಲ್ಲ.

ಅದು ಜೈನಯುಗ. ಕನ್ನಡ ನಾಡಿನಲ್ಲಿ ಜೈನ ಧರ್ಮ ಬೆಳೆದ ಕಾಲ. ಆದಿಕಾಲದಲ್ಲಿ ನಾವು ನೆನೆಸಿಕೊಳ್ಳುವ ಮಹಾಕವಿಗಳೆಲ್ಲ ಜೈನರೇ. ಮಹಾಭಾರತದ ಕಥೆಯನ್ನೇ ಆಧಾರವಾಗಿಟ್ಟುಕೊಂಡು ತನ್ನ ಪ್ರತಿಭೆಯನ್ನು ಬೆಳಗಿಸಿದ ಇನ್ನೊಬ್ಬ ಮಹಾಕವಿ ರನ್ನ. ಪಂಪನು ತನ್ನ ಕಥೆಗೆ ಅರ್ಜುನನನ್ನು ಕೇಂದ್ರವಾಗಿ ಮಾಡಿಕೊಂಡರೆ ರನ್ನ ಭೀಮನನ್ನು ಮುಖ್ಯಪಾತ್ರವನ್ನಾಗಿ ಮಾಡಿ **'ಸಾಹಸಭೀಮ ವಿಜಯ'**ವನ್ನು ರಚಿಸಿದನು. ಇದು ಲೋಕದಲ್ಲಿ ಗದಾಯುದ್ಧ ಎಂದು ಪ್ರಸಿದ್ಧವಾಗಿದೆ. ಆದಿಶೇಷನ ಫಣಾರತ್ನವನ್ನು ರನ್ನನ ಕಾವ್ಯ ರತ್ನವನ್ನು ಪರೀಕ್ಷಿಸಲು ಹೊರಟವರಿಗೆ ಎಂಟು ಎದೆ ಇರಬೇಡವೇ? ಎಂದು ಕೇಳುವ ರನ್ನ ಒಬ್ಬ ರಸಕವಿ. ಇವನು ನಮ್ಮವನು ಎಂದು ಹೇಳಿಕೊಂಡು ಕನ್ನಡಿಗರು ಹೆಮ್ಮೆಪಡುವುದಕ್ಕೆ ಅರ್ಹನಾದ ರನ್ನನನ್ನು ನೆನೆಯದವರಾರು?

ಮೂರನೆಯ ಜೈನಕವಿ ಜನ್ನ. **ಯಶೋಧರ ಚರಿತೆ** ಇವನ ಕಾವ್ಯ. ಇದು ಮುಖ್ಯವಾಗಿ ಜೈನಮತದ ತತ್ತ್ವವಾದ ಅಹಿಂಸೆಯನ್ನು ವೈರಾಗ್ಯವನ್ನು ಬೋಧಿಸುತ್ತದೆ. ಕನ್ನಡ ಜೈನ ಕಾವ್ಯಗಳು ಕಾವ್ಯವನ್ನು ಧರ್ಮದ ಪ್ರಚಾರಕ್ಕೆ ಸಾಧನವನ್ನಾಗಿ ಮಾಡಿಕೊಂಡಿವೆ ಎನಿಸುತ್ತದೆ. ಸಂಸ್ಕೃತ ಜೈನ ಕಾವ್ಯಗಳೂ ಕವಿತೆ ಧರ್ಮದ ಅಂಗವಾಗಿರಬೇಕೆಂದು ಘೋಷಿಸುತ್ತವೆ.

ಮಾರ್ಗ ಸಾಹಿತ್ಯ ಪಂಡಿತ ಪ್ರಿಯವಾಗಿ ಚಂಪೂ ಶೈಲಿಯಲ್ಲಿ ಬೆಳೆಯುತ್ತಿದ್ದರೆ, ಇದಕ್ಕೆ ಪರ್ಯಾಯವಾಗಿ ಹನ್ನಡನೆಯ ಶತಮಾನದಲ್ಲಿ ಸಾಮಾನ್ಯ ಜನರಿಗೂ ಇಷ್ಟವಾಗುವ ಸರಳ ಭಾಷೆಯಲ್ಲಿ ವಚನ ಸಾಹಿತ್ಯವನ್ನು ವೀರಶೈವ ಶರಣರು ಸೃಷ್ಟಿಸಿದರು. ಬಸವಣ್ಣ, ಅಲ್ಲಮಪ್ರಭು, ಚನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದ ವಚನಕಾರರು ಕನ್ನಡ ಸಾಹಿತ್ಯಕ್ಕೆ ಹೊಸ ರೂಪವನ್ನು ನೀಡಿದರು. ಕನ್ನಡದ ವೈಶಿಷ್ಟ್ಯವಾಗಿದ್ದ ಷಟ್ಪದಿಯನ್ನು ವೀರಶೈವ ಕವಿಗಳು ಬಳಸಿಕೊಂಡು ಕಾವ್ಯಗಳನ್ನು ರಚಿಸಲು ಆರಂಭಿಸಿದರು. ರಾಘವಾಂಕನು ಬರೆದ ಹರಿಶ್ಚಂದ್ರ ಕಾವ್ಯ ವಾರ್ಧಕ ಷಟ್ಪದಿಯಲ್ಲಿದ್ದು ಕನ್ನಡ ಸಾಹಿತ್ಯದ ಮುಖ್ಯ ಮೈಲಿಗಲ್ಲು ಎನಿಸಿದೆ. ರಾಘವಾಂಕನ ಗುರು ಹರಿಹರನು ರಗಳೆ ಎಂಬ ಶೈಲಿಯನ್ನು ಅನುಸರಿಸಿ ಹಲವು ಸುಂದರ ರಗಳೆಗಳನ್ನು ರಚಿಸಿದನು.

ಷಟ್ಪದೀ ಕಾವ್ಯಗಳಲ್ಲಿ ಅಪೂರ್ವ ಸಿದ್ಧಿಯನ್ನು ಪಡೆದ ಕವಿ ಕುಮಾರವ್ಯಾಸ ಎಂದೇ ಪ್ರಸಿದ್ಧನಾದ ಗದುಗಿನ ನಾರಣಪ್ಪ ರೂಪಕ ಚಕ್ರವರ್ತಿ ಎಂಬ ಕೀರ್ತಿಯನ್ನು ಪಡೆದಿರುವ ಕುಮಾರವ್ಯಾಸ ಕರ್ಣಾಟಕ ಭಾರತ ಮಂಜರಿಯನ್ನು ರಚಿಸಿ ಕನ್ನಡದ ಹಿರಿಮೆಯನ್ನು ಹಿಮಾಲಯದ ಎತ್ತರಕ್ಕೆ ಏರಿಸಿದನು. ಮಹಾಭಾರತದ ಮೊದಲಿನ ಹತ್ತು ಪರ್ವಗಳ ಕಥೆಯನ್ನು ಕುಮಾರವ್ಯಾಸ ಸುಂದರವಾಗಿ ಹೇಳಿದ್ದಾನೆ. ಉಳಿದ ಎಂಟು ಪರ್ವಗಳನ್ನು ತಿಮ್ಮಣ್ಣ ಕವಿ ಬರೆದಿದ್ದರೂ ಆ ಭಾಗ್ಯ ಅಷ್ಟು ಜನಪ್ರಿಯವಾಗಿಲ್ಲ.

ವಾರ್ಧಕ ಷಟ್ಪದಿಯಲ್ಲಿ ಜೈಮಿನಿ ಭಾರತವನ್ನು ರಚಿಸಿದ ಲಕ್ಷ್ಮೀಶನು ಉಪಮಾಲೋಲ ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ಅಲಂಕಾರಗಳ ಪ್ರಯೋಗದಲ್ಲಿ ಇವನ ನೈಪುಣ್ಯ ಅದ್ಭುತವಾಗಿದೆ. ಗಮಕಿಗಳಿಗೆ ಅತ್ಯಂತ ಪ್ರಿಯವಾದ ಎರಡು ಕನ್ನಡ ಕಾವ್ಯಗಳೆಂದರೆ ಕುಮಾರವ್ಯಾಸನ ಮತ್ತು ಲಕ್ಷ್ಮೀಶನ ಕೃತಿಗಳೇ ಆಗಿವೆ. ಷಡಕ್ಷರಿ ಕವಿಯ ರಾಜಶೇಖರ ವಿಲಾಸ ಮತ್ತು ಶಬರ ಶಂಕರ ವಿಲಾಸ ಎಂಬ ಷಟ್ಪದೀ ಕಾವ್ಯಗಳು ಪಾಂಡಿತ್ಯಪೂರ್ಣವಾಗಿವೆ. ಜೈನಕವಿ ರತ್ನಾಕರವರ್ಣಿಯು ಸಾಂಗತ್ಯದಲ್ಲಿ ರಚಿಸಿರುವ ಭರತೇಶ ವೈಭವ ಸರಳ ಸುಲಭವಾಗಿದೆ.

ದಾಸ ಸಾಹಿತ್ಯವು ಕನ್ನಡದ ಉಸಿರು. ಭಕ್ತಿಯೇ ಇದರ ಜೀವ. ಪುರಂದರದಾಸರು, ಕನಕದಾಸರು ಕನ್ನಡದ ಭಾಷಾ ಸಂಪತ್ತನ್ನು ಬೆಳೆಸಿದವರು. ಜಗತ್ತಿನ ಬೇರೆ ಯಾವ ಭಾಷೆಯಲ್ಲಿ ಇಂತಹ ಸಕಲ ರಸಭರಿತ ಸಾಹಿತ್ಯವಿದೆ?

ತ್ರಿಪದೀ ಛಂದಸ್ಸಿನಲ್ಲಿ ಲೋಕದ ನೀತಿಯನ್ನು ಸರಳ ಗನ್ನಡದಲ್ಲಿ ಹೇಳಿರುವ ಸರ್ವಜ್ಞನ ಸಾವಿರಾರು ಪದಗಳು ಅಥವಾ ಪದ್ಯಗಳು ಕನ್ನಡದ ಸೊಬಗಿಗೆ ಸಾಕ್ಷಿಯಾಗಿವೆ. ಇವು ಮುಕ್ತಕ ಸಾಹಿತ್ಯದ ಶ್ರೇಷ್ಠ ಉದಾಹರಣೆಗಳು.

ಗದ್ಯ ಸಾಹಿತ್ಯವನ್ನು ನೋಡುವುದಾದರೆ ಜೈನ ಮತದ ಶಿವ ಕೊಟ್ಯಾಚಾರ್ಯನ ವಡ್ಡಾರಾಧನೆ ಪ್ರಾಚೀನತಮ ಕನ್ನಡ ಗದ್ಯಕಾವ್ಯ. ಇದು ಅನೇಕ ಸ್ವಾರಸ್ಯಪೂರ್ಣ ಕಥೆಗಳನ್ನೊಳಗೊಂಡಿದೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಆಶ್ರಯದಲ್ಲಿದ್ದ ಕೆಂಪುನಾರಾಯಣನ ಮುದ್ರಾಮಂಜೂಷವೂ ಉತ್ತಮ ಗದ್ಯ ಕಾವ್ಯ. ಮುದ್ದಣನ ರಾಮಾಶ್ವಮೇಧವನ್ನೂ ಇಲ್ಲಿ ನೆನಪಿಸಿಕೊಳ್ಳಬೇಕು.

ಇವೆಲ್ಲ ಹಳೆಗನ್ನಡದ ಮತ್ತು ನಡುಗನ್ನಡದ ಕಾವ್ಯಗಳಾದರೆ ಹೊಸ ಗನ್ನಡ ಹುಲುಸಾದ ಸಾಹಿತ್ಯದ ಬೆಳೆಯನ್ನು ಕೊಟ್ಟಿದೆ. ಇಂಗ್ಲಿಷ್ ಸಾಹಿತ್ಯದ ಪರಿಚಯವನ್ನು ಪಡೆದ ಹೊಸಗನ್ನಡದ ಕವಿಗಳು ಮತ್ತು ಲೇಖಕರು ನವನವೀನ ಸಾಹಿತ್ಯ ಪ್ರಕಾರಗಳಲ್ಲಿ ರಚನೆಗಳನ್ನು ಮಾಡಿದ್ದಾರೆ. ಸಾವಿರಾರು ಪ್ರತಿಭಾ ಸಂಪನ್ನರ ಸಣ್ಣ ಕಥೆಗಳು, ಭಾವಗೀತೆಗಳು, ಕಾದಂಬರಿಗಳು ಕನ್ನಡದ ಸಿರಿವಂತಿಕೆಯನ್ನು ಹೆಚ್ಚಿಸಿವೆ. ಸೌಂದರ್ಯದಲ್ಲೂ ಗಾಂಭೀರ್ಯದಲ್ಲೂ ವೈವಿಧ್ಯದಲ್ಲೂ ಭಾರತ ದೇಶದ ಯಾವುದೇ ಭಾಷೆಯ ಸಾಹಿತ್ಯಕ್ಕೆ ಸಮಾನಸ್ಕಂಧವಾಗಿ ನಿಲ್ಲಲು ಕನ್ನಡ ಸಾಹಿತ್ಯ ಇಂದು ಶಕ್ತವಾಗಿದೆ. ಪ್ರಾಚೀನ ಕನ್ನಡ ಸಾಹಿತ್ಯದ ಶೈಲಿಯಲ್ಲಿ ಛಂದೋಬದ್ಧವಾದ ಕಾವ್ಯಗಳನ್ನು ಇಂದೂ ಕೆಲವರು ಬರೆಯುತ್ತಿದ್ದರೆ, ಗೇಯಗುಣ ಪ್ರಧಾನವಾದ ಕಾವ್ಯಗಳನ್ನು, ಕಥಾವಸ್ತು ಪ್ರಧಾನವಾದ, ಚಿಂತನೆಗೆ ಪ್ರಥಮ ಸ್ಥಾನವನ್ನು ಕೊಡುವ ಗದ್ಯರೂಪದ ಕಾದಂಬರಿಗಳನ್ನು ಹಲವರು ಬರೆಯುತ್ತಿದ್ದಾರೆ. ಕನ್ನಡದಲ್ಲಿ ಏನಿದೆ? ಎಂದು ಕೇಳುವ ಕಾಲ ಈಗ ಇಲ್ಲ. ಕನ್ನಡದಲ್ಲಿ ಏನಿಲ್ಲ? ಎಂದು ಹೆಮ್ಮೆಯಿಂದ ಹೇಳುವ ಕಾಲ ಬಂದಿದೆ. ನವೋದಯ, ನವ್ಯ, ನವ್ಯೋತ್ತರ, ಬಂಡಾಯ ಮುಂತಾದ ಸಾಹಿತ್ಯ ರೀತಿಗಳು ಜಗತ್ತಿನ ಗಮನವನ್ನು ಸೆಳೆಯಬಲ್ಲ ಕೃತಿಗಳನ್ನು ಉತ್ಪಾದಿಸಿವೆ. ವೈಜ್ಞಾನಿಕ, ವೈಚಾರಿಕ ಸಾಹಿತ್ಯಕ್ಕೂ ಕನ್ನಡದಲ್ಲಿ ಕೊರತೆಯಿಲ್ಲ. ಜಾನಪದ ಸಾಹಿತ್ಯ ನಮ್ಮಲ್ಲಿರುವಷ್ಟು ಹುಲುಸಾಗಿ ಬೇರೆ ಯಾವ ಭಾಷೆಯಲ್ಲಿದೆ?

ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ನಾಡು ಸಾಹಿತ್ಯದ ಸಂಪತ್ತಿನಿಂದ ಕಂಗೊಳಿಸಿತು. ಹೊಸ ಭಗವದ್ಗೀತೆ ಎಂದು ಕರೆಸಿಕೊಂಡ ಮಂಕುತಿಮ್ಮನ ಕಗ್ಗವನ್ನು ರಚಿಸಿದ ಡಿವಿಜಿ, ಉತ್ತರ ಧ್ರುವದಿಂದ ದಕ್ಷಿಣ ಧ್ರುವದವರೆಗೆ ಚುಂಬಕ ಗಾಳಿ ಬೀಸುವಂತೆ ಮಾಡಿದ ದ.ರಾ. ಬೇಂದ್ರೆ, ಕನ್ನಡದ ಆಸ್ತಿ ಮಾಸ್ತಿ, ಕಡಲತೀರದ ಭಾರ್ಗವ ಕಾರಂತ, ಕಾದಂಬರೀ ಸಾರ್ವಭೌಮ ಅ.ನ.ಕೃ ಮುಂತಾದ ದಿಗ್ಗಜರು ಕನ್ನಡ ಸಾಹಿತ್ಯದ ಸಿರಿವಂತಿಕೆಯನ್ನು ಹೆಚ್ಚಿಸಿದರು. ಕಾವ್ಯ, ಕವನ, ಕಾದಂಬರಿ, ಕಥೆ ಎಲ್ಲ ಕ್ಷೇತ್ರಗಳಲ್ಲಿ ಕನ್ನಡದ ಕಾಂತಿ ಬೆಳಗಿತು.

ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯಾಕಾಶದಲ್ಲಿ ಪ್ರಕಾಶಿಸಿದ ಅತ್ಯಂತ ಉಜ್ವಲ ತಾರೆ ಕುವೆಂಪು (ಕೆ.ವಿ. ಪುಟ್ಟಪ್ಪ). ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಶಾಶ್ವತ ಮೌಲ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ಕೊಟ್ಟ ಕುವೆಂಪು ಕನ್ನಡ ಸಾಹಿತ್ಯ ಮಾರ್ಗದ ದೀಪಸ್ತಂಭ. ಸಣ್ಣ ಕವಿತೆಯಾಗಲಿ, ಮಹಾಕಾವ್ಯವಾಗಲಿ, ಅದರ ಒಂದು ಸಾಲನ್ನು ಓದಿದರೆ ಸಾಕು, ಇದು ಕುವೆಂಪು ಅವರದು ಎಂದು ಹೇಳಿಬಿಡಬಹುದು. ಅಂತಹ ಶೈಲಿ. ಪಂಪನ ವಿಕ್ರಮಾರ್ಜುನ ವಿಜಯದಷ್ಟೇ ಉತ್ಕೃಷ್ಟವಾಗಿರುವುದು ಕುವೆಂಪು ವಿರಚಿತ **ರಾಮಾಯಣ ದರ್ಶನ**. ಜಗತ್ತಿನ ಶ್ರೇಷ್ಠ ಮಹಾಕಾವ್ಯಗಳಲ್ಲೊಂದು. ಅದರ ಜೊತೆಗೆ ಎಷ್ಟು ಕವಿತೆಗಳು, ಎಷ್ಟು ನಾಟಕಗಳು, ಎಷ್ಟು ವಿಮರ್ಶೆಗಳು! ಬೇರೆ ಯಾರಲ್ಲಿ ಈ ವೈವಿಧ್ಯವಿದೆ?

ಕನ್ನಡ ಸಾಹಿತ್ಯ ಜಗತ್ತಿನ ಯಾವುದೇ ಭಾಷೆಯ ಸಾಹಿತ್ಯಕ್ಕೆ ಸಮಾನ ಸ್ಕಂಧವಾಗಿ ನಿಲ್ಲಬಲ್ಲದೆಂಬುದಕ್ಕೆ ಬೇರೆ ಸಾಕ್ಷಿ ಬೇಕೆ? ಇಪ್ಪತ್ತೊಂದನೆಯ ಶತಮಾನದಲ್ಲಿ ಇನ್ನೂ ಹಲವು ಶಾಖೋಪಶಾಖೆಗಳು ಕನ್ನಡದ ವೈಭವವನ್ನು ಹೆಚ್ಚಿಸುತ್ತಿವೆ. ಐತಿಹಾಸಿಕ ಕಾದಂಬರಿಗಳು, ವೈಜ್ಞಾನಿಕ ಗ್ರಂಥಗಳು, ಹಾಸ್ಯ ಸಾಹಿತ್ಯ ಇವೆಲ್ಲವೂ ಬೆಳೆಯುತ್ತಿವೆ. ಮಹಿಳಾ ಸಾಹಿತ್ಯದಲ್ಲಿ ನಮ್ಮದೇ ಮೇಲುಗೈ.

ಸಿರಿಗನ್ನಡಂ ಗೆಲ್ಗೆ
ಸಿರಿಗನ್ನಡಂ ಬಾಳ್ಗೆ

ಸ್ವಚ್ಛತೆ, ನೈರ್ಮಲ್ಯಕ್ಕಾಗಿ ರಾಜ್ಯದ 2,541 ಪಿಹೆಚ್‌ಸಿಗಳಿಗೆ 'ಕಾಯಕಲ್ಪ' ಪ್ರಶಸ್ತಿ ಪ್ರದಾನ



ಮೈಸೂರಿನ ಜೆ.ಕೆ.ಮೈದಾನದ ಪ್ಲಾಟಿನಂ ಜುಬಿಲಿ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯಾಧಿಕಾರಿಗಳಿಗೆ ಕಾಯಕಲ್ಪ ಪ್ರಶಸ್ತಿ ಪ್ರದಾನ ಮಾಡಿದರು. ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ ಹಾಗೂ ಅಧಿಕಾರಿಗಳನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ.6(ಆರ್‌ಕೆ)–ಮೈಸೂರಿನ ಜೆ.ಕೆ. ಮೈದಾನದ ಎಂಎಂಸಿಆರ್‌ಐ ಪ್ಲಾಟಿನಂ ಜುಬಿಲಿ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಸಮಾರಂಭದಲ್ಲಿ ಸ್ವಚ್ಛತೆ, ಶುಚಿತ್ವ ಮತ್ತು ನೈರ್ಮಲ್ಯ ಕಾಪಾಡಿಕೊಂಡಿರುವ ಮೈಸೂರಿನ ಐದು ಸೇರಿದಂತೆ ರಾಜ್ಯದ 2,541 ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ (PHC)ಗಳಿಗೆ 'ಕಾಯಕಲ್ಪ' ಪ್ರಶಸ್ತಿ ನೀಡಲಾಯಿತು.

2022–23ನೇ ಸಾಲಿನಲ್ಲಿ ಸ್ವಚ್ಛತೆ ನಿರ್ವಹಣೆ ಮಾಡಿದ ಆರೋಗ್ಯ ಕೇಂದ್ರಗಳು, ಸಾರ್ವಜನಿಕ ಆಸ್ಪತ್ರೆಗಳಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮೈಸೂರಿನಲ್ಲಿ ರಾಜ್ಯ ಮಟ್ಟದ 'ಕಾಯಕಲ್ಪ' ಪ್ರಶಸ್ತಿ ನೀಡಿದರು.

ಜಿಲ್ಲಾಸ್ಪತ್ರೆ ವಿಭಾಗದಲ್ಲಿ ಹಾಸನದ ಚಾಮರಾಜೇಂದ್ರ ಬೋಧನಾ ಆಸ್ಪತ್ರೆ ಪ್ರಥಮ ಬಹುಮಾನ ಪಡೆದುಕೊಂಡಿತು.

ತಾಲೂಕು ಆಸ್ಪತ್ರೆ ವಿಭಾಗದಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕು ಸಾರ್ವಜನಿಕ ಆಸ್ಪತ್ರೆಗೆ ಪ್ರಥಮ ಬಹುಮಾನ ಬಂದಿದೆ. ವಿಶೇಷ ವಿಭಾಗದ ಪ್ರಶಸ್ತಿಗೆ ಬೆಂಗಳೂರಿನ ಟ್ರಾಮಾ ಮತ್ತು ಎಮರ್ಜೆನ್ಸಿ ಕೇರ್ ಸೆಂಟರ್, ದಕ್ಷಿಣ ಕನ್ನಡ ಜಿಲ್ಲೆಯ ಲೇಡಿಗೋಷನ್ ಆಸ್ಪತ್ರೆ, ವಿಜಯಪುರ ಜಿಲ್ಲೆ, ಬಸವನ ಬಾಗೇವಾಡಿ ತಾಲೂಕು ಪ್ರಾಥಮಿಕ ಆರೋಗ್ಯ ಕೇಂದ್ರ ಕಾಯಕಲ್ಪ ಪ್ರಶಸ್ತಿಗೆ ಭಾಜನವಾಗಿದೆ.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಸಚಿವ ದಿನೇಶ್ ಗುಂಡೂರಾವ್ ಅವರು, ಆಸ್ಪತ್ರೆ ಪರಿಸರ ಚೆನ್ನಾಗಿದ್ದರೆ ಆರೋಗ್ಯ ಉತ್ತಮವಾಗಿರಲು ಸಾಧ್ಯ. ಸ್ವಚ್ಛ ಆಸ್ಪತ್ರೆಯಿಂದ ಮಾತ್ರ ಒಳ್ಳೆಯ ಚಿಕಿತ್ಸೆ ನೀಡಬಹುದು. ಅದೇ ಉದ್ದೇಶಕ್ಕಾಗಿ ಪ್ರತೀ ವರ್ಷ ಸ್ವಚ್ಛತೆ ಕಾಪಾಡುವ ಉತ್ತಮ ಆಸ್ಪತ್ರೆಗೆ ಕಾಯಕಲ್ಪ ಪ್ರಶಸ್ತಿ ನೀಡಲಾಗುತ್ತಿದೆ.

ಹಲವು ಆಸ್ಪತ್ರೆಗಳಲ್ಲಿ ವೈದ್ಯರು ಸರಿಯಾದ ಸಮಯಕ್ಕೆ ಹಾಜರಾಗುವುದಿಲ್ಲವೆಂಬ ದೂರುಗಳಿವೆ. ಅದರಿಂದಾಗಿ ಸಾರ್ವಜನಿಕರು ಚಿಕಿತ್ಸೆ ಲಭ್ಯವಾಗದೇ ಪರದಾಡುವಂತಾಗಿದೆ. ಈ ವ್ಯವಸ್ಥೆ ಸುಧಾರಣೆಯಾಗಬೇಕು ಎಂದ ಅವರು, ಬಡವರು ಬರುವ ಆಸ್ಪತ್ರೆಗಳಲ್ಲಿ ಸೇವೆ ಒದಗಿಸಿ ಜನರ ಆರೋಗ್ಯ ಗುಣಪಡಿಸಿ ಎಂದು ವೈದ್ಯರಿಗೆ ಕಿವಿಮಾತು ಹೇಳಿದರು.

ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ಆರೋಗ್ಯ ಇಲಾಖೆ ಕಾರ್ಯದರ್ಶಿ ಟಿ.ಕೆ.ಅನಿಲ್‌ಕುಮಾರ್, ಕಮಿಷ್ನರ್ ಡಿ.ರಂದೀಪ್, ನಿರ್ದೇಶಕಿ ಡಾ.ಬಿ.ಎಸ್.ಪುಷ್ಪಲತಾ, ನವದೆಹಲಿಯ ಎನ್‌ಹೆಚ್‌ಎಸ್‌ಆರ್‌ಸಿ ಸಲಹೆಗಾರ ಡಾ.ಜೆ.ಎನ್.ಶ್ರೀವಾಸ್ತವ್, ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ ಡಾ.ವೈ.ನವೀನ್ ಭಟ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ. ಗಾಯಿತ್ರಿ, ಎಂಎಂಸಿಆರ್‌ಐ ಡೀನ್ ಡಾ. ಕೆ.ಆರ್.ದಾಕ್ಷಾಯಿಣಿ, ಆರೋಗ್ಯ ಇಲಾಖೆ ವಿಭಾಗೀಯ ಜಂಟಿ ನಿರ್ದೇಶಕಿ ಡಾ. ಹೆಚ್.ಆರ್.ರಾಜೇಶ್ವರಿದೇವಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ. ಪಿ.ಸಿ.ಕುಮಾರಸ್ವಾಮಿ ಹಾಗೂ ಇತರರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಕಾಯಕಲ್ಪ ಪ್ರಶಸ್ತಿಗೆ ಭಾಜನವಾದ ಮೈಸೂರಿನ ಪಿಹೆಚ್‌ಸಿಗಳು

ಮೈಸೂರು,ಫೆ.6(ಆರ್‌ಕೆ)–ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನೀಡುವ ರಾಜ್ಯ ಮಟ್ಟದ 'ಕಾಯಕಲ್ಪ' ಪ್ರಶಸ್ತಿಗೆ ಮೈಸೂರು ಜಿಲ್ಲೆಯ 5 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಭಾಜನವಾಗಿವೆ. ಮೈಸೂರಿನ ಸರಸ್ವತಿಪುರಂ, ಟಿ.ಕೆ.ಲೇಔಟ್, ತಾಲೂಕಿನ ಗುಂಗ್ರಾಲ್ ಛತ್ರ, ಕೆಆರ್‌ನಗರ ತಾಲೂಕಿನ ಭೇರ್ಯ ಹಾಗೂ ಹೆಚ್.ಡಿ.ಕೋಟೆಯ ಮುಳ್ಳೂರು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಕಾಯಕಲ್ಪ ಪ್ರಶಸ್ತಿ ಲಭಿಸಿದ್ದು, ಸಚಿವ ದಿನೇಶ್ ಗುಂಡೂರಾವ್ ಪ್ರಶಸ್ತಿ ಪ್ರದಾನ ಮಾಡಿದರು. ಇಲಾಖೆ ನೀಡಿದ್ದ 8 ನಿಯಮಗಳನ್ನು ಪಾಲಿಸಿ ಸ್ವಚ್ಛತೆ, ನೈರ್ಮಲ್ಯ, ತ್ಯಾಜ್ಯ ವಿಲೇವಾರಿ, ಜಾಗೃತಿ, ಸೋಂಕು ತಡೆ, ಮೂಲ ಸೌಕರ್ಯ ಸೇರಿದಂತೆ ಅನುಷ್ಠಾನಕ್ಕಾಗಿ ಈ ಕೇಂದ್ರಗಳನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ ಎಂದು ಸಚಿವರು ನುಡಿದರು.

> **"ಮುಖ್ಯಮಂತ್ರಿಗಳ ತವರು ಜಿಲ್ಲೆಯ ಶೇ.10ರಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಮಾತ್ರ ಸ್ವಚ್ಛತೆ ಕಾಪಾಡಲಾಗಿದೆ ಎಂಬ ಸಮೀಕ್ಷಾ ವರದಿ ಇದೆ. ಸೌಲಭ್ಯ ಪಡೆಯಲು ಅವಕಾಶವಿದ್ದಾಗ್ಯೂ ಪ್ರಗತಿ ಸಾಧಿಸದಿರುವುದು ಸರಿಯಲ್ಲ. 2021, 22 ಮತ್ತು 23ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯ ಶೇ.10ರಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಮಾತ್ರ ಕಾಯಕಲ್ಪ ಪ್ರಶಸ್ತಿ ಲಭಿಸಿದೆ. ಅವುಗಳು ಮಾತ್ರ ಶೇ. 70ರಷ್ಟು ನೈರ್ಮಲ್ಯ ಕಾಪಾಡಿಕೊಂಡಿವೆ. ಇನ್ನುಳಿದ ಶೇ.90ರಷ್ಟು ಕೇಂದ್ರಗಳಲ್ಲಿ ಸ್ವಚ್ಛತೆ ಕಾಪಾಡದಿರುವುದು ಅಲ್ಲಿನ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿಗಳ ಸಾಧನೆ ತೋರುತ್ತದೆ. ಪ್ರಸಕ್ತ ಸಾಲಿನಲ್ಲಾದರೂ ಪ್ರಶಸ್ತಿಗೆ ಪ್ರಯತ್ನಿಸಿ.**
>
> – ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ.

ಬಿಜೆಪಿಯಿಂದ ತನಿಖಾ ಸಂಸ್ಥೆಗಳ ದುರ್ಬಳಕೆ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಾಗ್ದಾಳಿ

ಮೈಸೂರು,ಫೆ.6(ಆರ್‌ಕೆ)–ಬಿಜೆಪಿಯು ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ತಮ್ಮ ವಿರುದ್ಧ ಮಾತನಾಡುವವರನ್ನು ಹೆದರಿಸುತ್ತಿದೆ ಎಂದು ಸಚಿವ ದಿನೇಶ್ ಗುಂಡೂರಾವ್ ವಾಗ್ದಾಳಿ ನಡೆಸಿದ್ದಾರೆ.

ಸಭೆ–ಸಮಾರಂಭಗಳಲ್ಲಿ ಭಾಗವಹಿಸಲು ಮೈಸೂರಿಗೆ ಆಗಮಿಸಿದ್ದ ಅವರು, ಸರ್ಕಾರಿ ಅತಿಥಿ ಗೃಹದಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದರು. ಅಧಿಕಾರ ದುರ್ಬಳಕೆ ಮಾಡಿಕೊಂಡು ಕೇಂದ್ರದ ತನಿಖಾ ಸಂಸ್ಥೆಗಳ ಮೂಲಕ ದಾಳಿ ನಡೆಸಿ ತಮ್ಮ ವಿರುದ್ಧ ಧ್ವನಿ ಎತ್ತುವವರ ಧ್ವನಿ ಅಡಗಿಸಲು ಪ್ರಯತ್ನಿಸುತ್ತಿರುವ ಬಿಜೆಪಿಯವರು, ಅನ್ಯಾಯದ ವಿರುದ್ಧ ಹೋರಾಡುವವರನ್ನು ಬೆದರಿಸುತ್ತಿದ್ದಾರೆ ಎಂದು ಆರೋಪಿಸಿದರು.

ಮೋದಿ ಪ್ರಧಾನಿ ಆದಾಗಿನಿಂದಲೂ ಪ್ರಜಾಪ್ರಭುತ್ವದ ಕಗ್ಗೊಲೆಯಾಗುತ್ತಿದೆ. ದೇಶದಲ್ಲಿ ಸರ್ವಾಧಿಕಾರಿ ಧೋರಣೆ ಮುಂದುವರಿದಿದೆ. ಬಿಜೆಪಿಯವರೇ ಅವರ ವರಿಷ್ಠರನ್ನು ಪ್ರಶ್ನಿಸುವಂತಿಲ್ಲ. ಅಮಿತ್ ಮಾಡುವ ಅರ್ಥಂಬರ್ಥ ಕೆಲಸವನ್ನು ಸಹಿಸಿಕೊಳ್ಳಬೇಕಾದ ಅನಿವಾರ್ಯತೆ ಬಿಜೆಪಿಯವರಿಗಿದೆ ಎಂದರು.

ರಾಜ್ಯಕ್ಕೆ ಬರ ಪರಿಹಾರ ನೀಡಲಿಲ್ಲ. ಅಭಿವೃದ್ಧಿಗೆ ಅನುದಾನ ಮಂಜೂರು ಮಾಡದಿರುವುದರಿಂದ ನಾವು ದೆಹಲಿಯಲ್ಲಿ ಪ್ರತಿಭಟನೆ ಮಾಡಬೇಕಾಗಿದೆ. ಇದು ಕರ್ನಾಟಕ ಮಾತ್ರವಲ್ಲದೆ ಬಿಜೆಪಿ ಸರ್ಕಾರವಿಲ್ಲದ ಎಲ್ಲಾ ರಾಜ್ಯಗಳಲ್ಲಿಯೂ ಇದೇ ಪರಿಸ್ಥಿತಿ ಇದೆ. ಅದಕ್ಕಾಗಿ ನಾವು ಬಿಜೆಪಿ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದೇವೆ ಎಂದು ದಿನೇಶ್ ಗುಂಡೂರಾವ್ ತಿಳಿಸಿದರು.

ಒಕ್ಕೂಟ ವ್ಯವಸ್ಥೆಗೆ ಧಕ್ಕೆಯಾಗುತ್ತದೆ ಎಂದು ಅನ್ಯಾಯ ಸಹಿಸಲು ಸಾಧ್ಯವಿಲ್ಲ. ಬಿಜೆಪಿ ಸಂಸದರಿಗೆ ಮೋದಿ ಮುಂದೆ ನಿಂತು ಕೇಳುವ ಧೈರ್ಯವಿಲ್ಲ. ಸುಖಾಸುಮ್ಮನೆ ನಮ್ಮ ಮೇಲೆ ಕೂಗಾಡುತ್ತಾರೆ ಎಂದು ಬಿಜೆಪಿ ವಿರುದ್ಧ ಕಿಡಿಕಾರಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Vishveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ರಘುಲೀಲಾ ಸಂಗೀತ ಶಾಲೆಯ ನೂರಾರು ಸದಸ್ಯರಿಂದ ಅಯೋಧ್ಯೆ 'ಬಾಲರಾಮ'ನಿಗೆ ಸಂಕೀರ್ತನೆ ಭಕ್ತಿ ಸಮರ್ಪಣೆ



ಉತ್ತರಪ್ರದೇಶದ ಅಯೋಧ್ಯೆಯ ಬಾಲರಾಮನ ಸನ್ನಿಧಿಯಲ್ಲಿ ಸಂಕೀರ್ತನೆ ನೆರವೇರಿಸುವ ಮೂಲಕ ಮೈಸೂರಿನ ರಘುಲೀಲಾ ಸಂಗೀತ ಶಾಲೆಯ ನೂರಾರು ಸದಸ್ಯರು ಶ್ರೀ ರಾಮ ಸ್ಮರಣೆ ಮಾಡಿದರು. ಬಾಲರಾಮ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ನಂತರ ನಿತ್ಯ ಲಕ್ಷಾಂತರ ಭಕ್ತರು ಅಯೋಧ್ಯೆಗೆ ಭೇಟಿ ನೀಡುತ್ತಿದ್ದು, ಮೈಸೂರಿನಿಂದಲೂ ಸಹಸ್ರಾರು ಸಂಖ್ಯೆಯ ಭಕ್ತರು ಬಾಲರಾಮನ ದರ್ಶನಕ್ಕೆ ತೆರಳುತ್ತಿದ್ದಾರೆ.

ಶಾಲಾ ಮಕ್ಕಳಿಗೆ ಪೌಷ್ಟಿಕತೆಗಾಗಿ ರಾಗಿ ಮಾಲ್ಟ್

● ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಹಿತಿ ● ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ರಾಗಿ ಮಾಲ್ಟ್ ಪರೀಕ್ಷೆ ● ಶಿಕ್ಷಣ ಇಲಾಖೆಯಲ್ಲಿ ಸವಾಲಿನ ಜೊತೆಗೆ ಸಮಸ್ಯೆಗಳೂ ಇವೆ ● ತೇರ್ಗಡೆ ಹೊಂದುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ

ಮೈಸೂರು, ಫೆ.6(ಬಿಎಲ್‌ಯು)- ರಾಜ್ಯಾದ್ಯಂತ ಶಾಲಾ ಮಕ್ಕಳಿಗೆ ಕ್ಷೀರಭಾಗ್ಯದ ಹಾಲಿನ ಜೊತೆಗೆ ರಾಗಿ ಮಾಲ್ಟ್ ನೀಡುವ ಯೋಜನೆಯನ್ನು ಶೀಘ್ರವೇ ಜಾರಿ ಮಾಡಲಾಗುವುದು ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಚಾರ ತಿಳಿಸಿದ ಅವರು, ಕ್ಷೀರಭಾಗ್ಯ ಯೋಜನೆಯಲ್ಲಿ ಈಗ ವಾರದಲ್ಲಿ ಮೂರು ದಿನ ಹಾಲು ನೀಡಲಾಗುತ್ತಿದೆ. ಇನ್ನು ಮುಂದೆ ಹಾಲಿಗೆ ರಾಗಿ ಮಾಲ್ಟ್ ಪೌಡರ್ ಮಿಶ್ರಣ ಮಾಡಿ ನೀಡಲು ಚಿಂತನೆ ನಡೆಸಲಾಗಿದೆ. ಹಾಲು ಮಿಶ್ರಿತ ರಾಗಿ ಮಾಲ್ಟ್ ಕುಡಿಯುವುದರಿಂದ ಮಕ್ಕಳಲ್ಲಿ ಪೌಷ್ಟಿಕತೆ ಹೆಚ್ಚಾಗಲಿದೆ ಎಂದು ಅಭಿಪ್ರಾಯಪಟ್ಟರು.

ಮಕ್ಕಳಿಗೆ ನೀಡುವ ರಾಗಿ ಮಾಲ್ಟ್ ಅನ್ನು ಮೈಸೂರಿನ ಸಿಎಫ್‌ಟಿಆರ್‌ಐನಲ್ಲಿ ಪರೀಕ್ಷೆಗೊಳಪಡಿಸಲಾಗುತ್ತಿದೆ. ಸದ್ಯದಲ್ಲೇ ಈ ಯೋಜನೆ ಶೀಘ್ರವೇ ಜಾರಿಗೆ ತರಲಾಗುವುದು ಎಂದು ಹೇಳಿದರು.

ಈ ಹಿಂದೆ ಮಕ್ಕಳಿಗೆ ವಾರದಲ್ಲಿ ಒಂದು ಮೊಟ್ಟೆ ನೀಡಲಾಗುತ್ತಿತ್ತು. ಆದರೆ, ನಾವು ಎರಡು ಮೊಟ್ಟೆ ಕೊಡುತ್ತಿದ್ದೇವೆ. ಈ ಎಲ್ಲಾ ಯೋಜನೆಗಳ ಮೂಲಕ ಮಕ್ಕಳಲ್ಲಿ ಪೌಷ್ಟಿಕತೆಯ ಪ್ರಮಾಣ ಹೆಚ್ಚು ಮಾಡಲು ಪ್ರಯತ್ನ ಮಾಡುತ್ತಿದ್ದೇವೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಸ್ಪಷ್ಟಪಡಿಸಿದರು.

ಕರ್ನಾಟಕದಲ್ಲಿ 48 ಸಾವಿರ ಶಾಲೆಗಳಿದ್ದು, 1.20 ಕೋಟಿ ವಿದ್ಯಾರ್ಥಿಗಳಿದ್ದಾರೆ. ದ್ವಿತೀಯ ಪಿಯುಸಿ, ಎಸ್‌ಎಸ್‌ಎಲ್‌ಸಿಯಲ್ಲಿ ಮೂರು ಪರೀಕ್ಷೆಗಳ ವ್ಯವಸ್ಥೆ ಜಾರಿಗೊಳಿಸಿದ್ದು, ಇದರಿಂದ ಶಿಕ್ಷಣದ ಗುಣಮಟ್ಟ ಹೆಚ್ಚಾಗಿ ತೇರ್ಗಡೆಯಾಗುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತದೆ. ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 1.20 ಲಕ್ಷ ಮಕ್ಕಳು ಹಾಜರಾಗಿದ್ದರು. ಇವರಲ್ಲಿ 42 ಸಾವಿರ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಮಾರ್ಕ್ಸ್‌ಕಾರ್ಡ್‌ನಲ್ಲಿ ಸಪ್ಲಿಮೆಂಟ್ರಿ ಪದ ತೆಗೆದಿದ್ದೇವೆ. ಇಂತಹ ಹಲವು ಸುಧಾರಿತ ಕ್ರಮಗಳ ಮೂಲಕ ಶಿಕ್ಷಣದ ಗುಣಮಟ್ಟ ಹೆಚ್ಚು ಮಾಡಲು ನಮ್ಮ ಸರ್ಕಾರ ಹಲವು ಕ್ರಮ ಕೈಗೊಳ್ಳುತ್ತಿದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನನಗೆ ಬೇರೆ ಖಾತೆ ನೀಡಿದ್ದರು. ಆದರೆ ಉತ್ತಮವಾಗಿ ಕೆಲಸ ಮಾಡುತ್ತೇನೆ ಎಂಬ ವಿಶ್ವಾಸದಿಂದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನನಗೆ ಶಿಕ್ಷಣ ಖಾತೆ ನೀಡಲು ಶಿಫಾರಸು ಮಾಡಿದರು. ಶಿಕ್ಷಣ ಇಲಾಖೆ ಬಹಳ ದೊಡ್ಡದಿದ್ದು, ಇಲ್ಲಿ ಬಹಳಷ್ಟು ಸವಾಲು ಹಾಗೂ ಸಮಸ್ಯೆಗಳಿವೆ. ಅವುಗಳನ್ನು ಸಮರ್ಥವಾಗಿ ನಿಭಾಯಿಸುತ್ತಿದ್ದೇನೆ ಎಂದು ಹೇಳಿದರು.



ಮೈಸೂರಿನ ಸರ್ಕಾರಿ ಅತಿಥಿ ಗೃಹದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾತನಾಡಿದರು. ಎಂಎಲ್‌ಸಿ ಮರಿತಿಬ್ಬೇಗೌಡ, ಮೈಸೂರು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಇದ್ದಾರೆ.

ನಮ್ಮ ಪಾಲಿನ ಹಕ್ಕಿಗಾಗಿ ದೆಹಲಿಯಲ್ಲಿ ಹೋರಾಟ

ಕೇಂದ್ರ ಸರ್ಕಾರ ಮಕ್ಕಳು ವಿದ್ಯಾಭ್ಯಾಸ ಮಾಡುವ ಶಿಕ್ಷಣ ವಿಚಾರದಲ್ಲೂ ತಾರತಮ್ಯ ತೋರುತ್ತಿದೆ. ಮಾನ ಮರ್ಯಾದೆ ಇಲ್ಲದ ಕೇಂದ್ರ ಸರ್ಕಾರ ದೇವರಂತಹ ಮಕ್ಕಳಿಗೆ ನೀಡಬೇಕಾದ ಹಣವನ್ನೂ ಕೊಟ್ಟಿಲ್ಲ ಎಂದು ಇದೇ ವೇಳೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ದೂರಿದರು.

ಸರ್ವ ಶಿಕ್ಷಣ ಅಭಿಯಾನದಡಿ ಪ್ರತಿ ಮಗುವಿಗೆ ಸರಾಸರಿ 5,500 ರೂ. ನೀಡಬೇಕು. ಆದರೆ ಕೇಂದ್ರ ಸರ್ಕಾರ ಕರ್ನಾಟಕಕ್ಕೆ 2,400 ರೂ. ನೀಡುತ್ತಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕಕ್ಕೆ ಶೇಕಡ 10ರಿಂದ 15ರಷ್ಟು ವ್ಯತ್ಯಾಸವಿದೆ ಎಂದು ದೂರಿದರು.

ಈ ತಾರತಮ್ಯ ನಿವಾರಣೆ ಮಾಡುವಂತೆ ಕೇಂದ್ರ ಮಾನವ ಸಂಪನ್ಮೂಲ ಸಚಿವ ಧರ್ಮೇಂದ್ರ ಪ್ರಧಾನ್‌ಗೆ ಪತ್ರ ಕೂಡ ಬರೆದಿದ್ದೇನೆ. ಮುಖತಃ ಭೇಟಿ ಮಾಡಿ ಮನವಿ ಮಾಡಲು ಈ ತನಕ ಅವರು ಅವಕಾಶವನ್ನೇ ಕೊಟ್ಟಿಲ್ಲ. ಹೀಗಿರುವಾಗ ನಮ್ಮ ಪಾಲಿನ ಹಕ್ಕಿಗಾಗಿ ದೆಹಲಿಯಲ್ಲಿ ಪ್ರತಿಭಟನೆ ಮಾಡುತ್ತಿದ್ದೇವೆ. ಇದರಲ್ಲಿ ತಪ್ಪೇನಿದೆ ಎಂದು ಮಧು ಬಂಗಾರಪ್ಪ ಪ್ರಶ್ನಿಸಿದರು.

ಅವನ್ಯಾರೊ ಚಕ್ರವರ್ತಿ ಸೂಲಿಬೆಲೆ ಅಂತೆ, ತಲೆಹರಟೆ....

ಶುಕ್ರವಾರ ನಮಾಜ್ ಮಾಡಲು ಅವಕಾಶ ನೀಡುವ ನಿಟ್ಟಿನಲ್ಲಿ ಪರೀಕ್ಷಾ ವೇಳಾಪಟ್ಟಿ ಬದಲಾಯಿಸಲಾಗಿದೆ ಎಂಬ ಚಕ್ರವರ್ತಿ ಸೂಲಿಬೆಲೆ ಹೇಳಿಕೆಗೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಕೆಂಡಾಮಂಡಲರಾದರು. 'ಅವನ್ಯಾರೋ ಚಕ್ರವರ್ತಿ ಸೂಲಿಬೆಲೆ ಅಂತೆ, ತಲೆಹರಟೆ, ಅವನಿಗೆ ಮಾನ ಮರ್ಯಾದೆ ಇಲ್ಲ. ಶುಕ್ರವಾರ ನಮಾಜ್ ಮಾಡಲು ಅವಕಾಶ ನೀಡಲು ಪರೀಕ್ಷಾ ವೇಳಾಪಟ್ಟಿ ಬದಲಾಯಿಸಲಾಗಿದೆ ಎಂದು ಟ್ವೀಟ್ ಮಾಡಿದ್ದಾನೆ. ಇದು ವಿಷ ಬೀಜ ಬಿತ್ತುವ ಕೆಲಸ ಅಲ್ಲವೇ? ಎಂದು ಖಾರವಾಗಿ ಪ್ರಶ್ನಿಸಿದರು.

ಕಾಮನ್ ಸೆನ್ಸ್ ಇಲ್ಲದೆ ಏನೇನೊ ಮಾತನಾಡುತ್ತಾನೆ. ಇಂತಹ ಭಾವನಾತ್ಮಕ ವಿಚಾರ ಮಾತನಾಡಿದಷ್ಟು, ಜನರು ಇವರನ್ನು ದೂರ ತಳ್ಳುತ್ತಾರೆ ಎಂದು ಟಾಂಗ್ ನೀಡಿದರು. ಪಿಯುಸಿ ಪರೀಕ್ಷೆ ಇರುವ ಕಾರಣಕ್ಕೆ ಸ್ಥಳ ಸರಿದೂಗಿಸುವ ಹಿನ್ನೆಲೆಯಲ್ಲಿ ಸಮಯ ಬದಲಾವಣೆ ಮಾಡಲಾಗಿದೆ. ಆದರೆ ವಾಸ್ತವತೆ ತಿಳಿದರೂ ಜನರನ್ನು ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ಚಕ್ರವರ್ತಿ ಸೂಲಿಬೆಲೆ ವಿರುದ್ಧ ಸಾಕಷ್ಟು ದೂರುಗಳಿವೆ. ಇಂತಹವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುತ್ತೇವೆ ಎಂದು ಮಧು ಬಂಗಾರಪ್ಪ ಎಚ್ಚರಿಸಿದರು.


ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯ ವೆಚ್ಚದ ಹಣವನ್ನು ವಿದ್ಯಾರ್ಥಿಗಳಿಂದ ವಸೂಲಿ ಮಾಡುತ್ತಿರುವ ಗತಿಗೆಟ್ಟ ಸರ್ಕಾರ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಟ್ವೀಟ್ ಮಾಡಿದ್ದಾರೆ. ಕುಮಾರಸ್ವಾಮಿ ಹೇಳಿದಂತೆ ನಮ್ಮ ಸರ್ಕಾರ ಗತಿಗೆಟ್ಟಿಲ್ಲ. ಶುಲ್ಕ ವಿಧಿಸುವುದು ಸರ್ಕಾರದ ನಿಯಮ. ಆದರೆ ಮುಖ್ಯಮಂತ್ರಿ ಆಗಿದ್ದವರಿಗೆ ಇದು ತಿಳಿಯಬೇಕಿತ್ತು. ಯಾವುದೋ ಮೂಲೆಯಲ್ಲಿ ಕುಳಿತು ಹೀಗೆ ಟ್ವೀಟ್ ಮಾಡುವುದು ಸರಿಯಲ್ಲ ಎಂದು ಮಧು ಬಂಗಾರಪ್ಪ ಆಕ್ರೋಶ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯಲ್ಲಿ ಯಾರು ಗೆಲ್ಲುತ್ತಾರೋ ಅವರಿಗೆ ಹೈಕಮಾಂಡ್ ಟಿಕೆಟ್ ನೀಡುತ್ತದೆ. ಇದರಲ್ಲಿ ಸಚಿವರು, ಶಾಸಕರು ಹಾಗೂ ಕಾರ್ಯಕರ್ತರು ಎಂಬ ಭೇದವಿಲ್ಲ. ಗೆಲ್ಲುವ ಅಭ್ಯರ್ಥಿ ಪರಾಮರ್ಶಿಸಿ ಟಿಕೆಟ್ ನೀಡಲಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ಕತ್ತು ಹಿಸುಕಿ ಪತ್ನಿ ಕೊಂದ ಪತಿ ಸೆರೆ

ಮೈಸೂರು,ಫೆ.6(ಆರ್‌ಕೆ)-ಕತ್ತು ಹಿಸುಕಿ ಪತ್ನಿ ಹತ್ಯೆಗೈದಿದ್ದ ಪತಿಯನ್ನು ಉದಯಗಿರಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ರಾಜೀವ್‌ನಗರದ ನವೀದಾಬಿ ಕೊಲೆಯಾದವರು. ಫೆಬ್ರವರಿ 4ರಂದು ಸಂಜೆ ಪತಿ ಅಕ್ಬರ್ ಅಲಿ ತನ್ನ ಪತ್ನಿಯನ್ನು ಹತ್ಯೆಗೈದಿದ್ದ. ಸ್ಥಳಕ್ಕೆ ಧಾವಿಸಿದ ಉದಯಗಿರಿ ಠಾಣೆ ಪೊಲೀಸರು, ಆರೋಪಿಯನ್ನು ಬಂಧಿಸಿದ್ದಾರೆ. ತಾನು ಮಾಡಿದ್ದ ಸಾಲ ತೀರಿಸಲು ಹಣಕ್ಕೆ ಪೀಡಿಸುತ್ತಿದ್ದ ಆತ, ಆ ವಿಷಯದಲ್ಲಿ ಪತ್ನಿಯೊಂದಿಗೆ ನಿತ್ಯ ಜಗಳವಾಡುತ್ತಿದ್ದ. ಭಾನುವಾರ ಸಂಜೆ ಕತ್ತು ಹಿಸುಕಿ ಕೊಲೆಗೈದು ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಸ್ಥಳ ಮಹಜರು ನಡೆಸಿದ ಉದಯಗಿರಿ ಠಾಣೆ ಪೊಲೀಸರು, ಪ್ರಕರಣ ದಾಖಲಿಸಿ ತನಿಖೆ ನಡೆಸುತ್ತಿದ್ದಾರೆ


13 ವರ್ಷಗಳ ಹಿಂದೆ ಮದುವೆಯಾಗಿದ್ದ ದಂಪತಿಗೆ ಮೂವರು ಮಕ್ಕಳಿದ್ದಾರೆ. ಆಟೋ ಓಡಿಸಿಕೊಂಡಿದ್ದ ಅಕ್ಬರ್ ಅಲಿಗೆ ಹೃದಯಾಘಾತವಾಗಿದ್ದರಿಂದ ಪತ್ನಿ ಮನೆಯವರೇ ರಾಜೀವ್ ನಗರದಲ್ಲಿ ಆಟೋಮೊಬೈಲ್ ಸೇರಿದಂತೆ ವಿವಿಧ ವ್ಯಾಪಾರ ಮಾಡಲು ಹಣ ನೀಡಿದ್ದರಾದರೂ, ಸರಿಯಾಗಿ ಬಳಸಿಕೊಳ್ಳದೆ ಸಾಲ ಮಾಡಿಕೊಂಡಿದ್ದ ಅಕ್ಬರ್ ಅಲಿ, ಸಾಲ ತೀರಿಸಲು ಹಣ ತರುವಂತೆ ಪತ್ನಿಗೆ ಒತ್ತಾಯಿಸುತ್ತಿದ್ದು, ಅದಕ್ಕೊಪ್ಪದ ಕಾರಣ ಆಕೆಯನ್ನು ಹತ್ಯೆ ಮಾಡಿದ್ದಾನೆ ಎಂಬುದು ವಿಚಾರಣೆ ವೇಳೆ ತಿಳಿದುಬಂದಿದೆ.



ಮೈಸೂರು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆ ವಾಹನ ಚಾಲಕರು ಮತ್ತು ಡಿ ದರ್ಜೆ ನೌಕರರ ಬೇಡಿಕೆಗಳ ಈಡೇರಿಕೆಗಾಗಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಎಂಎಲ್‌ಸಿ ಮರಿತಿಬ್ಬೇಗೌಡ, ಉಪನಿರ್ದೇಶಕ ಪಾಂಡು, ಸರ್ಕಾರಿ ನೌಕರರ ಸಂಘದ ಜಿಲ್ಲಾ ಕಾರ್ಯದರ್ಶಿ ರೇವಣ್ಣ, ಲಿಪಿಕ ನೌಕರ ಸಂಘದ ಅಧ್ಯಕ್ಷ ಆನಂದ್, ಜಿಲ್ಲಾ ಕಾರ್ಯದರ್ಶಿ ರೂಪ, ಖಜಾಂಚಿ ಸುಬ್ರಹ್ಮಣ್ಯ, ಮಂಜುನಾಥ್, ಮನು, ರಾಜಶೇಖರ್ ಇದ್ದರು.

ಬ್ರಿಟನ್ ರಾಜಕುಮಾರ 3ನೇ ಚಾರ್ಲ್ಸ್‌ಗೆ ಕ್ಯಾನ್ಸರ್!

ಲಂಡನ್: ಬ್ರಿಟನ್ ರಾಜ 3ನೇ ಚಾರ್ಲ್ಸ್ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದಾರೆ. ಈ ಮಾಹಿತಿಯನ್ನು ಬಕಿಂಗ್ಹ್ಯಾಮ್ ಅರಮನೆ ಸ್ಪಷ್ಟಪಡಿಸಿದೆ. ಕಿಂಗ್ ಚಾರ್ಲ್ಸ್ ಒಂದು ರೀತಿಯ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ ಎಂದು ಬಕಿಂಗ್ ಹ್ಯಾಮ್ ಅರಮನೆ ಹೊರಡಿಸಿದ ಹೇಳಿಕೆ ತಿಳಿಸಿದೆ. ದಿನನಿತ್ಯದ ಚಿಕಿತ್ಸೆಯಲ್ಲಿ ಕಿಂಗ್ ಚಾರ್ಲ್ಸ್‌ಗೆ ಕ್ಯಾನ್ಸರ್ ಇರುವುದು ಪತ್ತೆಯಾಗಿದೆ. ಹೀಗಾಗಿ ಕಿಂಗ್ ಚಾರ್ಲ್ಸ್ ಸಾರ್ವಜನಿಕವಾಗಿ ಯಾವುದೇ ಕಾರ್ಯಕ್ರಮದಲ್ಲಿ ತೊಡಗುವುದಕ್ಕೆ ವೈದ್ಯರು ನಿರಾಕರಿಸಿದ್ದಾರೆ. ಆದಾಗ್ಯೂ, ಈ ಅವಧಿಯಲ್ಲಿ ಅವರು ಅಧಿಕೃತ ಕೆಲಸವನ್ನು ಮುಂದುವರಿಸುತ್ತಾರೆ. ಸುದ್ದಿ ತಿಳಿದ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಶೀಘ್ರ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ. ಅವರು ಶೀಘ್ರದಲ್ಲೇ ಪೂರ್ಣ ಶಕ್ತಿಯೊಂದಿಗೆ ಮರಳುವುದರಲ್ಲಿ ನನಗೆ ಯಾವುದೇ ಸಂದೇಹವಿಲ್ಲ ಎಂದು ಸಾಮಾಜಿಕ ಮಾಧ್ಯಮದ ಪೋಸ್ಟ್ ಮೂಲಕ ತಿಳಿಸಿದ್ದಾರೆ.



'ಷೂ ವರ್ಲ್ಡ್'ನಲ್ಲಿ ಒಂದು ಕೊಂಡರೆ ಮತ್ತೊಂದು ಕೊಡುಗೆ

ಮೈಸೂರು, ಫೆ.6-ಮೈಸೂರಿನ ನೂತನ ಶಾಖೆಯಾದ ಶಿವರಾಂಪೇಟೆಯಲ್ಲಿರುವ (ಮನ್ನಾರ್ಸ್ ಮಾರ್ಕೆಟ್ ಎದುರು) 'ಷೂ ವರ್ಲ್ಡ್'ನಲ್ಲಿ ಸ್ತ್ರೀ ಮತ್ತು ಪುರುಷರ ಗುಣಮಟ್ಟದ, ಉತ್ತಮ ದರ್ಜೆಯ ಚಪ್ಪಲಿ, ಷೂ ಮತ್ತು ಇತರೆ ಎಲ್ಲಾ ಇನ್‌ಹೌಸ್ ಬ್ರಾಂಡ್‌ನ ಪಾದರಕ್ಷೆಗಳ ಖರೀದಿಯ ಮೇಲೆ 1+1 ಆಫರ್ (1 ಖರೀದಿಸಿದಾಗ 1 ಉಚಿತ) ನೀಡಲಾಗುತ್ತಿದೆ. 'ಷೂ ವರ್ಲ್ಡ್' 25 ವರ್ಷಗಳಿಂದ ಮೈಸೂರಿಗರ ನೆಚ್ಚಿನ ಫುಟ್‌ವೇರ್ ಮತ್ತು ಷೂ ಖರೀದಿ ಕೇಂದ್ರವಾಗಿ ಪ್ರಸಿದ್ಧಿ ಪಡೆದಿದೆ. 100 ರೂ.ನಿಂದ 9,999 ರೂ.ಗಳವರೆಗೆ ನಾನಾ ಕಂಪನಿಯ ಫುಟ್‌ವೇರ್‌ಗಳು ಮಾರಾಟಕ್ಕಿವೆ.



ಮೆಡಿಕಲ್ ಫುಟ್‌ವೇರ್ಸ್: ವೈದ್ಯರು ಸಲಹೆ ನೀಡುವ ಹಾಗೂ ಆರೋಗ್ಯದ ಸಮಸ್ಯೆ ಇರುವವರು ಬಳಕೆ ಮಾಡುವ ಚಪ್ಪಲಿ ಮತ್ತು ಷೂಗಳು ಇಲ್ಲಿ ಮಾರಾಟಕ್ಕಿವೆ. MCP & Medifeet - Ortho & Diabetic ಪಾದರಕ್ಷೆಗಳೂ ಸಹ ಲಭ್ಯವಿರುತ್ತದೆ. ಈ ರಿಯಾಯಿತಿ ಮಾರಾಟವು ಫೆ.25ರವರೆಗೆ ಇರುತ್ತದೆ.

ಇಂದು ಸಾಮಾನ್ಯ ಸಭೆ

ಮೈಸೂರು: ಇಲ್ಲಿನ ತಾಲ್ಲೂಕು ಪಂಚಾಯತ್‌ನ ಆಡಳಿತಾಧಿಕಾರಿ ಅಧ್ಯಕ್ಷತೆಯಲ್ಲಿ ಫೆ.7ರಂದು ಬೆಳಗ್ಗೆ 10:30ಕ್ಕೆ ಮೈಸೂರು ತಾಲೂಕು ಪಂಚಾಯಿತಿ (ಮಿನಿ ವಿಧಾನಸೌಧ ಕೊಠಡಿ ಸಂಖ್ಯೆ-212) ಸಭಾಂಗಣದಲ್ಲಿ ಸಾಮಾನ್ಯ ಸಭೆಯನ್ನು ಕರೆಯಲಾಗಿದೆ. ಸಭೆಗೆ ತಾಲೂಕಿನ ಎಲ್ಲಾ ತಾಲೂಕು ಮಟ್ಟದ ಅಧಿಕಾರಿಗಳು ಹಾಜರಾಗುವಂತೆ ತಾಪಂನ ಆಡಳಿತಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀರಂಗಪಟ್ಟಣದಲ್ಲಿ ಗ್ಯಾರಂಟಿ ಫಲಾನುಭವಿಗಳ ಸಮಾವೇಶ, ಸಾಲ ಸೌಲಭ್ಯ ವಿತರಣೆ



ಜೆಡಿಎಸ್, ಬಿಜೆಪಿ ವಿರುದ್ಧ ಸಚಿವ ಎನ್. ಚಲುವರಾಯಸ್ವಾಮಿ ವಾಗ್ದಾಳಿ

ಶ್ರೀರಂಗಪಟ್ಟಣ, ಫೆ.6– ಕಳೆದ ಐದು ವರ್ಷದ ಹಿಂದೆ ನಮ್ಮ ಪಕ್ಷದ ಅಭ್ಯರ್ಥಿಗಳು ಎಲ್ಲಾ ಸೋತಿದ್ದೇವು, ಆಗ ಗೆದ್ದಿದ್ದ ಜೆಡಿಎಸ್‌ನವರನ್ನು ಸರಪಳಿ ಹಾಕಿದ್ರು ಹಿಡಿಯೋಕೆ ಆಗಿರಲಿಲ್ಲ. ಅವರ ಆರ್ಭಟಗಳನ್ನು ನೋಡೋಕೂ ಆಗುತ್ತಿರಲಿಲ್ಲ. ನಮ್ಮ ಗ್ಯಾರಂಟಿ ಯೋಜನೆಗಳ ರೀತಿ ಬಿಜೆಪಿ, ಜೆಡಿಎಸ್ ಅವರು ಯಾವುದೇ ಯೋಜನೆಗಳನ್ನು ಮಾಡಲಿಲ್ಲ. ನಮ್ಮ ಮಾತನ್ನು ಉಳಿಸಿಕೊಂಡು ಜನರಿಗೆ ಯೋಜನೆಗಳನ್ನು ತಲುಪಿಸುತ್ತಿದ್ದೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ನಡೆದ ಸರ್ಕಾರದ ಗ್ಯಾರಂಟಿ ಯೋಜನೆ ಫಲಾನುಭವಿಗಳ ಸಮಾವೇಶ ಮತ್ತು ಡಿಸಿಸಿ ಬ್ಯಾಂಕ್ ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ ವಿತರಣೆ ಹಾಗೂ ಮಾಹಿತಿ ನೀಡುವ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಸೇವೆಯನ್ನು ಜನರು ಗುರುತಿಸುತ್ತಿದ್ದಾರಾ ಎಂದು ಕೆಲವರಿಗೆ ಪ್ರಶ್ನೆ ಮಾಡಿದ್ದೆ. ಆಗ ಜನರು ನಮ್ಮ ಶ್ರಮ ಗೊತ್ತಾಗುತ್ತಿದೆ ಎಂದು ತಿಳಿಯಿತು. ಜನರು ನಾವು ಮಾಡೋ ಸೇವೆಯನ್ನು ಗುರುತಿಸಬೇಕು. ಮಂಡ್ಯ ಜಿಲ್ಲೆ ಕಳೆದ ಐದು ವರ್ಷ ಹೇಗೆ ಇತ್ತು. 7 ಮಂದಿ ಜೆಡಿಎಸ್ ಶಾಸಕರು ಏನು ಸೌಲಭ್ಯ ಕೊಟ್ಟಿದ್ದಾರೆ. ಕೇಂದ್ರದಲ್ಲಿ ಕೂತು ನರೇಂದ್ರ ಮೋದಿ ಅವರು ಸುಳ್ಳು ಹೇಳ್ತಾರೆ. ಇಲ್ಲಿ ಇವರು ಜಾಗಟೆ ತಗೊಂಡು ಬಾರಿಸುತ್ತಾರೆ. ರಾಜ್ಯದ ಎಂಪಿಗಳಿಗೆ ನಾಚಿಕೆ ಆಗುತ್ತಿಲ್ವಾ, ಜನರಿಗೆ ಮೋಸ ಮಾಡ್ತಾ ಇದೀವಿ ಎಂದು ಅನಿಸುತಿಲ್ವಾ ಎಂದು ಜೆಡಿಎಸ್ ಮತ್ತು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ಇಲ್ಲಿಯವರೆಗೆ ಕೇಂದ್ರ ಸರ್ಕಾರ ಬರಗಾಲದ ಪರಿಹಾರ ನೀಡಿಲ್ಲ. ಇದಕ್ಕೆ ಮುಂದಿನ ದಿನ ಜನರು ಉತ್ತರ ನೀಡಬೇಕು. ಕೇಂದ್ರ ಕೊಡೋದನ್ನೂ ಕಾಯದೇ ಪ್ರತಿ ರೈತನಿಗೆ 2 ಸಾವಿರವನ್ನು ಬಿಡುಗಡೆ ಮಾಡಿದ್ದೇವೆ. ಸ್ವಾತಂತ್ರ್ಯ ಬಂದ ನಂತರ ಯಾರೂ ನಮ್ಮ ರೀತಿ ಗ್ಯಾರಂಟಿ ಯೋಜನೆ ನೀಡಿಲ್ಲ. ಆ ಯೋಜನೆಗಳನ್ನು ಜನರಿಗೆ ನಾವು ತಲುಪಿಸುತ್ತಿದ್ದೇವೆ. ನಮ್ಮದೇ ಬೆಂಬಲ ತೆಗೆದುಕೊಂಡು ಸಿಎಂ ಆಗಿದ್ದ ಕುಮಾರಸ್ವಾಮಿ ಈ ರೀತಿ ಅಭಿವೃದ್ಧಿಗೆ ಗಮನ ಕೊಡಲಿಲ್ಲ. ರಾಜ್ಯದಲ್ಲಿ ಜನರಿಗಾಗಿ ಯೋಜನೆ ಕೊಡಲು ಏನೂ ಕೊರತೆ ಇಲ್ಲ. ನಾಳೆ ಚುನಾವಣೆ ಬಂದಾಗ ಬಿಜೆಪಿ, ಜೆಡಿಎಸ್ ಅವರು ಬಂದು ಸುಳ್ಳು ಹೇಳ್ತಾರೆ. ಕಾವೇರಿ ವಿಚಾರದಲ್ಲಿ ಒಂದು ಬೆಳೆ ಒಣಗಲು ನಾವು ಬಿಟ್ಟಿಲ್ಲ. ಇಲ್ಲಸಲ್ಲದ ಸುಳ್ಳು ಹೇಳಿಕೊಂಡು ಬಂದವರಿಗೆ ಬುದ್ಧಿ ಕಲಿಸಬೇಕು ಎಂದು ಸಚಿವರು ಕರೆ ನೀಡಿದರು.



ಶ್ರೀರಂಗನಾಥಸ್ವಾಮಿ ದೇವಾಲಯದ ಆವರಣದಲ್ಲಿ ನಡೆದ ಸರ್ಕಾರದ ಗ್ಯಾರಂಟಿ ಯೋಜನೆಗಳ ಫಲಾನುಭವಿಗಳ ಸಮಾವೇಶವನ್ನು ಉದ್ಘಾಟಿಸುತ್ತಿರುವ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನಸ್ತೋಮವನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು.

ನಾವು ಹೋಗುತ್ತಿರುವುದು ನಮಗೆ ಬರಪರಿಹಾರ ನೀಡದೇ ಇರೋದಕ್ಕೆ ಪ್ರತಿಭಟನೆ ಮಾಡಲು. ಕರ್ನಾಟಕಕ್ಕೆ ಆರ್ಥಿಕ ಸಹಕಾರವನ್ನು ನೀಡ್ತಾ ಇಲ್ಲ ಎಂದು ಹೋರಾಟ ಮಾಡುತ್ತಾ ಇದೀವಿ. ನಾಚಿಕೆ ಇದ್ದರೆ ಬಿಜೆಪಿ ಅವರು ರಾಜಕೀಯ ಹೊರತುಪಡಿಸಿ ಮಾತನಾಡಲಿ. ಅವರಿಗೆ ಅವರ ನಾಯಕರ ಬಗ್ಗೆ ಭಯ ಇದೆ, ಅದಕ್ಕೆ ಮಾತಾಡುತ್ತಿಲ್ಲ. ಬಿಜೆಪಿ ಬಿಡುಗಡೆ ಮಾಡಿರೋ ದಾಖಲೆ 100% ಸುಳ್ಳು. ನಮ್ಮನ್ನ ಶ್ವೇತ ಪತ್ರ ಹೊರಡಿಸಲು ಹೇಳಲು ಅವರು ಯಾರು? ಎಂದರು.

ಕಂದಾಯ ಸಚಿವ ಕೃಷ್ಣಭೈರೇಗೌಡ ಮಾತನಾಡಿ, ಇಂದಿನ ಕಾರ್ಯಕ್ರಮದಲ್ಲಿ ಮಹಿಳೆಯರೇ ಹೆಚ್ಚಾಗಿರುವುದು ವಿಶೇಷ. ನಾನು ಕೋಲಾರದಲ್ಲಿ ಹುಟ್ಟಿದ್ದು, ಗೆದ್ದಿದ್ದು ಬೆಂಗಳೂರಿನಲ್ಲಿ. ನಮ್ಮದು ಕೂಡ ರೈತಾಪಿ ಕುಟುಂಬ. ಇವತ್ತು ನಾವು ಕೃಷಿ ಅವಲಂಬಿಸಿದ್ದೇವೆ. ನಮ್ಮಲ್ಲಿ ಹೈನುಗಾರಿಕೆ, ರೇಷ್ಮೆ ಹೆಚ್ಚು. ಹೈನುಗಾರಿಕೆಯಲ್ಲಿ ಹೆಚ್ಚು ತೊಡಗಿಸಿಕೊಳ್ಳೋದು ಮಹಿಳೆಯರು. ರೇಷ್ಮೆ ಬೆಳೆಯೋದು ಕೂಡ ಮಹಿಳೆಯರೇ ಹೆಚ್ಚು. ಮಹಿಳೆಯರ ದುಡಿಮೆಯಿಂದ ಇವತ್ತು ಕೃಷಿಕಾಯಕ, ಒಕ್ಕಲುತನ ಉಳಿದಿದೆ ಎಂದರು.

ನಮ್ಮ ಮನೆಯಲ್ಲೂ 82ರಿಂದ ನಮ್ಮ ತಾಯಿಯೇ ವ್ಯವಸಾಯ ಮಾಡುತ್ತಿದ್ದರು. ನಮ್ಮನ್ನ ವಿದ್ಯಾಭ್ಯಾಸ ಮಾಡಿಸಿ ಬೆಳೆಸಿದ್ದು ನನ್ನ ತಾಯಿ. ಗೃಹಲಕ್ಷ್ಮೀ ಯೋಜನೆ ಮಾಡಿದ್ದೇ ಮಹಿಳೆಯರ ಶ್ರೇಯಸ್ಸಿಗೆ. ಮಹಿಳೆಯರ ಪಾತ್ರ ಅರಿತೇ ಈ ಯೋಜನೆ ಜಾರಿಗೆ ತರಲಾಗಿದೆ ಮಹಿಳೆಯರ ದುಡಿಮೆ ಹೋಗುವ ಮಾತು ನಮ್ಮಿಂದ ಬರಲ್ಲ. ಮಹಿಳೆ ವಿಚಲಿತರಾದರೆ ಕುಟುಂಬ ಕುಗ್ಗುತ್ತದೆ. ನಮ್ಮ ಭರವಸೆಗಳನ್ನ ಹಲವರು ಟೀಕೆ ಮಾಡಿದ್ದರು. ಅಧಿಕಾರಕ್ಕೆ ಬಂದ ಎರಡು ತಿಂಗಳಲ್ಲೇ ಯೋಜನೆ ಅನುಷ್ಠಾನಗೊಳಿಸಿ ಪ್ರತಿ ತಿಂಗಳು ನಿಮ್ಮ ಖಾತೆಗೆ ಹಣ ಹಾಕುತ್ತಿರುವುದು ಕಾಂಗ್ರೆಸ್ ಸರ್ಕಾರ. ಮಹಿಳೆ ಯಾರ ಮೇಲು ಅವಲಂಬಿತರಾಗಬಾರದು. ಸ್ವಾವಲಂಬನೆಯಿಂದ ಬದುಕಬೇಕು ಅಂತಾ ಶಕ್ತಿ ಯೋಜನೆ ಜಾರಿಗೆ ತಂದಿದ್ದೇವೆ ಎಂದರು.

ನಿಮಗೆ ಕರ್ನಾಟಕದ ಬಗ್ಗೆ ನಿಜವಾಗಿಯೂ ಕಾಳಜಿ ಇದ್ದರೆ ಮೇಕೆದಾಟು, ಮಹದಾಯಿ, ಭದ್ರಾ ಯೋಜನೆಗೆ ಪರ್ಮಿಷನ್ ಕೊಡಿಸಿ. ಹಣವನ್ನೂ ನಾವೇ ತರ್ತೀವಿ, ಅಣೆಕಟ್ಟು ಕೂಡ ನಾವೇ ಕಟ್ತೀವಿ. ರಾಜ್ಯಕ್ಕೆ ಬರಬೇಕಾದ ಬರಪರಿಹಾರ ಕೊಡಿಸಿ ಸಾಕು. ಆಗ ನಾನು ನಿಮ್ಮನ್ನ ಒಪ್ಪಿಕೊಳ್ಳುತ್ತೇನೆ ಎಂದು ಬಿಜೆಪಿ–ಜೆಡಿಎಸ್ ನಾಯಕರಿಗೆ ಕೃಷ್ಣಭೈರೇಗೌಡ ಸವಾಲ್ ಹಾಕಿದರು. ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿದರು. ಇದೇ ಸಂದರ್ಭದಲ್ಲಿ ಫಲಾನುಭವಿಗಳಿಗೆ ವಿವಿಧ ಸವಲತ್ತುಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಶಾಸಕರಾದ ದಿನೇಶ್ ಗೂಳಿಗೌಡ, ರಮೇಶ್‌ಬಾಬು ಬಂಡಿಸಿದ್ದೇಗೌಡ, ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಜಿಲ್ಲಾ ಸಹಕಾರ ಬ್ಯಾಂಕ್ ಅಧ್ಯಕ್ಷ ಜೋಗಿಗೌಡ, ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸೀಫ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್. ಯತೀಶ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅಪೆ ಆಟೋಗಳಿಗೂ ಓಡಾಡಲು ಬಿಡಿ, ಇಲ್ಲ ದಯಾಮರಣ ಕೊಡಿ

ಮಂಡ್ಯದಲ್ಲಿ ಆಟೋ ಚಾಲಕರ ಪ್ರತಿಭಟನೆ



ಮಂಡ್ಯದಲ್ಲಿ ಬೃಹತ್ ಪ್ರತಿಭಟನೆ ನಡೆಸಿದ ಅಫೆ ಆಟೋ ಚಾಲಕರು.

ಮಂಡ್ಯ, ಫೆ.6– ಅಪೆ ಆಟೋಗಳಿಗೆ ಮಂಡ್ಯ ನಗರ ಪ್ರವೇಶ ನಿರ್ಬಂಧ ಮಾಡದೆ ಹಾಗೂ ಎಲ್ಲಾ ಮಾದರಿ ಆಟೋದವರಿಗೆ ಒಂದೇ ರೀತಿಯ ನ್ಯಾಯ ದೊರಕಿಸಿಕೊಡಿ. ಇಲ್ಲದಿದ್ದರೆ ದಯಾಮರಣ ಕಲ್ಪಿಸಿ ಎಂದು ಒತ್ತಾಯಿಸಿ ಅಪೆ ಆಟೋ ಚಾಲಕರು ಮತ್ತು ಮಾಲೀಕರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ಮೈಷುಗರ್ ವೃತ್ತದಲ್ಲಿ ಜಮಾಯಿಸಿದ ಆಟೋ ಚಾಲಕರು, ಬಳಿಕ ನೀವು ಬದುಕಿ ನಮ್ಮನ್ನು ಬದುಕಲು ಬಿಡಿ' ಎಂಬ ಘೋಷಣೆಯೊಂದಿಗೆ ಹಾಗೂ ಸಾಲಬಾಧೆ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡಿರುವ ಚಾಲಕರ ಫೋಟೋಗಳನ್ನಿಡಿದು ಜಿಲ್ಲಾಧಿಕಾರಿ ಕಚೇರಿ ವರೆಗೆ ಮೆರವಣಿಗೆ ನಡೆಸಿ ಮನವಿ ಸಲ್ಲಿಸಿದರು. ಸರ್ಕಾರಿ ಬಸ್‌ಗಳಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಅವಕಾಶ ಕಲ್ಪಿಸಿದ ನಂತರ ಆಟೋ ನಂಬಿ ಬದುಕುತ್ತಿದ್ದ ಚಾಲಕರು ಮತ್ತು ಮಾಲೀಕರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಮಂಡ್ಯ ನಗರದಲ್ಲಿ ಸಂಚರಿಸುವ ಪ್ರಯಾಣಿಕರ ಆಟೋದವರು ಅಪೆ ಆಟೋದವರು ನಗರ ಪ್ರದೇಶದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಸಂಚಾರ ಮಾಡುತ್ತಾರೆಂದು ತಪ್ಪಾಗಿ ಭಾವಿಸಿದ್ದಾರೆ. ಇದು ಸರಿಯಲ್ಲ ಅಪೆ ಆಟೋಗಳು ಗ್ರಾಮೀಣ ಪ್ರದೇಶದಲ್ಲಿ ಪ್ರಯಾಣಿಕರನ್ನು ಹತ್ತಿಸಿಕೊಂಡು ಬಸ್ ನಿಲ್ದಾಣ, ರೈಲು ನಿಲ್ದಾಣ ಹತ್ತಿರ ಇಳಿಸಿ ಮತ್ತೆ ಗ್ರಾಮೀಣ ಪ್ರದೇಶಕ್ಕೆ ಖಾಲಿ ಹೋಗುತ್ತಿವೆ ಎಂದು ಹೇಳಿದರು.

ಎಲ್ಲರೂ ಸಹ ಸಾಲ ಮಾಡಿ ಆಟೋ ಖರೀದಿ ಮಾಡಿರುತ್ತಾರೆ. ಯಾರ ಆದಾಯಕ್ಕೂ ಕತ್ತರಿ ಬೀಳಬಾರದು ಎಂಬ ಮನೋಭಾವ ನಮ್ಮದಾಗಿದೆ. ನಾವೆಲ್ಲರೂ ಒಗ್ಗೂಡಿ ಸಹಜೀವನ ನಡೆಸಬೇಕು. ನಮ್ಮ ಜೀವನಕ್ಕೆ ನಾವು ಕಲ್ಲು ಹಾಕಿಕೊಳ್ಳಬಾರದು. ಈಗಾಗಲೇ ಸಾಲ ತೀರಿಸಲು ಸಾಧ್ಯವಾಗದೆ ಅಪೆ ಆಟೋದ ಏಳು ಚಾಲಕರು ನೇಣಿಗೆ ಕೊರಳೊಡ್ಡಿದ್ದಾರೆ. ನಮ್ಮ ಪರಿಸ್ಥಿತಿಯನ್ನು ಕೂಡ ಅರಿತುಕೊಂಡು ಅವಕಾಶ ಮಾಡಿಕೊಡಬೇಕು. ನಗರ ಪ್ರದೇಶದಲ್ಲಿ ಅಪೆ ಆಟೋಗಳಿಗೆ ದಂಡ ಹಾಕುತ್ತಿರುವುದನ್ನು ನಿಲ್ಲಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಆಟೋ ಚಾಲಕರಾದ ಪುನೀತ್, ಕಾಂತರಾಜ್, ಮಧುಕುಮಾರ್ ಉಮ್ಮಡಹಳ್ಳಿ, ಕಾಶಿ ಹೆಗಡೆ, ವೆಂಕಟೇಶ್, ಚೇತನ್, ಪ್ರದೀಪ್, ಅಭಿ, ಜಯ ಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷ ಯೋಗಣ್ಣ ಇತರರಿದ್ದರು.

ಹಾಲಿನ ಪ್ರೋತ್ಸಾಹ ಧನ ಬಿಡುಗಡೆಗೆ ಆಗ್ರಹಿಸಿ ಬಿಜೆಪಿ ಪ್ರತಿಭಟನೆ



ಮಂಡ್ಯ, ಫೆ.6– ರಾಜ್ಯದ ಕಾಂಗ್ರೆಸ್ ಸರ್ಕಾರ ಹಾಲು ಉತ್ಪಾದಕರಿಗೆ ನೀಡಬೇಕಾದ ಬಾಕಿ ಪ್ರೋತ್ಸಾಹ ಧನ ಬಿಡುಗಡೆ ಮಾಡಬೇಕು ಎಂದು ಎಂದು ಒತ್ತಾಯಿಸಿ ಬಿಜೆಪಿ ರೈತ ಮೋರ್ಚಾ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಸರ್‌ಎಂವಿ ಪ್ರತಿಮೆ ಬಳಿಯಿಂದ ಮೆರವಣಿಗೆ ಹೊರಟ ಪಕ್ಷದ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು. ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ ನೀಡಿದ್ದರು. ಇದರಿಂದ 26 ಲಕ್ಷ ಗ್ರಾಮೀಣ ರೈತರಿಗೆ ಹೆಚ್ಚಿನ ಅನುಕೂಲವಾಗಿತ್ತು ಆದರೆ ಇದೀಗ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರ್ಕಾರ ಜನರ ಶಾಪಕ್ಕೆ ಮಾತ್ರ ಗುರಿಯಾಗಿಲ್ಲ ಬದಲಾಗಿ ಜಾನುವಾರುಗಳ ಶಾಪಕ್ಕೂ ಗುರಿಯಾಗಿದೆ. ಹಾಲು ಉತ್ಪಾದಕರಿಗೆ 716 ಕೋಟಿ ಪ್ರೋತ್ಸಾಹ ಧನವನ್ನು ಬಾಕಿ ಉಳಿಸಿಕೊಂಡಿದೆ. ಇದರಿಂದ ಕರ್ನಾಟಕದಲ್ಲಿ ಪ್ರತಿನಿತ್ಯ 10 ಲಕ್ಷ ಲೀಟರ್ ಹಾಲು ಉತ್ಪಾದನೆ ಪ್ರಮಾಣ ಕುಸಿದಿದೆ, ಈ ಕೂಡಲೇ ಪ್ರೋತ್ಸಾಹಧನದ ಬಾಕಿ ಹಣವನ್ನು ಬಿಡುಗಡೆ ಮಾಡಿ ರೈತರಿಗೆ ಪಾವತಿಸಬೇಕು ಎಂದು ಒತ್ತಾಯಿಸಿದರು.

ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ಇಂದ್ರೇಶ್ ಕುಮಾರ್, ಮುಖಂಡರಾದ ಕೆ.ಎಸ್. ಸಚ್ಚಿದಾನಂದ, ಡಾ.ಸಿದ್ದರಾಮಯ್ಯ, ಜೋಗಿಗೌಡ ಭಾಗವಹಿಸಿದ್ದರು.

ಕೃಷ್ಣಶೆಟ್ಟಿ ನಿಧನ



ಕೆ.ಆರ್.ಪೇಟೆ, ಫೆ.6– ತಾಲೂಕಿನ ಅಗ್ರಹಾರಬಾಚಹಳ್ಳಿ ಪಿಎಸಿಎಸ್ ನಿರ್ದೇಶಕ ಕೃಷ್ಣಶೆಟ್ಟಿ (55) ಅವರು ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ, ಗ್ರಾಮ ಪಂಚಾಯಿತಿ ಮಾಜಿ ಸದಸ್ಯೆ ಮಂಗಳ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ನಾಳೆ (ಫೆ.7) ಬೆಳಗ್ಗೆ 11 ಗಂಟೆಗೆ ಹುಟ್ಟೂರಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ದೆಹಲಿಯಲ್ಲಿ ರಾಜ್ಯ ಕಾಂಗ್ರೆಸ್ ಪ್ರತಿಭಟನೆಗೆ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಕಿಡಿ

▶ ಕಾಂಗ್ರೆಸ್‌ಗೆ ಕೇರಳಕ್ಕೊಂದು ನೀತಿ! ಕರ್ನಾಟಕಕ್ಕೆ ಇನ್ನೊಂದು ನೀತಿ ▶ ಕೇರಳದಲ್ಲಿ ಅಸಹಕಾರ! ಕರ್ನಾಟಕದಲ್ಲಿ ಸಹಕಾರ!! ▶ ಸ್ವಾರ್ಥ ರಾಜಕಾರಣಕ್ಕಾಗಿ ಪ್ರತಿಭಟನೆ ನಾಟಕ; ರಾವಣ ತಲೆಗಳ ಕಾಂಗ್ರೆಸ್ ಎಂದ ಮಾಜಿ ಸಿಎಂ

ಬೆಂಗಳೂರು: ತೆರಿಗೆ ಪಾಲು, ಅನುದಾನ ಅನ್ಯಾಯದ ಹೆಸರೇಳಿಕೊಂಡು ರಾಜ್ಯ ಕಾಂಗ್ರೆಸ್ ಸರಕಾರ ರಾಜಕೀಯ ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಕಿಡಿಕಾರಿದ್ದಾರೆ.



ಕಾಂಗ್ರೆಸ್ ಪಕ್ಷಕ್ಕೆ ಇವೆರಡೂ ವಿಷಯದಲ್ಲಿ ರಾಜ್ಯದಿಂದ ರಾಜ್ಯಕ್ಕೆ ಬೇರೆ ಬೇರೆ ರೀತಿಯ ನಿಲುವುಗಳಿವೆ ಹಾಗೂ ಅದರಲ್ಲಿ ಸ್ವಾರ್ಥ ರಾಜಕಾರಣ ಅಡಗಿದೆ ಎಂದು ಕಟುವಾಗಿ ಟೀಕಿಸಿದ್ದಾರೆ.

ಈ ಬಗ್ಗೆ ಮಾಧ್ಯಮ ಹೇಳಿಕೆ ನೀಡಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ನವದೆಹಲಿಯಲ್ಲಿ ಹಮ್ಮಿಕೊಂಡಿರುವ ಪ್ರತಿಭಟನೆ ಬಗ್ಗೆ ಪ್ರಹಾರ ನಡೆಸಿದಾರೆ. ದಿಲ್ಲಿಗೆ ಯಾತ್ರೆ ಹೊರಟಿರುವ ಕಾಂಗ್ರೆಸ್ ಪಕ್ಷದ ಎರಡು ತಲೆ ರಾಜಕಾರಣ ಈಗ ಬೆತ್ತಲಾಗಿದೆ. ಅದರ ವರಸೆ ಹೇಗಿದೆ ಎಂದರೆ, ಕರ್ನಾಟಕಕ್ಕೆ ಒಂದು ನೀತಿ. ಕೇರಳಕ್ಕೆ ಮತ್ತೊಂದು ನೀತಿ! ಅದರ ಉದ್ದೇಶ ಲೋಕಸಭೆ ಚುನಾವಣೆ ಅಷ್ಟೇ. 'ರಾವಣ ತಲೆಗಳ ಕಾಂಗ್ರೆಸ್ ರಾಜಕಾರಣ' ಎಂದು ಲೇವಡಿ ಮಾಡಿದ್ದಾರೆ.

ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು, 'ನಮ್ಮ ರಾಜ್ಯಕ್ಕೆ ತೆರಿಗೆ ಪಾಲು, ಅನುದಾನದಲ್ಲಿ ಅನ್ಯಾಯ ಆಗಿದೆ. ಅದಕ್ಕೆ ಕೇಂದ್ರದ ವಿರುದ್ಧ ದನಿ ಎತ್ತೋಣ ಬನ್ನಿ, ಸಹಕಾರ ನೀಡಿ' ಎಂದು ಕರೆದರೆ, ಅದಕ್ಕೆ ಕೇರಳ ಕಾಂಗ್ರೆಸ್ಸಿಗರು ಕೊಟ್ಟ ಉತ್ತರ, 'ಜನರ ಹಣವನ್ನು ನೀವು ಅನಗತ್ಯ ವೆಚ್ಚಗಳಿಗೆ ಪೋಲು ಮಾಡುತ್ತಿದ್ದೀರಿ, ನಾವು ಬರಲ್ಲ' ಎಂದಿದ್ದಾರೆ ಎಂದು ಕುಮಾರಸ್ವಾಮಿ ಅವರು ಹೇಳಿದ್ದಾರೆ.

ವಿಜಯನ್ ಅವರು ಕರೆದಿದ್ದ ಸರ್ವಪಕ್ಷ ಸಭೆಗೂ ಅಸಹಕಾರ ತೋರಿರುವ ಕಾಂಗ್ರೆಸ್ಸಿಗರು, ಕೇಂದ್ರ ಸರಕಾರದ ವಿರುದ್ಧ ಕೇರಳ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕರಿಸುವಾಗಲೂ ಗೈರುಹಾಜರಾಗಿದ್ದಾರೆ, ಕಲಾಪವನ್ನೇ ಬಹಿಷ್ಕರಿಸಿದ್ದಾರೆ.

ಅಷ್ಟೇ ಅಲ್ಲ, ಫೆಬ್ರವರಿ 8ನೇ ತಾರೀಖು ದಿಲ್ಲಿಯಲ್ಲಿ ವಿಜಯನ್ ಅವರು ಹಮ್ಮಿಕೊಂಡಿರುವ ಪ್ರತಿಭಟನೆಯನ್ನೂ ಕೇರಳ ಕಾಂಗ್ರೆಸ್ಸಿಗರು ಬಹಿಷ್ಕರಿಸಿದ್ದಾರೆ ಎಂದು ಕಾಂಗ್ರೆಸ್ ಬಣ್ಣವನ್ನು ಕುಮಾರಸ್ವಾಮಿ ಬಯಲು ಮಾಡಿದ್ದಾರೆ.

ಕರ್ನಾಟಕದ ಕಾಂಗ್ರೆಸ್, ಕೇರಳಕ್ಕೆ ತದ್ವಿರುದ್ಧ ದಿಕ್ಕಿನಲ್ಲಿದೆ. ಒಂದೆಡೆ ರಾಜ್ಯ ಬಿಜೆಪಿ ಸಂಸದರು ಶೋ ಪೀಸುಗಳು, ಗಂಡಸ್ತನ ಇಲ್ಲದವರು ಎಂದು ಕಾಂಗ್ರೆಸ್ ನಾಯಕರು ನಾಲಿಗೆ ಜಾರಿ ಬಿಡುತ್ತಿದ್ದಾರೆ. ಈಗ ನೋಡಿದರೆ, 'ಪ್ರತಿಭಟನೆಗೆ ಬನ್ನಿ. ನಿಮ್ಮ ಸಹಕಾರವೂ ಇರಲಿ..' ಎಂದು ಆ ಪಕ್ಷದ ಸಂಸದರನ್ನು ಅದೇ ನಾಲಿಗೆಯಿಂದಲೇ ಕರೆಯುತ್ತಿದ್ದಾರೆ. ಅವರು ಜೆಡಿಎಸ್ ಸಂಸದರಿಗೂ ಪತ್ರ ಬರೆದಿದ್ದಾರೆ. ಇದೆಂಥಾ ವೈರುಧ್ಯ ಇದೆಂಥಾ ಚೋದ್ಯ ಎಂದು ಮಾಜಿ ಮುಖ್ಯಮಂತ್ರಿಗಳು ಪ್ರಶ್ನಿಸಿದ್ದಾರೆ.

ಕೇರಳದ ಎಲ್ ಡಿಎಫ್ ಸರಕಾರ ಜನರ ತೆರಿಗೆ ಹಣ ಪೋಲು ಮಾಡುತ್ತಿದೆ ಎಂದಾದರೆ, ಕರ್ನಾಟಕದಲ್ಲಿ ಗ್ಯಾರಂಟಿ ಹೆಸರಿನಲ್ಲಿ ಕಾಂಗ್ರೆಸ್ ಮಾಡುತ್ತಿರುವುದೇನು, ಯೋಜನೆಗಳ ಹೆಸರಿನಲ್ಲಿ ಕೊಳ್ಳೆ ಹೊಡೆಯುತ್ತಿರುವುದೇನು.

ಕೇರಳದಲ್ಲಿ ಅಸಹಕಾರ, ಕರ್ನಾಟಕದಲ್ಲಿ ಸಹಕಾರ, ಇದೆಂಥಾ ನೀತಿ? ಎರಡು ತಲೆಗಳು ಮಾತ್ರವಲ್ಲ, ರಾವಣ ತಲೆಗಳ ಕಾಂಗ್ರೆಸ್ ಪಕ್ಷಕ್ಕೆ ಮೈಯ್ಯೆಲ್ಲಾ ರಾಜಕೀಯವೇ ತುಂಬಿದೆ. ಅದೂ ಸ್ವಾರ್ಥ ರಾಜಕೀಯ ಎಂದು ಕುಮಾರಸ್ವಾಮಿ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಜ್ಯಸಭೆಯಲ್ಲಿ 'ಸೋ ಕಾಲ್ಡ್ ಗ್ಯಾರಂಟಿಗಳು'; ನೈಜಸ್ಥಿತಿ ಬಿಡಿಸಿಟ್ಟ ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರು

● ರಾಜಕೀಯ ಉದ್ದೇಶದ, ತಾತ್ಕಾಲಿಕ ಲಾಭದ ಗ್ಯಾರಂಟಿಗಳು ● ಮೋದಿ ಗ್ಯಾರಟಿ ವಿಭಿನ್ನ, ನನಗೆ ಗೊತ್ತಿದೆ ● ಎಸ್ ಟಿ ಪ್ರವರ್ಗಕ್ಕೆ ಕಾಡುಗೊಲ್ಲ ಸಮುದಾಯ: ಪ್ರಧಾನಿಗೆ ಮನವಿ ● ಮೇಕೆದಾಟು ಯೋಜನೆಗೆ ಒಪ್ಪಿಗೆ ಕೊಡಿ; ಕೈಜೋಡಿಸಿ ಮನವಿ ಮಾಡಿದ ಮಾಜಿ ಪ್ರಧಾನಿಗಳು

ನವದೆಹಲಿ: ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಜಾರಿಗೆ ತಂದಿರುವ ಗ್ಯಾರಂಟಿಗಳನ್ನು 'ಸೋ ಕಾಲ್ಡ್ ಗ್ಯಾರಂಟಿಗಳು' ಎಂದು ಕಟುವಾಗಿ ಟೀಕಿಸಿದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ತಾತ್ಕಾಲಿಕ ರಾಜಕೀಯ ಲಾಭಕ್ಕಾಗಿ ಇಂಥ ಕಾರ್ಯಕ್ರಮಗಳನ್ನು ಜಾರಿ ಮಾಡುತ್ತಿರುವ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.

ರಾಜ್ಯಸಭೆಯಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಅನಗತ್ಯ ವೆಚ್ಚದ ಅನುತ್ಪಾದಕ, ಅಲ್ಪಾವಧಿ ಲಾಭದ ಗ್ಯಾರಂಟಿಗಳು ಇವಾಗಿವೆ ಎಂದು ಕಾಂಗ್ರೆಸ್ ಸರಕಾರದ ಪಂಚ ಗ್ಯಾರಂಟಿಗಳ ಬಗ್ಗೆ ದೇಶದ ಜನರ ಗಮನ ಸೆಳೆದರು.

ಕಾಂಗ್ರೆಸ್ ಪಕ್ಷದ ಸದಸ್ಯರ ಆಕ್ಷೇಪಣೆ, ಗದ್ದಲದ ನಡುವೆಯೂ ತಮ್ಮ ಮಾತುಗಳನ್ನು ಮುಂದುವರಿಸಿದ ಅವರು, ಜಂತರ್‌ಮಂತರ್‌ನಲ್ಲಿ ಕಾಂಗ್ರೆಸ್‌ನವರು ಬೃಹತ್ ಪ್ರತಿಭಟನೆ ಹಮ್ಮಿಕೊಂಡಿದ್ದಾರೆ. ಅವರು ನನ್ನನ್ನೂ ಸೇರಿ ಎಲ್ಲರನ್ನೂ ಬರುವಂತೆ ಕರೆದಿದ್ದಾರೆ. ಈ ದೇಶದ ರಾಜಕೀಯ ಪರಿಸ್ಥಿತಿ ಹೇಗಾಗಿದೆ ಎಂದರೆ, ರಾಜಕೀಯ ಲಾಭಕ್ಕಾಗಿ ಅನಗತ್ಯ, ಅನುತ್ಪಾದಕ ವೆಚ್ಚಗಳನ್ನು ಯಥೇಚ್ಛವಾಗಿ ಮಾಡಲಾಗುತ್ತಿದೆ. ನಾನೆಂದೂ ಇಂಥದ್ದನ್ನು ಮಾಡಿಲ್ಲ ಎಂದರು.

ಮೋದಿ ಗ್ಯಾರಂಟಿ ವಿಭಿನ್ನ: ಈ ಸಂದರ್ಭದಲ್ಲಿ ಕಾಂಗ್ರೆಸ್ ಸದಸ್ಯರೊಬ್ಬರು ಮೋದಿ ಗ್ಯಾರಂಟಿಗಳ ಬಗ್ಗೆ ಏನು ಹೇಳುತ್ತೀರಿ ಎಂದಾಗ, 'ನಾನು ಹೇಳುತ್ತಿರುವುದು ಕರ್ನಾಟಕ ಸರಕಾರದ ಗ್ಯಾರಂಟಿಗಳ ಬಗ್ಗೆ. ಮೋದಿ ಗ್ಯಾರಂಟಿಗಳು ಬಹಳ ವಿಭಿನ್ನವಾಗಿವೆ. ಅವುಗಳ ಬಗ್ಗೆ ನನಗೆ ಗೊತ್ತಿದೆ' ಎಂದು ಗುಡುಗಿದರು. ಅಲ್ಲದೆ, 'ನಾನು ತಪ್ಪು ಮಾಹಿತಿ ಹೇಳಿದ್ದರೆ ಕ್ಷಮೆ ಕೇಳುತ್ತೇನೆ. ಯಾರಿಗೂ, ಯಾವುದಕ್ಕೂ ಅಪಖ್ಯಾತಿ ತರುವ ಉದ್ದೇಶ ನನ್ನದಲ್ಲ. ಕರ್ನಾಟಕ ಸರಕಾರ ಒಳ್ಳೆಯದು ಮಾಡಿದರೆ ಮೆಚ್ಚುಗೆ ವ್ಯಕ್ತಪಡಿಸುತ್ತೇನೆ. ನನಗೆ ಅದರಿಂದ ಏನೂ ಆಗಬೇಕಿಲ್ಲ' ಎಂದರು. ಹಣ ಇಲ್ಲ, ಪ್ರತಿಭಟನೆ ಮಾಡುತ್ತೇವೆ ಎಂದು ನಮ್ಮನ್ನೆಲ್ಲ ಕರೆಯುತ್ತಾರೆ. ಆದರೆ, ಕೇರಳದಲ್ಲಿ ಇದೇ ಉದ್ದೇಶಕ್ಕೆ ಅಲ್ಲಿನ ಎಲ್ ಡಿಎಫ್ ಸರಕಾರ ಕರೆದರೆ ಕಾಂಗ್ರೆಸ್‌ನವರು ಬಹಿಷ್ಕಾರ ಹಾಕುತ್ತಾರೆ. ಇದು ರಾಜಕೀಯ ಪರಿಸ್ಥಿತಿ ಎಂದು ಅವರು ಬೇಸರಿಸಿದರು.

ಮನ ಕಲಕುವ ಘಟನೆ ವಿವರಿಸಿದ ಮಾಜಿ ಪ್ರಧಾನಿಗಳು: ಗ್ಯಾರಂಟಿಗಳ ಹೆಸರಿನಲ್ಲಿ ಕರ್ನಾಟಕದಲ್ಲಿ ಏನಾಗಿದೆ? ಒಂದು ಘಟನೆ ಬಗ್ಗೆ ವಿವರಿಸುತ್ತೇನೆ. ಹಾವೇರಿ ಜಿಲ್ಲೆಯಲಗಚ್ಚು ಗ್ರಾಮದ ಬಸವರಾಜ ವೆಂಕಟ ಎಂಬ ಯುವಕನ ಆತ್ಮಾಹುತಿ ಆಘಾತಕಾರಿ. ನಿಮ್ಮ ಪ್ರಚಾರಪ್ರಿಯ, ಖೋಟಾ ಗ್ಯಾರಂಟಿಗಳ ಸರಕಾರದ ಆತ್ಮಸಾಕ್ಷಿಗೆ ಎದುರಾದ ದೊಡ್ಡ ಸವಾಲು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅವರು ಮಾಡಿದ್ದ ಟ್ವೀಟ್‌ನ ಒಂದು ತುಣುಕನ್ನು ಓದಿದರು. ಆ ಬಗ್ಗೆ ವರದಿ ಮಾಡಿದ್ದ ಪತ್ರಿಕೆಯ ತುಣುಕನ್ನು ಪ್ರದರ್ಶಿಸಿದರು. 'ಆ ಯುವಕ ಕೆಲಸಕ್ಕಾಗಿ ತಾಯಿಯೊಂದಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿರುತ್ತಾನೆ. ಟಿಕೆಟ್ ಇಲ್ಲದ ಕಾರಣಕ್ಕೆ ಅವರಿಬ್ಬರನ್ನು ಧಾರವಾಡದ ಬಳಿ ಕೆಳಗಿಳಿಸಲಾಗುತ್ತದೆ. ಅಲ್ಲಿ ತಾಯಿ ಮತ್ತು ತನಗೆ ಊಟಕ್ಕಾಗಿ ಆ ಯುವಕ ಅಲೆಯುತ್ತಾನೆ. ಕೆಲಸ ಹುಡುಕುತ್ತಾನೆ. ಸಿಗುವುದಿಲ್ಲ. ಕೊನೆಗೆ ಆ ನತದೃಷ್ಟ ಯುವಕ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಇದು, ಕರ್ನಾಟಕದ ಗ್ಯಾರಂಟಿಗಳ ನೈಜಸ್ಥಿತಿ' ಎಂದು ಮಾಜಿ ಪ್ರಧಾನಿಗಳು ಅತೀವ ಬೇಸರ ವ್ಯಕ್ತಪಡಿಸಿದರು.



ಮೇಕೆದಾಟು ಯೋಜನೆಗೆ ಒಪ್ಪಿಗೆ ಕೊಡಿ

ಕೈಜೋಡಿಸಿ ಮನವಿ ಮಾಡಿದ ಮಾಜಿ ಪ್ರಧಾನಿಗಳು

ಮೇಕೆದಾಟು ಯೋಜನೆಯ ವಿಷಯವನ್ನು ಪ್ರಸ್ತಾಪ ಮಾಡಿದ ಮಾಜಿ ಪ್ರಧಾನಿಗಳು, ತಮಿಳುನಾಡು ಸ್ನೇಹಿತರು ಅನ್ಯಥಾ ಭಾವಿಸಬಾರದು ಎನ್ನುತ್ತಲೇ ರಾಜ್ಯದ ಕುಡಿಯುವ ನೀರಿನ ಸಮಸ್ಯೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟರಲ್ಲದೆ, ಕೇಂದ್ರ ಸರಕಾರವು 30 ಟಿಎಂಸಿ ನೀರು ಸಂಗ್ರಹ ಸಾಮರ್ಥ್ಯದ ಮೇಕೆದಾಟು ಯೋಜನೆಗೆ ಒಪ್ಪಿಗೆ ನೀಡಬೇಕು ಎಂದು ಮನವಿ ಮಾಡಿದರು.

ಸುಪ್ರೀಂ ಕೋರ್ಟ್‌ನಲ್ಲಿ ತಮಿಳುನಾಡು ಪರ ವಾದ ಮಂಡಿಸಿದ ಹಿರಿಯ ವಕೀಲರೇ ಮೆಟ್ಟೂರು ಜಲಾಶಯಕ್ಕೆ ಮೇಲ್ಭಾಗದಲ್ಲಿ ಕರ್ನಾಟಕ ಜಲಾಶಯ ನಿರ್ಮಾಣ ಮಾಡಬಹುದು ಎಂದು ಸ್ಪಷ್ಟವಾಗಿ ಹೇಳಿದ್ದಾರೆ ದಯಮಾಡಿ ಪ್ರಧಾನಿಗಳು ಮಧ್ಯಪ್ರವೇಶ ಮಾಡಬೇಕು, ಕರ್ನಾಟಕದ ಕುಡಿಯುವ ನೀರಿನ ಸಂಕಷ್ಟವನ್ನು ಪರಿಹಾರ ಮಾಡಬೇಕು. ಇದಷ್ಟೇ ಎಲ್ಲರಿಗೂ ನನ್ನ ಪ್ರಾರ್ಥನೆ ಎಂದು ಮಾಜಿ ಪ್ರಧಾನಿಗಳು ಕೈ ಜೋಡಿಸಿ ಮನವಿಕೊಂಡರು.

ನಾನು ಕರ್ನಾಟಕದ ಮುಖ್ಯಮಂತ್ರಿ ಆಗಿದ್ದಾಗ ಒಬ್ಬ ಶಾಸಕರನ್ನೂ ನಿಗಮ ಮಂಡಳಿಗಳಿಗೆ ನೇಮಕ ಮಾಡಲಿಲ್ಲ. ಜನರ ತೆರಿಗೆ ಹಣದ ಪ್ರತಿ ಪೈಸೆಯನ್ನೂ ನೀರಾವರಿ ಯೋಜನೆಗಳಿಗೆ ತೆಗೆದಿಟ್ಟೆ, ಜನರ ದುಡ್ಡಿನಲ್ಲಿ ಒಂದು ಪೈಸೆಯನ್ನೂ ಅನಗತ್ಯವಾಗಿ ವೆಚ್ಚ ಮಾಡಲಿಲ್ಲ. ಮುಖ್ಯಮಂತ್ರಿಯಾಗಿ, ಪ್ರಧಾನಿಯಾಗಿ ಹಾಗೆಯೇ ಕೆಲಸ ಮಾಡಿದ್ದೇನೆ ಎಂದು ಅವರು ಸದನದಲ್ಲಿ ಒತ್ತಿ ಹೇಳಿದರು.

ಕಾಡುಗೊಲ್ಲ ಸಮುದಾಯದ ಬಗ್ಗೆ ಪ್ರಸ್ತಾಪ: ನರೇಂದ್ರ ಮೋದಿ ಅವರು ಪ್ರಧಾನಿಗಳಾಗಿ ಹತ್ತು ವರ್ಷ ಪೂರೈಸಿದ್ದಾರೆ. ನಾನು ಕೇವಲ ಹತ್ತು ತಿಂಗಳು ಮಾತ್ರ ಆ ಹುದ್ದೆಯಲ್ಲಿದ್ದೆ. ಆದರೆ, ನಾನು ಅವರಿಗೆ ಹೋಲಿಕೆ ಮಾಡಿಕೊಳ್ಳುತ್ತಿಲ್ಲ. ನನ್ನ ಅರವತ್ತು ವರ್ಷಗಳ ಸಾರ್ವಜನಿಕ ಜೀವನದ ಅನುಭವದ ಆಧಾರದ ಮೇಲೆ ಹೇಳುತ್ತಿದ್ದೇನೆ, ಅಷ್ಟೇ. ಕರ್ನಾಟಕದಲ್ಲಿ ಕಳೆದ ಏಳು ತಿಂಗಳಿಂದ ರಾಜ್ಯ ಸರಕಾರ ಹಲವಾರು ವಿಚಾರಗಳನ್ನು ಮುಂಚೂಣಿಗೆ ತಂದಿದೆ. ಮೀಸಲಾತಿ ಬಗ್ಗೆ ನಾನು ಯಾರನ್ನೂ ದೂರುವುದಿಲ್ಲ. ಅನೇಕ ಮೀಸಲಾತಿ ವರದಿಗಳ ಬಗ್ಗೆ ನನಗೆ ಗೊತ್ತಿದೆ. ಅದೇ ರೀತಿ ಕರ್ನಾಟಕದಲ್ಲಿಯೂ ಕಾಂತರಾಜು ಸಮಿತಿ ವರದಿ ಬಗ್ಗೆ ಚರ್ಚೆ ನಡೆಯುತ್ತಿದೆ. ರಾಜ್ಯದಲ್ಲಿ ಕಾಡುಗೊಲ್ಲ ಸಮುದಾಯ ಮೀಸಲು ಸೌಲಭ್ಯದಿಂದ ವಂಚಿತರಾಗಿ ಅನ್ಯಾಯಕ್ಕಾಗಿ ತುತ್ತಾಗಿದೆ. 2014ರಿಂದಲೂ ಇವರನ್ನು ಎಸ್ಟಿ ಪ್ರವರ್ಗಕ್ಕೆ ಸೇರಿಸುವ ಪ್ರಸ್ತಾವನೆ ಇತ್ತು. ಈಗ 2024. ಪ್ರಧಾನಮಂತ್ರಿಗಳು ನಾಳೆ ಸದನದಲ್ಲಿ ರಾಷ್ಟ್ರಪತಿಗಳ ಭಾಷಣದ ಮೇಲಿನ ಚರ್ಚೆಗೆ ಉತ್ತರ ನೀಡಲಿದ್ದಾರೆ. ಅವರ ಗಮನ ಸೆಳೆಯುವುದಕ್ಕಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ ಎಂದು ದೇವೇಗೌಡರು ಹೇಳಿದರು.

ಈ ಸಮುದಾಯದ ಪರವಾಗಿ ನೂತನ ಸಂಸತ್ ಭವನದಲ್ಲಿ ಪ್ರಧಾನಿಗಳನ್ನು ಪ್ರತ್ಯೇಕವಾಗಿ ಭೇಟಿ ಮಾಡಿದ್ದೆ. ನನ್ನ ಬಗ್ಗೆ ಅವರು ಅತೀವ ಪ್ರೀತಿ ವಾತ್ಸಲ್ಯ ತೋರಿದರು. ನನಗೀಗ 91 ವರ್ಷ ವಯಸ್ಸು ಹಿಂದೆ ಅನೇಕ ಪ್ರಧಾನಿಗಳನ್ನು ನೋಡಿದ್ದೇನೆ, ಭೇಟಿಯಾಗಿದ್ದೇನೆ. ಯಾರೂ ನನ್ನ ಬಗ್ಗೆ ಇಷ್ಟೊಂದು ಪ್ರೀತಿ ತೋರಿಸಿರಲಿಲ್ಲ. ಅಂದು ಕಾಡುಗೊಲ್ಲ ಸಮುದಾಯವನ್ನು ಎಸ್ ಟಿ ಪ್ರವರ್ಗಕ್ಕೆ ಸೇರಿಸಬೇಕು ಎಂದು ಅವರಲ್ಲಿ ಮನವಿ ಮಾಡಿದ್ದೆ. ತಕ್ಷಣವೇ ಅವರು ಹೇಳಿದರು, ಈ ಬೇಡಿಕೆಯನ್ನು ಈಡೇರಿಸಲಾಗುವುದು ಎಂದು. 2022–2023ರಲ್ಲಿ ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರಕಾರವೂ ಈ ಬಗ್ಗೆ ಕೇಂದ್ರಕ್ಕೆ ಶಿಫಾರಸು ಮಾಡಿತ್ತು. ಕರ್ನಾಟಕದ 13 ಜಿಲ್ಲೆಗಳಲ್ಲಿರುವ ಕಾಡುಗೊಲ್ಲ ಸಮುದಾಯದ ಹಿತಕ್ಕಾಗಿ ಪ್ರಧಾನಿಗಳು ನಿರ್ಧಾರ ಪ್ರಕಟಿಸಬೇಕು ಎಂದು ಸದನದ ಮೂಲಕ ಮನವಿ ಮಾಡುತ್ತೇನೆ ಎಂದು ಮಾಜಿ ಪ್ರಧಾನಿಗಳು ಹೇಳಿದರು.

ಮಾಲಿನ್ಯ ನಿಯಂತ್ರಣ ಮಸೂದೆಗೆ ಸ್ವಾಗತ: ಸದನದಲ್ಲಿ ಮಂಡಸಲಾಗಿದ್ದ ಮಾಲಿನ್ಯ ನಿಯಂತ್ರಣ ಮಸೂದೆಯನ್ನು ಸ್ವಾಗತಿಸಿದ ಮಾಜಿ ಪ್ರಧಾನಿಗಳು; ಮಾಲಿನ್ಯ ನಿಯಂತ್ರಣದ ಹೆಸರಿನಲ್ಲಿ ಕರ್ನಾಟಕವೂ ಸೇರಿದಂತೆ ಎಲ್ಲೆಡೆ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ನನಗೆ ಅರಿವಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ತಮ್ಮ ಸ್ವಾರ್ಥಕ್ಕಾಗಿ, ಸ್ವಹಿತಕ್ಕಾಗಿ ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತಾರೆ ಎಂಬ ಬಗ್ಗೆ ಮುಖ್ಯಮಂತ್ರಿ ಆಗಿದ್ದ ನನಗೆ ಚೆನ್ನಾಗಿ ಗೊತ್ತಿದೆ ಎಂದರು.

ಇಂದಿನಿಂದ ರಾಜ್ಯಾದ್ಯಂತ ಭಾರತ್ ಬ್ರ್ಯಾಂಡ್ ಅಕ್ಕಿ ಮಾರಾಟ

ಬೆಂಗಳೂರು, ಫೆ.6– ಮಾಜಿ ಸಿಎಂ ಯಡಿಯೂರಪ್ಪ ಅವರು ಕೇಂದ್ರ ಸರ್ಕಾರದ ಭಾರತ್ ಬ್ರ್ಯಾಂಡ್ ಅಕ್ಕಿ ವಿತರಣೆಗೆ ಚಾಲನೆ ನೀಡಿದ್ದಾರೆ.



ಭಾರತ್ ಬ್ರ್ಯಾಂಡ್ ಅಕ್ಕಿ ವಿತರಣೆಗೆ ದೆಹಲಿಯಲ್ಲಿ ಆಹಾರ ಸಚಿವ ಪಿಯೂಷ್ ಗೋಯಲ್ ಚಾಲನೆ ನೀಡಿದ್ದು, ಈ ಉದ್ಘಾಟನೆಯ ನಂತರ ಕರ್ನಾಟಕದಲ್ಲಿ ಮಧ್ಯಾಹ್ನ 4 ಗಂಟೆಗೆ ಮಾಜಿ ಸಿಎಂ ಯಡಿಯೂರಪ್ಪ ಭಾರತ್ ಅಕ್ಕಿ ವಿತರಣೆಗೆ ಚಾಲನೆ ನೀಡಿದ್ದಾರೆ.

ಮೊದಲ ಹಂತದಲ್ಲಿ 5 ಲಕ್ಷ ಟನ್ ಅಕ್ಕಿಯನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಲು ನಿರ್ಧರಿಸಿದೆ. ಯಶವಂತಪುರದ ಎನ್‌ಸಿಸಿಎಫ್ ಗೋಡೌನ್‌ನಿಂದ ಸುಮಾರು 100 ಮೊಬೈಲ್ ವ್ಯಾನ್‌ಗಳ ಮೂಲಕ ನಗರದ ವಿವಿಧ ಭಾಗಗಳಿಗೆ ಸಂಚರಿಸಿ ಅಕ್ಕಿ ವಿತರಣೆ ನಡೆಯಲಿದೆ. ಕೆ.ಜಿ.ಗೆ 29 ರೂ. ದರದಲ್ಲಿ 5 ಹಾಗೂ 10 ಕೆ.ಜಿ ಬ್ಯಾಗ್‌ಗಳಲ್ಲಿ ಅಕ್ಕಿ ಸಿಗಲಿದೆ. ನಾಳೆಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಅಕ್ಕಿ ವಿತರಣೆಯಾಗಲಿದೆ. ಬಿಗ್ ಬಾಸ್ಕೆಟ್, ಫ್ಲಿಪ್‌ಕಾರ್ಟ್ ರಿಲಯನ್ಸ್ ಸ್ಟೋರ್ಸ್ ಮತ್ತು ಸ್ಟಾರ್ ಹೈಪರ್ ಬಜಾರ್‌ಗಳ ಜೊತೆಗೆ ಸಹ ಭಾರತ್ ಬ್ರಾಂಡ್ ಒಪ್ಪಂದ ನಡೆದಿದೆ.

ಅಜಿತ್ ಪವಾರ್ ಬಣ ನಿಜವಾದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ

ಚುನಾವಣಾ ಆಯೋಗ

ದೆಹಲಿ, ಫೆ.6– ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ ಮುಖ್ಯಸ್ಥ ಶರದ್ ಪವಾರ್ ಅವರು ತಮ್ಮ ಪಕ್ಷದ ಚಿಹ್ನೆಗಾಗಿ ನಡೆದ ಹೋರಾಟದಲ್ಲಿ ಸೋತಿದ್ದಾರೆ. ಚುನಾವಣಾ ಆಯೋಗವು ಮಂಗಳವಾರ ಅವರ ಸೋದರಳಿಯ ಅಜಿತ್ ಪವಾರ್ ಅವರ ಬಣವೇ ನಿಜವಾದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ ಎಂದು ಹೇಳಿದೆ. ವಿವಾದಿತ ಆಂತರಿಕ ಸಾಂಸ್ಥಿಕ ಚುನಾವಣೆಗಳ ದೃಷ್ಟಿಯಿಂದ ಅಜಿತ್ ಪವಾರ್ ಬಣ ಎನ್‌ಸಿಪಿ ಚಿಹ್ನೆಯನ್ನು ಪಡೆಯಲು 'ಶಾಸಕ ಬಹುಮತದ ಪರೀಕ್ಷೆ' ಸಹಾಯ ಮಾಡಿತು ಎಂದು ಚುನಾವಣಾ ಸಮಿತಿ ಹೇಳಿದೆ.6 ತಿಂಗಳಿಗಿಂತ ಹೆಚ್ಚು ಕಾಲ 10 ಕ್ಕೂ ಹೆಚ್ಚು ವಿಚಾರಣೆಗಳ ನಂತರ ಆಯೋಗ ಈ ನಿರ್ಧಾರಕ್ಕೆ ಬಂದಿದೆ.

ಎನ್‌ಸಿಪಿ ಬಣಕ್ಕೆ ಮೀಸಲು ಚಿಹ್ನೆಯಾಗಿರುವ ಗಡಿಯಾರ ಚಿಹ್ನೆಯನ್ನು ಬಳಸಲು ಅಜಿತ್ ಪವಾರ್ ಬಣಕ್ಕೆ ಅರ್ಹತೆ ಇದೆ ಎಂದು ಚುನಾವಣಾ ಆಯೋಗ ಹೇಳಿದೆ. ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶ 1968 ರ ಅಡಿಯಲ್ಲಿ ಅಜಿತ್ ಪವಾರ್ ಬಣವು ಎನ್‌ಸಿಪಿಯ ಅಧಿಕೃತ ಚಿಹ್ನೆಯನ್ನು ಬಳಸಲು ಕೋರಿ ಸಲ್ಲಿಸಿದ ಅರ್ಜಿಯನ್ನು ಅನುಮತಿಸುವ ಆದೇಶವನ್ನು ಇಸಿಐ ಅಂಗೀಕರಿಸಿತು.

ಮೇ 12ಕ್ಕೆ ಕಾಮೆಡ್–ಕೆ ಪರೀಕ್ಷೆ: ಅರ್ಜಿ ಸಲ್ಲಿಕೆ ಆರಂಭ

ಬೆಂಗಳೂರು, ಫೆ.6– ಕರ್ನಾಟಕ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ದಂತ ವೈದ್ಯಕೀಯ ಕಾಲೇಜುಗಳ ಒಕ್ಕೂಟ (ಕಾಮೆಡ್–ಕೆ) ಎಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಮೇ 12ರಂದು ಪರೀಕ್ಷೆ ನಡೆಸಲಿದೆ.

ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾಮೆಡ್–ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಕುಮಾರ್, ಭಾರತದ 200ಕ್ಕೂ ಅಧಿಕ ನಗರಗಳ 400ಕ್ಕೂ ಹೆಚ್ಚು ಕೇಂದ್ರಗಳಲ್ಲಿ ಕಾಮೆಡ್–ಕೆ ಹಾಗೂ ಯುಜಿಇಟಿ, ಯುನಿ–ಗೇಜ್ ಸಂಯೋಜಿತ ಪರೀಕ್ಷೆಗಳನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತದೆ. ಪರೀಕ್ಷೆ ಎದುರಿಸುವ ವಿದ್ಯಾರ್ಥಿಗಳು ಕರ್ನಾಟಕದ 150 ಎಂಜಿನಿಯರಿಂಗ್ ಕಾಲೇಜುಗಳು ಹಾಗೂ ಭಾರತದ 50ಕ್ಕೂ ಹೆಚ್ಚು ಖಾಸಗಿ ಹಾಗೂ ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಪಡೆಯಬಹುದು ಎಂದು ಮಾಹಿತಿ ನೀಡಿದರು. ಆಸಕ್ತರು www.comedk.org ಅಥವಾ www.unigauge.com ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು. ಅರ್ಜಿ ಸಲ್ಲಿಸಲು ಏ. 5 ಕೊನೆಯ ದಿನ. ಈ ಬಾರಿ ಒಂದು ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ನಿರೀಕ್ಷೆ ಇದೆ ಎಂದರು.

ಇಂದು ಮೈಸೂರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ
ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಭಾಗಿ



ಮೈಸೂರು, ಫೆ.6(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ನಾಳೆ (ಫೆಬ್ರವರಿ 7) ಮೈಸೂರಿನ ಸುತ್ತೂರು ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಲಿದ್ದಾರೆ. ಕೇಂದ್ರ ಸರ್ಕಾರದ ತಾರತಮ್ಯ ನೀತಿ ವಿರೋಧಿಸಿ ದೆಹಲಿಯಲ್ಲಿ ನಾಳೆ ನಡೆಯುವ ಪ್ರತಿಭಟನೆಯಲ್ಲಿ ಭಾಗವಹಿಸಿದ ನಂತರ ಮಧ್ಯಾಹ್ನ 2 ಗಂಟೆಗೆ ದೆಹಲಿಯ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ ಸಂಜೆ 4.45 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸುವರು. ತರುವಾಯ ರಸ್ತೆ ಮೂಲಕ ಮೈಸೂರಿನ ಸುತ್ತೂರು ಶ್ರೀ ಕ್ಷೇತ್ರಕ್ಕೆ ಭೇಟಿ ನೀಡಿ ಸಂಜೆ 5.20 ಗಂಟೆಗೆ ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.

ನಂತರ ಸಂಜೆ 6.15 ಗಂಟೆಗೆ ವರುಣ ಹೋಬಳಿಯ ಮಹದೇವಿ ಕಾಲೋನಿಯ ಶ್ರೀ ಮಾರಮ್ಮ ದೇವಿ ದೇವಸ್ಥಾನವನ್ನು ಸಿದ್ದರಾಮಯ್ಯ ಉದ್ಘಾಟಿಸುವರು. ಅಲ್ಲಿಂದ ಮೈಸೂರಿಗೆ ಆಗಮಿಸಿ ರಾತ್ರಿ 9 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು.

ಪ್ರಮುಖ ನೀರಿನ ಪೈಪ್ ರಿಪೇರಿ



ಮೈಸೂರು, ಫೆ.6(ಬಿಎಲ್‌ಯು)– ಮೈಸೂರಿನ ಬಂಬೂ ಬಜಾರ್‌ನ ಯಾದವಗಿರಿ ರೈಲ್ವೆ ಅಂಡರ್ ಬ್ರಿಡ್ಜ್ ಬಳಿ ಒಡೆದು ಹೋಗಿದ್ದ ಕುಡಿಯುವ ನೀರಿನ ಪೈಪ್ ಅನ್ನು ಪೂರ್ಣವಾಗಿ ರಿಪೇರಿ ಮಾಡಲಾಗಿದೆ. ಪೈಪ್ ಒಡೆದು ನೀರು ಪೋಲಾಗುತ್ತಿರುವ ಬಗ್ಗೆ 'ಮೈಸೂರು ಮಿತ್ರ'ದಲ್ಲಿ ವರದಿ ಪ್ರಕಟವಾಗಿತ್ತು. ಈ ಹಿನ್ನೆಲೆಯಲ್ಲಿ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರದ ಅಧಿಕಾರಿಗಳು ಸೋಮವಾರ ನೀರಿನ ಪೈಪ್ ರಿಪೇರಿ ಮಾಡಿಸಿದ್ದಾರೆ. ಒಡೆದು ಹೋಗಿದ್ದ ಕಬ್ಬಿಣದ ಪೈಪ್‌ನ ಸುಮಾರು ಐದು ಅಡಿ ಭಾಗದಲ್ಲಿ ಹೊಸ ಕಬ್ಬಿಣದ ಪೈಪ್ ಸಾಲ್ಡರ್ ಮಾಡಲಾಗಿದೆ. ನಿನ್ನೆ ಬೆಳಿಗ್ಗೆ ರಿಪೇರಿ ಕಾರ್ಯ ಆರಂಭಿಸಿದ ಸಿಬ್ಬಂದಿ ರಾತ್ರಿ ಪೂರ್ಣಗೊಳಿಸಿದ್ದಾರೆ.

ಮೈಸೂರಿನಲ್ಲಿ ಗುಣಮಟ್ಟದ ಶಿಕ್ಷಣ ಲಭ್ಯವಿಲ್ಲ; ಮಂಗಳೂರು ಸೇರಿ ಇತರೆಡೆಗೆ ಐದು ವರ್ಷದಿಂದ 15 ಸಾವಿರ ಮಕ್ಕಳು ವಲಸೆ

ಸುಧಾರಣಾ ಕ್ರಮಕ್ಕೆ 10 ದಿನದಲ್ಲಿ ವರದಿ ನೀಡಲು ಅಧಿಕಾರಿಗಳಿಗೆ ಮಧು ಬಂಗಾರಪ್ಪ ತಾಕೀತು

● ಮೈಸೂರಿನ ಖಾಸಗಿ ಶಾಲೆಗಳಲ್ಲೂ ಗುಣಮಟ್ಟದ ಶಿಕ್ಷಣವಿಲ್ಲ ● ಶಿಕ್ಷಣ ಇಲಾಖೆಯಿಂದ ಯಾವ ಶಾಲೆಯನ್ನೂ ಮುಚ್ಚಬಾರದು ● 4 ತಿಂಗಳಲ್ಲಿ ಲೋಪ ಸರಿಪಡಿಸಿಕೊಳ್ಳಲು ಸೂಚನೆ ● ಡಯಟ್ ಶಿಕ್ಷಕರಿಗೆ ಚುರುಕು ಮುಟ್ಟಿಸಿ

ಮೈಸೂರು, ಫೆ.6(ಬಿಎಲ್‌ಯು)– ಮೈಸೂರಿನಲ್ಲಿ ಗುಣಮಟ್ಟದ ಶಿಕ್ಷಣ ದೊರೆಯದ ಕಾರಣ ಐದು ವರ್ಷಗಳಲ್ಲಿ 15 ಸಾವಿರಕ್ಕೂ ಹೆಚ್ಚು ಮಕ್ಕಳು ಒಳ್ಳೆಯ ವಿದ್ಯಾಭ್ಯಾಸಕ್ಕಾಗಿ ಮಂಗಳೂರು ಸೇರಿದಂತೆ ಇತರೆ ಜಿಲ್ಲೆಗಳಿಗೆ ವಲಸೆ ಹೋಗಿದ್ದಾರೆ ಎಂದು ಹೇಳುವ ಮೂಲಕ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅಧಿಕಾರಿಗಳಲ್ಲಿ ಎಚ್ಚರಿಕೆ ಸಂದೇಶ ರವಾನಿಸಿದರು.

ಮೈಸೂರಿನ ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಇಂದು ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮೈಸೂರಿನ ಸರ್ಕಾರಿ ಶಾಲೆಗಳಲ್ಲಿ ಮಾತ್ರವಲ್ಲದೆ ಖಾಸಗಿ ಹಾಗೂ ಅನುದಾನಿತ ಶಾಲೆಗಳಲ್ಲಿ ಕೂಡ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ ಎಂದರು.

ಈ ಕಾರಣದಿಂದ ಐದು ವರ್ಷದ ಅವಧಿಯಲ್ಲಿ ಮೈಸೂರಿನ 15 ಸಾವಿರ ಮಕ್ಕಳು ಮಂಗಳೂರು ಸೇರಿದಂತೆ ಇತರೆ ಜಿಲ್ಲೆಗಳಿಗೆ ಗುಣಮಟ್ಟದ ಶಿಕ್ಷಣ ಪಡೆಯಲು ವಲಸೆ ಹೋಗಿದ್ದಾರೆ. ಇದಲ್ಲದೆ ಐದು ವರ್ಷದ ಅವಧಿಯಲ್ಲಿ 25 ಸಾವಿರ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಅಂಕಿ ಅಂಶಗಳು ಇದನ್ನು ಸಾಬೀತುಪಡಿಸುತ್ತಿವೆ ಎಂದು ಹೇಳಿದರು.

ಸಮಗ್ರ ವರದಿಗೆ ಸೂಚನೆ: ಮೈಸೂರಿನಲ್ಲಿ ಗುಣಮಟ್ಟದ ಶಿಕ್ಷಣ ಏಕೆ ಸಿಗುತ್ತಿಲ್ಲ, ಮಕ್ಕಳು ಶಾಲೆಯಿಂದ ಹೊರಗುಳಿಯಲು ಏನು ಕಾರಣ ಎಂಬ ಬಗ್ಗೆ ಸಮಗ್ರ ವರದಿಯನ್ನು ಇನ್ನು ಹತ್ತು ದಿನದಲ್ಲಿ ನೀಡಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದ ಮಧು ಬಂಗಾರಪ್ಪ, ಗುಣಮಟ್ಟದ ಶಿಕ್ಷಣ ನೀಡಿ, ಮಕ್ಕಳನ್ನು ಮತ್ತೆ ಶಾಲೆಗೆ ಕರೆ ತರುವ ನಿಟ್ಟಿನಲ್ಲಿ ಯಾವ ಸುಧಾರಣಾ ಕ್ರಮ ಕೈಗೊಳ್ಳಬೇಕೆಂಬ ವಿಚಾರಗಳು ಕೂಡ ವರದಿಯಲ್ಲಿರಬೇಕು ಎಂದು ಸೂಚಿಸಿದರು. ಚಾಮರಾಜನಗರದಲ್ಲಿ ಕೂಡ ಇದೇ ಪರಿಸ್ಥಿತಿ ಇದ್ದು, ಕಳೆದ ಐದು ವರ್ಷದ ಅವಧಿಯಲ್ಲಿ ಗುಣಮಟ್ಟದ ಶಿಕ್ಷಣವಿಲ್ಲದೆ 1,100 ವಿದ್ಯಾರ್ಥಿಗಳು ಸರ್ಕಾರಿ ಶಾಲೆ ಬಿಟ್ಟು ಖಾಸಗಿ ಶಾಲೆ ಸೇರಿದ್ದಾರೆ. ಮುಂದೆ ಹೀಗೆ ಆಗಬಾರದು ಎಂದು ಎಚ್ಚರಿಸಿದರು.



ಮೈಸೂರಿನ ಜಿಲ್ಲಾ ಪಂಚಾಯಿತಿಯ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಮಂಗಳವಾರ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ರಾಜ್ಯಾದ್ಯಾಂತ 12 ಸಾವಿರ ಹೆಚ್ಚುವರಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ. ಉಚಿತ ಊಟ, ಸಮವಸ್ತ್ರ ಸೇರಿದಂತೆ ಹಲವು ಸೌಲಭ್ಯಗಳನ್ನು ನೀಡುತ್ತಿದ್ದರೂ ಗುಣಮಟ್ಟದ ಶಿಕ್ಷಣ ಏಕೆ ದೊರೆಯುತ್ತಿಲ್ಲ, ಜೊತೆಗೆ ಮಕ್ಕಳು ಶಾಲೆಯಿಂದ ಹೊರಗುಳಿಯುತ್ತಿರುವುದೇಕೆ ಎಂದು ಪ್ರಶ್ನಿಸಿ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಯಾವುದೇ ಕಾರಣಕ್ಕೂ ಶಿಕ್ಷಣ ಇಲಾಖೆಯಿಂದ ಶಾಲೆಗಳನ್ನು ಮುಚ್ಚಬಾರದು. ಶೈಕ್ಷಣಿಕ ವರ್ಷ ಆರಂಭಕ್ಕೆ ಇನ್ನು ನಾಲ್ಕು ತಿಂಗಳಿದ್ದು, ಅಷ್ಟರಲ್ಲಿ ಲೋಪಗಳನ್ನು ಸರಿಪಡಿಸಿಕೊಳ್ಳಬೇಕು ಎಂದು ಸೂಚಿಸಿದರು. ಡಯಟ್‌ನಲ್ಲಿರುವ ಶಿಕ್ಷಕರು ಆರಾಮವಾಗಿದ್ದಾರೆ. ಅಧಿಕಾರಿಗಳು ಇವರನ್ನು ಹೀಗೆ ಬಿಡದೆ ಚುರುಕುಗೊಳಿಸಬೇಕು. ನಿರ್ದಿಷ್ಟ ಜವಾಬ್ದಾರಿಗಳನ್ನು ನೀಡಬೇಕು ಎಂದು ಸಲಹೆ ನೀಡಿದರು.

ಪೆನ್, ಬುಕ್ ಹಿಡಿಯುವ ಮಕ್ಕಳ ಕೈ ಪೊರಕೆ ಹಿಡಿಯಬಾರದು

ಶಿಕ್ಷಕರು ಮಕ್ಕಳನ್ನು ಸ್ವಚ್ಛತಾ ಕಾರ್ಯಕ್ಕೆ ಬಳಸಿಕೊಳ್ಳಬಾರದು. ಪೆನ್, ಬುಕ್ ಹಿಡಿಯುವ ಮಕ್ಕಳ ಕೈ ಪೊರಕೆ ಹಿಡಿಯಬಾರದು ಎಂದು ಇದೇ ವೇಳೆ ಶಿಕ್ಷಣ ಸಚಿವ ಮಧು ಬಂಗಾರಪ್ಪ ಶಿಕ್ಷಕರು ಹಾಗೂ ಅಧಿಕಾರಿಗಳಿಗೆ ತಾಕೀತು ಮಾಡಿದರು. ಕರ್ನಾಟಕದಲ್ಲಿ 48 ಸಾವಿರ ಶಾಲೆಗಳಿವೆ. ಯಾವುದೇ ಶಾಲೆಯಲ್ಲಿ ಸ್ವಚ್ಛತೆ ಇಲ್ಲದಿದ್ದರೆ ಕೂಡಲೇ ಫೋಟೋ ತೆಗೆದು ಸರ್ಕಾರ ಸೂಚಿಸುವ ಮೊಬೈಲ್ ಸಂಖ್ಯೆಗೆ ಕಳುಹಿಸಬೇಕು. ಆ ಫೋಟೋ ಕಮಾಂಡ್ ಸೆಂಟರ್‌ಗೆ ಹೋಗುತ್ತದೆ. ಅಲ್ಲಿಂದ ಸಂಬಂಧಿಸಿದ ಅಧಿಕಾರಿಗಳಿಗೆ ಆ ವಿಚಾರ ತಿಳಿಸಿ ಶಾಲೆ ಸ್ವಚ್ಛಗೊಳಿಸಲಾಗುವುದು. ಇಂತಹ ಸಾಫ್ಟ್‌ವೇರ್ ಅನ್ನು ಸಿದ್ಧಪಡಿಸಲಾಗುತ್ತಿದ್ದು, ಶೀಘ್ರವೇ ಇದನ್ನು ಪರಿಚಯಿಸಲಾಗುವುದು ಎಂದು ತಿಳಿಸಿದರು. ಇನ್ನು ಮುಂದೆ ಪ್ರತಿಯೊಂದು ಶಾಲೆಗೆ ಉಚಿತ ವಿದ್ಯುತ್ ಹಾಗೂ ಕುಡಿಯುವ ನೀರು ಸರಬರಾಜು ಮಾಡಲಾಗುವುದು. ಉಚಿತ ವಿದ್ಯುತ್ ನೀಡುವುದರಿಂದ ಸಮರ್ಪಕ ಕಂಪ್ಯೂಟರ್ ಬಳಕೆಯಾಗಲಿದೆ ಎಂದು ಮಧು ಬಂಗಾರಪ್ಪ ಅಭಿಪ್ರಾಯಪಟ್ಟರು. ಮಕ್ಕಳಿಗೆ ಉಚಿತವಾಗಿ ನೀಡುವ ಪಠ್ಯಪುಸ್ತಕ ಹಾಗೂ ಸಮವಸ್ತ್ರಗಳನ್ನು ಪ್ರತಿ ಜಿಲ್ಲೆಯಲ್ಲಿ ಅಗತ್ಯವಾಗಿ ಪಡೆಯಲಾಗುತ್ತಿದೆ. ಆದರೆ ಅವು ಬಳಕೆಗೆ ಬಾರದೆ ಅನುಪಯುಕ್ತವಾಗುತ್ತಿದೆ. ಆದ ಕಾರಣ ಅವಶ್ಯವಿರುವಷ್ಟು ಪುಸ್ತಕ ಹಾಗೂ ಸಮವಸ್ತ್ರ ಪಡೆಯಬೇಕು ಎಂದು ಮಧು ಬಂಗಾರಪ್ಪ ಅಧಿಕಾರಿಗಳಿಗೆ ಸೂಚಿಸಿದರು.

ಕೆಎಸ್‌ಎಂಸಿಎ ಅಧ್ಯಕ್ಷರಾಗಿ ಸತೀಶ್ ಕೃಷ್ಣ ಸೈಲ್ ಅಧಿಕಾರ ಸ್ವೀಕಾರ



ಬೆಂಗಳೂರು, ಫೆ. 6–ದೇಶದ ಜಾಹೀರಾತು ಕ್ಷೇತ್ರದಲ್ಲಿ ರಾಜ್ಯ ಸರ್ಕಾರದ ಏಕೈಕ ಸಂಸ್ಥೆಯಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಸಂಸ್ಥೆಯ 29ನೇ ಅಧ್ಯಕ್ಷರಾಗಿ ಕಾರವಾರ ವಿಧಾನ ಸಭಾ ಕ್ಷೇತ್ರದ ಶಾಸಕ ಸತೀಶ್ ಕೃಷ್ಣ ಸೈಲ್ ಸೋಮವಾರ ಅಧಿಕಾರ ವಹಿಸಿಕೊಂಡರು.

ಪದಗ್ರಹಣ ಸಮಾರಂಭದಲ್ಲಿ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ. ಪೂಜಾರಿ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಈ ವೇಳೆ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು, ಈ ಹೆಮ್ಮೆಯ ಸಂಸ್ಥೆಗೆ ನನ್ನನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿರುವುದಕ್ಕೆ ಕರ್ನಾಟಕ ಸರ್ಕಾರಕ್ಕೆ ನಾನು ಕೃತಜ್ಞತೆ ಸಲ್ಲಿಸುತ್ತೇನೆ ಎಂದು ತಿಳಿಸಿದರು. ಕರ್ನಾಟಕ ಸರ್ಕಾರವು ಈ ಸಂಸ್ಥೆಯನ್ನು ಸರ್ವ ರೀತಿಯಲ್ಲೂ ಪ್ರಗತಿಪರವಾಗಿ ಮುನ್ನಡೆಸಲು ತಮಗೆ ವಹಿಸಿರುವ ಈ ಜವಾಬ್ದಾರಿಯನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತೇನೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಸ್ಥೆಯ ಅಭಿವೃದ್ಧಿಗೆ ಸರ್ಕಾರದಿಂದ ಆಗಬೇಕಾಗಿರುವ ಎಲ್ಲಾ ಸ್ತರದ ಕಾರ್ಯಗಳನ್ನು ಸಕಾಲದಲ್ಲಿ ಮಾಡಿಸುವುದರ ಜೊತೆಗೆ ಸರ್ಕಾರದ ಮಟ್ಟದ ಎಲ್ಲಾ ರೀತಿಯ ಬೆಂಬಲವನ್ನು ಪಡೆಯಲು ನಾನು ಅತ್ಯಂತ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ. ಇದು ನನ್ನ ಗುರಿ ಎಂದು ತಿಳಿಸಿದರು.

ಸಂಸ್ಥೆಯ ಅಭಿವೃದ್ಧಿಗೆ ಅಗತ್ಯವಾದ ವಿಚಾರಗಳ ಬಗ್ಗೆ ಸಂಸ್ಥೆಯ ಅಧಿಕಾರಿಗಳು, ಸಿಬ್ಬಂದಿ ಹಾಗೂ ಗ್ರಾಹಕರ ಜೊತೆಗೆ ಚರ್ಚಿಸಿ ಅವರುಗಳ ನಿರೀಕ್ಷೆಯಂತೆ ಕಾರ್ಯ ನಿರ್ವಹಿಸಿ, ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಯ ಜೊತೆ ಸಮಾಜಮುಖಿ ಕೆಲಸ ಮಾಡುವುದರಲ್ಲಿಯೂ ತೊಡಗಿಸಿಕೊಳ್ಳುವುದಾಗಿ ತಿಳಿಸಿದರು. ಕಾರವಾರ, ಅಂಕೋಲಾ ವಿಧಾನಸಭಾ ಕ್ಷೇತ್ರದ ಮುಖಂಡರು, ಅಭಿಮಾನಿಗಳು ಸೇರಿದಂತೆ ಬಹು ಸಂಖ್ಯೆಯ ಕಾರ್ಯಕರ್ತರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಮತ್ತೆ ಎಡವಿದರೆ ಐದು ವರ್ಷ ಕಾಯಬೇಕಾಗುತ್ತದೆ
ಕಾಂಗ್ರೆಸ್ ಕಾರ್ಯಕರ್ತರಿಗೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಎಚ್ಚರಿಕೆ

ಮೈಸೂರು, ಫೆ.6(ಬಿಎಲ್‌ಯು)– ಒಂದು ಬಾರಿ ಎಡವಿದರೆ ಐದು ವರ್ಷ ಕಾಯಬೇಕಾಗುತ್ತದೆ. ಆದ ಕಾರಣ ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷದ ಶಕ್ತಿ ಗಟ್ಟಿಗೊಳಿಸಲು ಕೈ ಜೋಡಿಸಿ ಎಂದು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಕಾಂಗ್ರೆಸ್ ಕಾರ್ಯಕರ್ತರಿಗೆ ಸಲಹೆ ನೀಡಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಪಕ್ಷದ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಈಗಾಗಲೇ ಹಲವು ಬಾರಿ ಎಡವಿದ್ದೇವೆ. ಈಗ ಮತ್ತೆ ಅದೇ ರೀತಿ ಎಡವದೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಕಾಂಗ್ರೆಸ್ ಸಂಸದರನ್ನು ಗೆಲ್ಲಿಸಿ ಎಂದು ಸಲಹೆ ನೀಡಿದರು.

ಮಂಗಳೂರಿನಲ್ಲಿ ಧರ್ಮದ ವಿಚಾರ ಮುಂದಿಟ್ಟು ಬಿಜೆಪಿಯವರು ಭಾವನಾತ್ಮಕವಾಗಿ ಗೆಲ್ಲುತ್ತಿದ್ದರು. ಆದರೆ ಈಗ ಪರಿಸ್ಥಿತಿ ಬೇರೆಯೇ ಇದೆ. ಇಡೀ ರಾಜ್ಯದಲ್ಲಿ ಈಗ ಜನರು ಕಾಂಗ್ರೆಸ್ ಪರವಾಗಿದ್ದಾರೆ ಎಂದು ಮಧು ಬಂಗಾರಪ್ಪ ವಿಶ್ವಾಸ ವ್ಯಕ್ತಪಡಿಸಿದರು. ಬಿಜೆಪಿಯವರು ರಾಜಕೀಯ ಲಾಭಕ್ಕಾಗಿ ಶ್ರೀರಾಮನನ್ನು ಬೀದಿಗೆ ತಂದರು. ಈ ಕಾರಣದಿಂದಲೇ ಮಾಜಿ ಮುಖ್ಯಮಂತ್ರಿ ದಿವಂಗತ ಬಂಗಾರಪ್ಪ ಅವರು ಅಂಗೋಧ್ಯೆಯನ್ನು ಬಿಜೆಪಿಯವರೇ ಗುತ್ತಿಗೆ ತೆಗೆದುಕೊಳ್ಳಲಿ ಎಂದು ಆರಾಧನಾ ಯೋಜನೆಯಲ್ಲಿ ರಾಜ್ಯದ ದೇವಾಲಯಗಳನ್ನು ಅಭಿವೃದ್ಧಿ ಮಾಡಿದರು ಎಂದು ಹೇಳಿದರು.



ಮೈಸೂರಿನ ಕಾಂಗ್ರೆಸ್ ಕಚೇರಿಯಲ್ಲಿ ಮಂಗಳವಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರನ್ನು ಕಾಂಗ್ರೆಸ್ ಕಾರ್ಯಕರ್ತರು ಸನ್ಮಾನಿಸಿದರು.

ಇಡೀ ರಾಜ್ಯದಲ್ಲಿ ಎಲ್ಲಾ ಶಾಲೆಗಳಲ್ಲಿ ಸಂವಿಧಾನ ಪೀಠಿಕೆಯನ್ನು ಮಕ್ಕಳು ಅನುಸರಿಸುತ್ತಿದ್ದಾರೆ. ಸಂವಿಧಾನ ಪೀಠಿಕೆ ಓದುವುದರ ಜೊತೆಗೆ ಮನನ ಮಾಡಿಕೊಂಡಿದ್ದಾರೆ. ಈ ಮೂಲಕ ಮಕ್ಕಳಲ್ಲಿ ಒಳ್ಳೆಯ ಬುದ್ಧಿ ಕಲಿಸಲು ನಮ್ಮ ಸರ್ಕಾರ ಹಲವು ಸುಧಾರಣಾ ಕ್ರಮ ಕೈಗೊಂಡಿದೆ ಎಂದು ಮಧು ಬಂಗಾರಪ್ಪ ತಿಳಿಸಿದರು.

ಈ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಮಧು ಬಂಗಾರಪ್ಪ ಅವರಿಗೆ ಮೈಸೂರು ಪೇಟ ತೊಡಿಸಿ, ಸನ್ಮಾನಿಸಿದರು.

ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಕಾರ್ಯದರ್ಶಿ ಶಿವಣ್ಣ, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಸೇರಿದಂತೆ ಇತರರು ಹಾಜರಿದ್ದರು.

ಮಧ್ಯಪ್ರದೇಶ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ
ಸಾವಿನ ಸಂಖ್ಯೆ 11ಕ್ಕೆ ಏರಿಕೆ, ಪ್ರಧಾನಿ ಮೋದಿ ಸಂತಾಪ





ಭೂಪಾಲ್: ಮಧ್ಯಪ್ರದೇಶದ ಹರ್ದಾ ಜಿಲ್ಲೆಯ ಬೈರಾಗರ್ ಪ್ರದೇಶದಲ್ಲಿ ಮಂಗಳವಾರ ಬೆಳಗ್ಗೆ ಪಟಾಕಿ ಕಾರ್ಖಾನೆಯಲ್ಲಿ ಸಂಭವಿಸಿದ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ ಮತ್ತು 80ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಗಾಯಾಳುಗಳನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಗಂಭೀರವಾಗಿ ಗಾಯಗೊಂಡವರನ್ನು ಭೋಪಾಲ್ ಮತ್ತು ಇಂದೋರ್‌ಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಹರ್ದಾ ಕಲೆಕ್ಟರ್ ರಿಷಿ ಗಾರ್ಗ್ ತಿಳಿಸಿದ್ದಾರೆ.

ಹರ್ದಾ ನಗರದಿಂದ 2 ಕಿ.ಮೀ ದೂರದಲ್ಲಿರುವ ಮಗರ್ಧ ರೋಡ್ ಕಾರ್ಖಾನೆಯಲ್ಲಿ ಇಂದು ಬೆಳಗ್ಗೆ ಸುಮಾರು 11 ಗಂಟೆಗೆ ಬೆಂಕಿ ಹೊತ್ತಿಕೊಂಡಿದೆ. ಬೆಂಕಿ ಹೊತ್ತಲು ಕಾರಣ ಏನು ಎಂಬುದು ಇದುವರೆಗೆ ತಿಳಿದು ಬಂದಿಲ್ಲ.

ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ ಸಂಭವಿಸಿದ ನಂತರ ಬೆಂಕಿಯ ಕೆನ್ನಾಲಗೆ ಕಾರ್ಖಾನೆ ಒಳಗೆ ಹಾಗೂ ಹೊರಗೆ ವ್ಯಾಪಿಸಿದ್ದು, ಪ್ರದೇಶದ ಸುಮಾರು 60ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದೆ.

ಸ್ಫೋಟದ ಪರಿಣಾಮ ಕಾರ್ಖಾನೆ ಸುತ್ತಮುತ್ತಲ ಪ್ರದೇಶದಲ್ಲಿ ದಟ್ಟ ಹೊಗೆ ಆವರಿಸಿಕೊಂಡಿದ್ದು, ಅಗ್ನಿಶಾಮಕ ಸಿಬ್ಬಂದಿಯಿಂದ ಬೆಂಕಿ ನಂದಿಸುವ ಕಾರ್ಯ ನಡೆಯುತ್ತಿದೆ. ಘಟನೆಗೆ ತೀವ್ರ ಸಂತಾಪ ವ್ಯಕ್ತಪಡಿಸಿದ ಪ್ರಧಾನಿ ನರೇಂದ್ರ ಮೋದಿ ಅವರು, ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂಪಾಯಿ ಪರಿಹಾರ ಮತ್ತು ಗಾಯಗೊಂಡವರಿಗೆ 50,000 ರೂಪಾಯಿ ಪರಿಹಾರ ಘೋಷಿಸಿದ್ದಾರೆ. ಮಧ್ಯಪ್ರದೇಶದ ಹರ್ದಾದಲ್ಲಿ ಪಟಾಕಿ ಕಾರ್ಖಾನೆಯಲ್ಲಿ ಸಂಭವಿಸಿದ ದುರ್ಘಟನೆಯಿಂದ ಪ್ರಾಣಹಾನಿಯಾಗಿದೆ. ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಎಲ್ಲರಿಗೂ ಸಂತಾಪಗಳು. ಗಾಯಗೊಂಡವರು ಆದಷ್ಟು ಬೇಗ ಚೇತರಿಸಿಕೊಳ್ಳಲಿ. ಸ್ಥಳೀಯ ಆಡಳಿತವು ಸಂತ್ರಸ್ತರಿಗೆ ಸಹಾಯ ಮಾಡುತ್ತದೆ ಎಂದು ಪ್ರಧಾನಿ ಮೋದಿ ಟ್ವೀಟ್ ಮಾಡಿದ್ದಾರೆ

ವಿವಿಧ ಪಿಂಚಣಿ ಸೌಲಭ್ಯದ ಮಂಜೂರಾತಿ ಪತ್ರ ವಿತರಣೆ
ಜನಸೇವೆಗೆ ಸಿಎಂ ಸಿದ್ದರಾಮಯ್ಯರೇ ಸ್ಫೂರ್ತಿ; ಮಾಜಿ ಶಾಸಕ ಎಂ.ಕೆ.ಸೋಮಶೇಖರ್



ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ವಿವಿಧ ಮಂಜೂರಾತಿ ಪತ್ರಗಳನ್ನು ವಿತರಣೆ ಮಾಡಿದರು.

ಮೈಸೂರು,ಫೆ.6(ಪಿಎಂ)– ಅರ್ಹರಿದ್ದೂ ವಂಚಿತರಾಗಿದ್ದ ಹಲವರಿಗೆ ವಿವಿಧ ಪಿಂಚಣಿಯ ಮಂಜೂರಾತಿ ಪತ್ರ ಕೊಡಿಸುವ ಮೂಲಕ ಜೆ.ಪಿ.ನಗರ ಯುವ ಬಳಗವು ವಿಶಿಷ್ಟ ರೀತಿಯಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರ ಹುಟ್ಟುಹಬ್ಬವನ್ನು ಆಚರಿಸಿತು.


ನಾಚನಹಳ್ಳಿಪಾಳ್ಯ–ಜೆಪಿ ನಗರ ಭಾಗದಲ್ಲಿ ವಿವಿಧ ಪಿಂಚಣಿಗಳಿಂದ ವಂಚಿತರಾಗಿದ್ದ ಹಲವರನ್ನು ಗುರುತಿಸಿದ್ದ ಬಳಗವು, ಅವರು ಸೂಕ್ತ ದಾಖಲೆಗಳೊಂದಿಗೆ ಸರ್ಕಾರಕ್ಕೆ ಅರ್ಜಿಗಳನ್ನು ಸಲ್ಲಿಸಲು ನೆರವಾಗಿ, ಮಂಗಳವಾರ ಮಂಜೂರಾತಿ ಪತ್ರಗಳನ್ನು ವಿತರಿಸುವ ಮೂಲಕ ಎಂ.ಕೆ.ಸೋಮಶೇಖರ್ ಅವರ ಹುಟ್ಟುಹಬ್ಬ ಆಚರಿಸಿ, ಅವರಿಗೆ ಶುಭಾಶಯ ಕೋರಲಾಯಿತು.

ಜೆಪಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಫಲಾನುಭವಿಗಳಿಗೆ ಮಂಜೂರಾತಿ ಪತ್ರಗಳನ್ನು ವಿತರಣೆ ಮಾಡಿದ ಎಂ.ಕೆ.ಸೋಮಶೇಖರ್ ಮಾತನಾಡಿ, ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಬಡಜನರ ಕಣ್ಣೀರು ಒರೆಸುತ್ತಿದೆ. ಚುನಾವಣಾ ಪೂರ್ವದಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವ ಮೂಲಕ ಸಿದ್ದರಾಮಯ್ಯನವರು ಬಡಜನರಿಗೆ ಸ್ಪಂದಿಸಿದ್ದಾರೆ. ಅವರ ಜನಪರ ಕಾರ್ಯಕ್ರಮಗಳೇ ನನ್ನ ಸಮಾಜ ಸೇವೆಗೆ ಸ್ಫೂರ್ತಿ ಎಂದು ಹೇಳಿದರು.

ಬಡಜನತೆಯ ಹಸಿವು ನೀಗಿಸಲು, ಅವರ ಆರ್ಥಿಕ ಸಮಸ್ಯೆಗಳಿಗೆ ಸ್ಪಂದಿಸಲು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿದರು. ಕೊಟ್ಟ ಭರವಸೆಗಳನ್ನು ಈಡೇರಿಸಿದ ರಾಜಕಾರಣಿಗಳಲ್ಲಿ ಸಿದ್ದರಾಮಯ್ಯನವರು ಮೊದಲಿಗರಾಗಿದ್ದಾರೆ. ನನ್ನ ರಾಜಕೀಯ ಜೀವನವನ್ನು ಪ್ರಾರಂಭಿಸಿದ ದಿನದಿಂದಲೂ ಸಿದ್ದರಾಮಯ್ಯನವರನ್ನು ಬೆಂಬಲಿಸುತ್ತ ಅವರ ಮಾರ್ಗದರ್ಶನದಲ್ಲಿ ನಡೆಯುತ್ತಿದ್ದೇನೆ ಎಂದು ತಿಳಿಸಿದರು. ಅಧಿಕಾರ ಇರಲಿ, ಇಲ್ಲದಿರಲಿ ನನ್ನ ಕೊನೆ ಉಸಿರಿನವರೆಗೂ ಜನಸೇವೆ ಮಾಡುತ್ತೇನೆ. ಮಹೇಂದ್ರ ಮತ್ತು ಜಗದೀಶ್ ಬೋವಿ ನೇತೃತ್ವದಲ್ಲಿಂದು 50ಕ್ಕೂ ಹೆಚ್ಚು ಮಂದಿಗೆ ಸಾಮಾಜಿಕ ಭದ್ರತೆ ಯೋಜನೆಯಡಿ ವಿವಿಧ ಸಹಾಯಧನ ಪಡೆಯುವ ಸಂಬಂಧ ಮಂಜೂರಾತಿ ಪತ್ರಗಳನ್ನು ವಿತರಿಸಿದ್ದೇವೆ. ಮುಂದೆಯೂ ನಾಗರಿಕರ ಕಷ್ಟ–ಸುಖಗಳಲ್ಲಿ ಭಾಗಿಯಾಗುತ್ತೇನೆ ಎಂದು ತಿಳಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಜೆ.ಪಿ.ನಗರ ಯುವ ಬಳಗದ ಮಹೇಂದ್ರ ಗೌಡ, ಜಗದೀಶ್ ಬೋವಿ, ಮುಖಂಡರಾದ ನವೀನ್ ಬೋವಿ, ಜಗದೀಶ್ ಗೌಡ, ಜಯರಾಮ್, ವಿಕಾಸ್ ಅರಸ್, ಮಂಜುಗೌಡ ಮತ್ತಿತರರು ಹಾಜರಿದ್ದರು.

ಸಾರ್ವಜನಿಕರಿಗೆ ತೊಂದರೆ!; ಮುಖ್ಯಮಂತ್ರಿ ಸಿದ್ದರಾಮಯ್ಯಗೆ 10 ಸಾವಿರ ದಂಡ

● ಈಶ್ವರಪ್ಪ ರಾಜೀನಾಮೆಗೆ ಆಗ್ರಹಿಸಿ ಸಿಎಂ ಸಿದ್ದರಾಮಯ್ಯ ಸೇರಿ ಇತರರು ರಸ್ತೆ ತಡೆ ಮಾಡಿದ್ದರು ● ಪ್ರಕರಣ ರದ್ದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಂತರ ಹೈಕೋರ್ಟ್ ತೀರ್ಪು



ಬೆಂಗಳೂರು, ಫೆ.6(ಕೆಎಂಶಿ)– ಪ್ರತಿಭಟನೆ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆ ನೀಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೈಕೋರ್ಟ್ 10 ಸಾವಿರ ರೂ. ದಂಡ ವಿಧಿಸಿದೆ.

ಅಷ್ಟೇ ಅಲ್ಲ, ಅವರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ರದ್ದು ಮಾಡಲು ನ್ಯಾಯಾಲಯ ನಿರಾಕರಿಸಿದೆ.

ಕೆ.ಎಸ್.ಈಶ್ವರಪ್ಪ ಅವರು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ 2022ರಲ್ಲಿ ಪ್ರತಿಭಟನೆ ನಡೆಸಿ, ರಸ್ತೆ ತಡೆ ಮಾಡಿ ಸಾರ್ವಜನಿಕರಿಗೆ ಅಡ್ಡಿಪಡಿಸಿದ ಆರೋಪ, ಇವರೂ ಸೇರಿದಂತೆ ಕೆಲವು ಕಾಂಗ್ರೆಸ್ ಮುಖಂಡರ ಮೇಲಿತ್ತು.

ತಮ್ಮ ವಿರುದ್ಧದ ಪ್ರಕರಣ ರದ್ದು ಕೋರಿ ಸಿದ್ದರಾಮಯ್ಯ, ಸಚಿವರಾದ ಎಂ.ಬಿ.ಪಾಟೀಲ್, ರಾಮಲಿಂಗಾರೆಡ್ಡಿ, ರಾಜ್ಯ ಉಸ್ತುವಾರಿ ಹೊಣೆ ಹೊತ್ತ ಎಐಸಿಸಿ ಪ್ರಧಾನಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ನ್ಯಾಯಪೀಠ ಈ ತೀರ್ಪು ನೀಡಿದೆ. ದಂಡ ವಿಧಿಸಿದ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವವರೆಗೆ ಆದೇಶಕ್ಕೆ ತಡೆ ನೀಡಬೇಕೆಂದು ಸಿದ್ದರಾಮಯ್ಯ ಪರ ವಕೀಲರು ಮಾಡಿದ ಮನವಿಯನ್ನೂ ಪೀಠ ತಿರಸ್ಕರಿಸಿದೆ. ಅಷ್ಟೇ ಅಲ್ಲ, ಮಾರ್ಚ್ 6ರಂದು ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ಗೆ ಹಾಜರಾಗಲು ಸೂಚನೆ ನೀಡಿದೆ.


ಜನಪ್ರತಿನಿಧಿಗಳ ಕೋರ್ಟ್ ಮುಂದೆ ಮಾರ್ಚ್ 7ರಂದು ರಾಮಲಿಂಗಾರೆಡ್ಡಿ, 11ರಂದು ರಣದೀಪ್ ಸಿಂಗ್ ಸುರ್ಜೇವಾಲ, 15ಕ್ಕೆ ಎಂ.ಬಿ.ಪಾಟೀಲ್ ಹಾಜರಾಗಬೇಕೆಂದು ನ್ಯಾಯಪೀಠ ಆದೇಶಿಸಿದೆ. ಒಂದೇ ದಿನ ಎಲ್ಲರಿಗೂ ಅವಕಾಶ ಮಾಡಿಕೊಟ್ಟರೆ ನ್ಯಾಯಾಲಯದ ಸಭಾಂಗಣದಲ್ಲಿ ಗದ್ದಲ ಉಂಟಾಗುತ್ತದೆ ಎಂದು ಬೇರೆ ಬೇರೆ ದಿನಗಳನ್ನು ನಿಗದಿ ಮಾಡಲಾಗಿದೆ ಎಂದಿದೆ.

ಪ್ರತಿಭಟನಾನಿರತರ ವಿರುದ್ಧ ದೂರು ದಾಖಲಿಸಿದ ಪೊಲೀಸ್ ಅಧಿಕಾರಿಯನ್ನು ಪ್ರತಿವಾದಿ ಆಗಿಸಿದ ಕಾರಣಕ್ಕೆ ಮುಖ್ಯಮಂತ್ರಿ ಸೇರಿ ನಾಲ್ವರಿಗೂ ತಲಾ 10,000 ರೂ. ದಂಡ ವಿಧಿಸಿದೆ. ದಂಡದ ಹಣವನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ಜಮೆ ಮಾಡಿ ಎಂದು ತಿಳಿಸಿದೆ.

ಜನಪ್ರತಿನಿಧಿಗಳಿಗೆ ಕಿವಿಮಾತು ಹೇಳಿರುವ ಪೀಠ, ಸಾರ್ವಜನಿಕ ಜೀವನದಲ್ಲಿ ಇರುವವರೇ ಕಾನೂನನ್ನು ಪಾಲಿಸದಿದ್ದರೆ, ಪ್ರಜೆಗಳು ಪಾಲಿಸುತ್ತಾರೆಯೇ ಎಂದು ಪ್ರಶ್ನಿಸಿದೆ. ರಸ್ತೆಗಳಲ್ಲಿ ಪ್ರತಿಭಟನೆ ನಡೆಸಿದರೆ ಜನರಿಗೆ ತೊಂದರೆ, ಜನಪ್ರತಿನಿಧಿಯಾದ ಕಾರಣಕ್ಕೆ ರಸ್ತೆ ಅಡ್ಡಗಟ್ಟುವುದು ಸರಿಯಲ್ಲ, ಮೊದಲು ನೀವು ಕಾನೂನು ಪಾಲಿಸಿ ಎಂದು ಪೀಠ ಸೂಚಿಸಿದೆ.

ಕ್ಷುಲ್ಲಕ ವಿಚಾರಕ್ಕೆ ಯುವಕನ ಕೊಲೆ

ಮಡಿಕೇರಿ, ಫೆ.6– ದ್ವಿಚಕ್ರ ವಾಹನದ ರಿಪೇರಿಗೆ ಬಂದಿದ್ದ ಯುವಕ ಮತ್ತು ಬೈಕ್ ಶೋರೂಂ ಮಾಲೀಕನ ನಡುವೆ ಕ್ಷುಲ್ಲಕ ವಿಚಾರಕ್ಕೆ ನಡೆದ ಜಗಳ ಯುವಕನ ಕೊಲೆಯಲ್ಲಿ ಅಂತ್ಯವಾದ ಘಟನೆ ಕುಶಾಲನಗರದಲ್ಲಿ ಮಂಗಳವಾರ ನಡೆದಿದೆ.



ಸಾಜೀದ್

ಮಡಿಕೇರಿಯ ಗಣಪತಿ ಬೀದಿ ನಿವಾಸಿ ಸಾಜೀದ್ (23) ಮೃತಪಟ್ಟ ಯುವಕನಾಗಿದ್ದು, ಕೊಲೆ ಆರೋಪಿ ಶ್ರೀನಿಧಿ ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ. ಕುಶಾಲನಗರ–ಮೈಸೂರು ರಸ್ತೆಯ ಕೊಡಗನ ಮೋಟಾರ್ಸ್‌ಗೆ ದ್ವಿಚಕ್ರ ರಿಪೇರಿಗಾಗಿ ಸಾಜೀದ್ ಬಂದಿದ್ದ. ಈ ವೇಳೆ ಶೋರೂಂನ ಕ್ಯಾಶ್ ಕೌಂಟರ್‌ನ ಖುರ್ಚಿಯಲ್ಲಿ ಸಾಜೀದ್ ಕುಳಿತಿದ್ದ. ಇದನ್ನು ಪ್ರಶ್ನಿಸಿದ ಮಾಲೀಕ ಶ್ರೀನಿಧಿ ಮತ್ತು ಸಾಜೀದ್ ನಡುವೆ ಮಾತಿನ ಚಕಮಕಿ ನಡೆದಿದೆ. ಈ ವೇಳೆ ಶ್ರೀನಿಧಿ ಚೂಪಾದ ಆಯುಧದಿಂದ ಸಾಜೀದ್‌ಗೆ ಇರಿದಿದ್ದಾನೆ. ತೀವ್ರವಾಗಿ ಗಾಯಗೊಂಡ ಸಾಜೀದ್‌ನನ್ನು ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮೃತಪಟ್ಟಿದ್ದಾನೆ.

ಬಿಗಿ ಬಂದೋಬಸ್ತ್: ಸಾಜೀದ್ ಹಾಗೂ ಆತನ ಜೊತೆಗಾರರು ಶೋರೂಂ ಮಾಲೀಕ ಶ್ರೀನಿಧಿ ಮೇಲೆ ಹಲ್ಲೆ ನಡೆಸಿರುವುದರಿಂದ ಇರಿತಕ್ಕೆ ಕಾರಣ ಎಂದು ಹೇಳಲಾಗಿದೆ. ಜಿಲ್ಲಾ ಸಶಸ್ತ್ರ ದಳ, ಕೆಎಸ್‌ಆರ್‌ಪಿ ತುಕಡಿಗಳನ್ನು ಮಡಿಕೇರಿಯ ಇಂದಿರಾ ಗಾಂಧಿ ವೃತ್ತ, ಗಣಪತಿ ಬೀದಿ ಮತ್ತು ಮಾರುಕಟ್ಟೆ ಆವರಣದಲ್ಲಿ ನಿಯೋಜಿಸಿ, ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಗಾಂಜಾ ಬೆಳೆದ ಯುವಕನ ಬಂಧನ

ವಿರಾಜಪೇಟೆ, ಫೆ.6–ಮನೆ ಆವರಣದ ಹೂ ಚೆಟ್ಟಿಯಲ್ಲಿ ಗಾಂಜಾ ಗಿಡ ಬೆಳೆದ ಯುವಕನನ್ನು ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನಗರದ ತೆಲುಗರ ಬೀದಿಯ ನಿವಾಸಿ ಅಭಿಷೇಕ್ ಬಂಧಿತ ಆರೋಪಿ. ಈತ ಗಾಂಜಾ ಗಿಡ ಬೆಳೆದಿರುವ ಮಾಹಿತಿ ಪಡೆದ ಪೊಲೀಸರು ದಾಳಿ ನಡೆಸಿ, ಬಂಧಿಸಿ ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಠಾಣಾಧಿಕಾರಿ ಎ.ಎಸ್.ರವಿಂದ್ರ ತಿಳಿಸಿದ್ದಾರೆ.

ದಕ್ಷಿಣ ಭಾರತದ ಹಣ ಉತ್ತರಕ್ಕೆ ಹರಿಯುತ್ತಿದೆ

● ಕೇಂದ್ರ ಸರ್ಕಾರ ರಾಜ್ಯಕ್ಕೆ ನೆರವು ನೀಡುತ್ತಿಲ್ಲ ● ವಿಧಾನಪರಿಷತ್ ಸದಸ್ಯ ವಿಶ್ವನಾಥ್ ಆರೋಪ



ಮಡಿಕೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಮಾತನಾಡಿದರು. ಪ್ರಮುಖರಾದ ಕೆ.ಎಂ.ಗಣೇಶ್, ಬಿ.ಪಿ.ದೇವಪ್ಪ ಗೌಡ, ಶೌಕತ್ ಅಲಿ, ಡೆನ್ನಿ ಬರೋಸ್ ಇದ್ದರು.

ಮಡಿಕೇರಿ, ಫೆ.6– ರಾಷ್ಟ್ರದಲ್ಲೇ ಕರ್ನಾಟಕ ಹೆಚ್ಚಿನ ತೆರಿಗೆ ಪಾವತಿಸುವ ರಾಜ್ಯವಾಗಿದ್ದರೂ, ಅದಕ್ಕೆ ಪ್ರತಿಯಾಗಿ ಕೇಂದ್ರ ಸರ್ಕಾರ ನಿರೀಕ್ಷಿತ ನೆರವು ನೀಡುತ್ತಿಲ್ಲ. ಪ್ರಸ್ತುತ ದಕ್ಷಿಣ ಭಾರತದ ಹಣ ಉತ್ತರಕ್ಕೆ ಹರಿದು ಹೋಗುತ್ತಿದೆ ಎಂದು ವಿಧಾನಪರಿಷತ್ ಸದಸ್ಯ ಹೆಚ್. ವಿಶ್ವನಾಥ್ ಆರೋಪಿಸಿದರು.

ಕರ್ನಾಟಕ ಇಂದು ಕೇಂದ್ರಕ್ಕೆ ನೀಡುತ್ತಿರುವ ತೆರಿಗೆಗೆ ಪ್ರತಿಯಾಗಿ ಅಗತ್ಯ ನೆರವನ್ನು ಬಯಸುತ್ತಿದ್ದರೂ, ಕೇಂದ್ರ ಸರ್ಕಾರ ಜನಸಂಖ್ಯೆಯ ಮಾನದಂಡವನ್ನು ಮುಂದು ಮಾಡಿ ನಮಗೆ ದೊರಕಬೇಕಾದ ನೆರವನ್ನು ನೀಡದೆ ಉತ್ತರದ ರಾಜ್ಯಗಳಿಗೆ ನೀಡುತ್ತಿದೆ. ಈ ರೀತಿ ನೀಡುತ್ತಿರುವ ಹಣ ನಮ್ಮೆಲ್ಲರ ಶ್ರಮದ ಹಣ. ಕರ್ನಾಟಕಕ್ಕೆ ಕೇಂದ್ರದಿಂದ ದೊರಕಬೇಕಾದ ನ್ಯಾಯಯುತವಾದ ಹಣದ ಬಗ್ಗೆ ರಾಜ್ಯದ ಯಾವೊಬ್ಬ ಸಂಸದರು ಚಕಾರ ಎತ್ತುತ್ತಿಲ್ಲ ಎಂದು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು.

ಜನತಂತ್ರ ವ್ಯವಸ್ಥೆಗೆ ಮಾರಕ: ಲೋಕಸಭಾ ಚುನಾವಣೆಯ ದೃಷ್ಟಿಯಲ್ಲಿರಿಸಿಕೊಂಡು ಕೇಂದ್ರ ಸರ್ಕಾರ ಇಡಿ ಅಸ್ತ್ರವನ್ನು ಬಳಸಿ, ಎದುರಾಳಿಗಳನ್ನು ಬಂಧಿಸುವ ಹಾಗೂ ಕಿರುಕುಳ ನೀಡುವ ಮೂಲಕ ದ್ವೇಷ ರಾಜಕಾರಣ ಮಾಡುತ್ತಿದೆ. ಇಂತಹ ಪ್ರವೃತ್ತಿ ಜನತಂತ್ರ ವ್ಯವಸ್ಥೆಗೆ ಪೂರಕವಲ್ಲ ಮಾರಕ. ಎದುರಾಳಿಗಳನ್ನು ಶತ್ರು ಎಂದು ಪರಿಭಾವಿಸಿ ಬಿಜೆಪಿ ದ್ವೇಷ ರಾಜಕಾರಣಕ್ಕೆ ಇಳಿದಿರುವುದಲ್ಲದೆ, ಪ್ರಧಾನಿ ನರೇಂದ್ರ ಮೋದಿ, ಆಧುನಿಕ ಭಾರತದ ನಿರ್ಮಾತೃ ನೆಹರು ಅವರ ಟೀಕೆಗೆ ಇಳಿದಿರುವುದು ಒಳ್ಳೆಯ ಬೆಳವಣಿಗೆಯಲ್ಲ. ಸ್ವಾತಂತ್ರ್ಯ ದೊರೆತ ಹಂತದಲ್ಲಿ 33 ಕೋಟಿ ಜನಸಂಖ್ಯೆ ಇದ್ದ ಈ ರಾಷ್ಟ್ರದಲ್ಲಿ ಅಗತ್ಯ ಆಹಾರ ವ್ಯವಸ್ಥೆ ಇರಲಿಲ್ಲ. ಇಂತಹ ಸಂಕಷ್ಟದ ಅವಧಿಯಲ್ಲಿ ನೆಹರು ಪಂಚವಾರ್ಷಿಕ ಯೋಜನೆಗಳನ್ನು ಜಾರಿ ಮಾಡಿ, ರಾಷ್ಟ್ರದುದ್ದಕ್ಕೂ ಅಣೆಕಟ್ಟುಗಳನ್ನು ನಿರ್ಮಿಸಿ, ಕೃಷಿ ಚಟುವಟಿಕೆಗಳಿಗೆ ಒತ್ತು ನೀಡಿದ್ದರು ಎಂದು ತಿಳಿಸಿದರು.

ಪ್ರಸ್ತುತ ಈ ದೇಶದಲ್ಲಿರುವ 140 ಕೋಟಿ ಜನರಿಗೆ ಅನ್ನ ದೊರಕುತ್ತಿರುವುದಲ್ಲದೆ, ನಾವೇ ಇತರರಿಗೆ ನೀಡುವ ಹಂತವನ್ನು ಕಂಡಿದ್ದೇವೆ. ಈ ವಿಚಾರಗಳನ್ನು ಅರಿತು ಪ್ರಧಾನಿ ಮೋದಿ ಮಾತನಾಡಬೇಕು. ದೇವರಾಜ ಅರಸು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 21 ಲಕ್ಷ ಎಕರೆಯನ್ನು ಉಳುವವನೆ ಭೂಮಿಯ ಒಡೆಯ ಎನ್ನುವ ಕಾನೂನಿನ ಮೂಲಕ ಬಡವರಿಗೆ ನೀಡಿದ್ದರು. ಇಷ್ಟೆಲ್ಲ ಅಭಿವೃದ್ಧಿ ಕಾರ್ಯಗಳು ನಡೆದಿರುವಾಗ ಬಿಜೆಪಿ ಕಾಂಗ್ರೆಸ್ ಏನೂ ಮಾಡಿಲ್ಲ ಎಂದು ಟೀಕಿಸುವುದು ಸರಿಯೇ? ಎಂದು ಪ್ರಶ್ನಿಸಿದರು.

ಶ್ರೀರಾಮ ಎಲೆಕ್ಷನ್ ಕಮಿಷನ್ ಅಲ್ಲ: ಶ್ರೀರಾಮ ಈ ದೇಶದ ಅಸ್ಮಿತೆ. ಭಾರತೀಯರೆಲ್ಲರ ಅಂತರಂಗದಲ್ಲಿ ಶ್ರೀರಾಮಚಂದ್ರ ಶಾಶ್ವತವಾದ ಸ್ಥಾನ ಪಡೆದುಕೊಂಡಿದ್ದಾನೆ. ಇಂತಹ ಶ್ರೀರಾಮನನ್ನು ಕೇಂದ್ರದ ಬಿಜೆಪಿ ಸರ್ಕಾರ 'ಎಲೆಕ್ಷನ್ ಕಮಿಷನ್' ಮಾಡಲು ಹೊರಟಿದೆ. ಶ್ರೀರಾಮನನ್ನು 'ಎಲೆಕ್ಷನ್ ಕ್ಯಾಂಪೇನ್' ಮಾಡದಿರಿ ಎಂದು ಬಿಜೆಪಿಯನ್ನು ಕುಟುಕಿದರು. ಸುದ್ದಿಗೋಷ್ಠಿಯಲ್ಲಿ ಪ್ರಮುಖರಾದ ಕೆ.ಎಂ.ಗಣೇಶ್, ಬಿ.ಪಿ.ದೇವಪ್ಪ ಗೌಡ, ಶೌಕತ್ ಅಲಿ, ಡೆನ್ನಿ ಬರೋಸ್ ಉಪಸ್ಥಿತರಿದ್ದರು.

ನಾನು ಯಾವುದೇ ಪಕ್ಷದವನಲ್ಲ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ನಾನು ಆಕಾಂಕ್ಷಿ ಆಗಿದ್ದೇನೆ. ಆದರೆ, ಕಾಂಗ್ರೆಸ್‌ನಿಂದ ಟಿಕೆಟ್ ಕೇಳಿಲ್ಲ. ತನ್ನ ರಾಜಕೀಯ ಜೀವನದಲ್ಲಿ ಒಳ–ಹೊರಗು, ಎಲ್ಲಾ ತರಹದ ಇಬ್ಬಂದಿತನವನ್ನು ನೋಡಿದ್ದೇನೆ ಎಂದು ವಿಶ್ವನಾಥ್ ಹೇಳಿದರು.

ನಾನು ವಿವಿಧ ಪಕ್ಷಗಳಲ್ಲಿ ಕಾಣಿಸಿಕೊಂಡಿರಬಹುದು. ಆದರೆ, ನನ್ನ ಮೂಲ ಆಶಯ ಶ್ರೀಸಾಮಾನ್ಯರಿಗೆ ಒಳಿತು ಮಾಡುವುದಷ್ಟೇ. ಎಲ್ಲಾ ರಾಜಕೀಯ ಪ್ರಮುಖರು ವಿವಿಧ ಪಕ್ಷಗಳಿಂದ ಬಂದವರೇ. ಬಿಜೆಪಿ ತೊರೆದು ಕೆಜೆಪಿ ಕಟ್ಟಿದ ಯಡಿಯೂರಪ್ಪ ಮತ್ತು ಶೋಭಾ ಕರಂದ್ಲಾಜೆ ಅವರು ಬಿಜೆಪಿಯನ್ನು ತೆಗಳಿದಷ್ಟು ಮತ್ಯಾರು ತೆಗಳಿಲ್ಲ. ಆ ಸಂದರ್ಭದಲ್ಲಿ ಯಡಿಯೂರಪ್ಪ ಟಿಪ್ಪು ಖಡ್ಗ ಹಿಡಿದು ಪೋಸ್ ನೀಡಿರಲಿಲ್ಲವೆ? ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಅವರನ್ನು ಕಾಂಗ್ರೆಸ್‌ಗೆ ಕರೆತಂದದ್ದು ಮತ್ತು ಮುಖ್ಯಮಂತ್ರಿಯಾಗಿ ಮಾಡಿದವನು ನಾನೇ. ರಾಜಕಾರಣ ಎನ್ನುವುದು ನಿಂತ ನೀರೇನು ಅಲ್ಲ, ಅದು ಹರಿಯುವ ನೀರು. ಲೋಕಸಭಾ ಚುನಾವಣೆ ಎಂದರೆ ಅದರಲ್ಲಿ ಹೀಗೆ ಆಗಬೇಕೆಂದು ಏನು ಇಲ್ಲ. ಏನು ಬೇಕಾದರು ಆಗಬಹುದು. ಯಾರು ಗೆಲ್ಲುತ್ತಾರೆ ಅವರನ್ನು ಹಿಡಿದುಕೊಂಡು ಬನ್ನಿ ಎನ್ನುವ ಕಾಲಘಟ್ಟ ಇದೆಂದು ಹಾಸ್ಯದ ಧಾಟಿಯಲ್ಲಿ ಹೇಳಿದರು.

ಪ್ರಬಂಧ ಸ್ಪರ್ಧೆ ವಿಜೇತರಿಗೆ ಸಿಎಂ ಸಿದ್ದರಾಮಯ್ಯ ಬಹುಮಾನ ವಿತರಣೆ



ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಸಿಎಂ ಸಿದ್ದರಾಮಯ್ಯ ಬಹುಮಾನ ವಿತರಿಸಿದರು.

ಮಡಿಕೇರಿ, ಫೆ.6– ಗಾಂಧಿ ಜಯಂತಿ ಅಂಗವಾಗಿ ಮಹಾತ್ಮ ಗಾಂಧೀಜಿಯವರ ಬದುಕು, ಸ್ವಾತಂತ್ರ್ಯ, ಸರಳತೆ, ಅಹಿಂಸಾ ಮಾರ್ಗ, ಸಹಬಾಳ್ವೆ, ಅಸ್ಪೃಶ್ಯತೆ ನಿವಾರಣೆಗೆ ನಡೆಸಿದ ಪ್ರಯೋಗಗಳು ಸೇರಿದಂತೆ ವಿವಿಧ ವಿಷಯ ಕುರಿತು ಆಯೋಜಿಸಿದ್ದ ರಾಜ್ಯ ಮಟ್ಟದ ಬಾಪೂಜಿ ಪ್ರಬಂಧ ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಹುಮಾನ ವಿತರಿಸಿದರು.

ಬೆಂಗಳೂರಿನ ಮುಖ್ಯಮಂತ್ರಿಗಳ ನಿವಾಸ ಕಾವೇರಿಯಲ್ಲಿ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಬಂಧ ಸ್ಪರ್ಧೆ ವಿಜೇತ 9 ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಪ್ರಶಸ್ತಿ ಪತ್ರ, ಸ್ಮರಣಿಕೆ ಹಾಗೂ ಗಾಂಧೀಜಿ ಅವರ ಜೀವ ಸಂದೇಶ ಕುರಿತ ಪುಸ್ತಕಗಳನ್ನು ನೀಡಿ ಶುಭಕೋರಿದರು.

ನಂತರ ಸಿಎಂ ಸಿದ್ದರಾಮಯ್ಯ ಮಾತನಾಡಿ, ವಿದ್ಯಾರ್ಥಿ, ಯುವಜನರಲ್ಲಿ ಮಹಾತ್ಮ ಗಾಂಧೀಜಿಯವರ ಜೀವನ–ಸಂದೇಶ, ಅವರ ಹಾದಿ ಹಾಗೂ ಅವರ ಆದರ್ಶಗಳ ಕುರಿತು ಪ್ರೌಢಶಾಲೆ, ಪದವಿಪೂರ್ವ, ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಒಟ್ಟು 3 ಪ್ರತ್ಯೇಕ ವಿಭಾಗಗಳಲ್ಲಿ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 12 ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿರುವುದು ಸಂತಸದ ಸಂಗತಿ ಎಂದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಹೇಮಂತ್ ನಿಂಬಾಳಕರ್ ಮಾತನಾಡಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಡಾ.ಕೆ.ವಿ.ತ್ರಿಲೋಕ ಚಂದ್ರ, ಆಯುಕ್ತ ಹೇಮಂತ್ ಎಂ.ನಿಂಬಾಳ್ಕರ್, ಜಂಟಿ ನಿರ್ದೇಶಕ ಮಂಜುನಾಥ ಡೊಳ್ಳಿನ್, ಜಿ.ಬಿ.ಸಿದ್ದೇಶ್ವರಪ್ಪ, ಉಪನಿರ್ದೇಶಕ ಬಿ.ಕೆ.ರಾಮಲಿಂಗಪ್ಪ ಮತ್ತಿತರರು ಇದ್ದರು.

ಇದೇ ವೇಳೆ ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳ ಪ್ರಬಂಧಗಳನ್ನು ರಾಜ್ಯ ಮಟ್ಟದ ಸ್ಪರ್ಧೆಗೆ ಪರಿಗಣಿಸಲಾಗಿತ್ತು. ಮೂರು ವಿಭಾಗಗಳಲ್ಲಿ ಪ್ರತ್ಯೇಕವಾಗಿ ಪ್ರಥಮ 31 ಸಾವಿರ ರೂ., ದ್ವಿತೀಯ–21 ಸಾವಿರ ರೂ. ಹಾಗೂ ತೃತೀಯ–11 ಸಾವಿರ ರೂ. ನಗದು ನೀಡಲಾಯಿತು.

ವಿಜೇತರು: ಪ್ರೌಢಶಾಲೆ ವಿಭಾಗದಲ್ಲಿ ವಿರಾಜಪೇಟೆಯ ಸಂತ ಅನ್ನಮ್ಮ ಪ್ರೌಢಶಾಲೆಯ ವಿದ್ಯಾರ್ಥಿ ಅನಿರುದ್ಧ ಮನೋಜ್ ಪ್ರಥಮ ಸ್ಥಾನ, ಕನಕಪುರ ತಾಲೂಕಿನ ತುಂಗಣಿ ಸರ್ಕಾರಿ ಪ್ರೌಢಶಾಲೆಯ ಎನ್.ಹರ್ಷಿತಾ ದ್ವಿತೀಯ ಹಾಗೂ ಹಾವೇರಿ ಜಿಲ್ಲೆಯ ಹಾನಗಲ್ ತಾಲೂಕಿನ ತಿಳವಳ್ಳಿಯ ಗೈಡ್ ಆಂಗ್ಲ ಮಾಧ್ಯಮ ಶಾಲೆಯ ತೋಹಿದ್ ಅಹ್ಮದ್ ಲಾಡಜಿ ತೃತೀಯ ಸ್ಥಾನ ಗಳಿಸಿದ್ದಾರೆ.

ಪದವಿಪೂರ್ವ ವಿಭಾಗದಲ್ಲಿ ಮಡಿಕೇರಿಯ ಸಂತ ಮೈಕಲರ ಕಾಲೇಜಿನ ಕೆ.ಎಸ್.ಹೃತ್ಪೂರ್ವಕ್ ಪ್ರಥಮ, ಮಂಡ್ಯದ ಸರ್ಕಾರಿ ಪಪೂ ಕಾಲೇಜಿನ ಎಂ.ಎಸ್.ಉದಯ ಕುಮಾರ್ ದ್ವಿತೀಯ ಹಾಗೂ ದೊಡ್ಡಬಳ್ಳಾಪುರದ ಶ್ರೀ ಕೊಂಗಾಡಿಯಪ್ಪ ಪಿಯು ಕಾಲೇಜಿನ ಎಂ.ವೀನಾ ತೃತೀಯ ಸ್ಥಾನ ಪಡೆದಿದ್ದಾರೆ. ಪದವಿ, ಸ್ನಾತಕೋತ್ತರ ವಿಭಾಗದಲ್ಲಿ ಶಿವಮೊಗ್ಗದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಡಿ.ದರ್ಶಿನಿ ಪ್ರಥಮ, ಬಾಗಲಕೋಟೆಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕಾವ್ಯಾ ಚಿಪ್ಪಲಕಟ್ಟಿ ದ್ವಿತೀಯ ಮತ್ತು ಮೈಸೂರಿನ ಜೆಎಸ್‌ಎಸ್ ಕಲಾ ಕಾಲೇಜಿನ ಆರ್.ಕುಸುಮಾಬಾಯಿ ತೃತೀಯ ಸ್ಥಾನಗಳಿಸಿದ್ದಾರೆ.

ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರ ಪಾತ್ರ ಮುಖ್ಯ



ಕಕ್ಕಬ್ಬೆ–ಕುಂಜಿಲ ಗ್ರಾಮದ ಕೆ.ಪಿ.ಬಾಣೆ ಸರ್ಕಾರಿ ಶಾಲೆಯ ಡಿಜಿಟಲ್ ಗ್ರಂಥಾಲಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಶಾಸಕ ಪೊನ್ನಣ್ಣ ಅವರನ್ನು ಸನ್ಮಾನಿಸಲಾಯಿತು. ಸಫಿಯ, ಮುಖ್ಯಶಿಕ್ಷಕಿ ಪಿ.ಕೆ.ಗಂಗಮ್ಮ, ಶಿಲ್ಪ ಲೋಕೇಶ್, ಕಲಿಯಂಡ ಬೀನಾ ಮತ್ತಿತರರಿದ್ದರು.

ಮಡಿಕೇರಿ, ಫೆ.6–ಜಗತ್ತಿನ ಬದಲಾವಣೆಗೆ ಅನುಗುಣವಾಗಿ ಮಕ್ಕಳ ಭವಿಷ್ಯ ರೂಪಿಸುವಲ್ಲಿ ಪೋಷಕರು ಮತ್ತು ಶಿಕ್ಷಕರ ಪಾತ್ರ ಬಹಳ ಮುಖ್ಯ ಎಂದು ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಕಕ್ಕಬ್ಬೆ–ಕುಂಜಿಲ ಗ್ರಾಮದ ಕೆ.ಪಿ.ಬಾಣೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಡಿಜಿಟಲ್ ಗ್ರಂಥಾಲಯ ಉದ್ಘಾಟಿಸಿ ಮಾತನಾಡಿದ ಅವರು, ಈಗಿನ ಆಧುನಿಕ ಯುಗದಲ್ಲಿ ಡಿಜಿಟಲೀಕರಣ ಅತ್ಯವಶ್ಯಕ. ನಗರ ಪ್ರದೇಶಗಳಲ್ಲಿ ಡಿಜಿಟಲೀಕರಣಕ್ಕೆ ಯಾವುದೇ ಸಮಸ್ಯೆ ಇರುವುದಿಲ್ಲ. ಗ್ರಾಮೀಣ ಪ್ರದೇಶದಲ್ಲಿ ಇದಕ್ಕೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಡಿಜಿಟಲ್ ಜಗತ್ತಿನಲ್ಲಿ ಸಾಧಕ–ಬಾಧಕಗಳು ಕೂಡ ಇದೆ. ಅದರಲ್ಲಿ ಸಾಧಕಗಳನ್ನು ಆಯ್ಕೆ ಮಾಡಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಬೇಕಾಗಿದೆ ಎಂದರು.

ಸಾಮಾಜಿಕ ಜಾಲತಾಣಗಳಿಂದ ಹರಡುವ ತಪ್ಪು ಮಾಹಿತಿಗಳನ್ನು ದೂರ ಇಟ್ಟು, ಒಳ್ಳೆಯದನ್ನು ಆಯ್ಕೆ ಮಾಡಿ ಉಪಯೋಗ ಪಡೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳಿಗೆ ಅವರ ಮುಂದಿನ ಭವಿಷ್ಯ ಉಜ್ವಲವಾಗಲು ಎಲ್ಲಾ ಅವಕಾಶ ಕಲ್ಪಿಸಬೇಕಾಗಿದೆ. ಅದರಂತೆ ಇಲ್ಲಿನ ಶಾಲೆಯ ಮಕ್ಕಳ ಡಿಜಿಟಲೀಕರಣಕ್ಕೆ ಒತ್ತು ನೀಡಿರುವುದು ಶ್ಲಾಘನೀಯ ಎಂದರು.

ಇದೇ ವೇಳೆ ಶಾಲೆಯ ಆಡಳಿತ ಮಂಡಳಿ ಮತ್ತು ಶಿಕ್ಷಕರು ಶಾಸಕ ಪೊನ್ನಣ್ಣ ಅವರನ್ನು ಸನ್ಮಾನಿಸಿದರು. ಕಕ್ಕಬ್ಬೆ ಗ್ರಾಪಂ ಅಧ್ಯಕ್ಷೆ ಶಿಲ್ಪ ಲೋಕೇಶ್, ಉಪಾಧ್ಯಕ್ಷೆ ಕಲಿಯಂಡ ಬೀನಾ, ಸದಸ್ಯರಾದ ಬಶೀರ್ ಪೊಯಕ್ಕರೆ, ಕುಂಡಂಡ ರಜಾಕ್, ಶಾಲಾ ಆಡಳಿತ ಮಂಡಳಿ ಅಧ್ಯಕ್ಷೆ ಸಫಿಯ, ಮುಖ್ಯಶಿಕ್ಷಕಿ ಪಿ.ಕೆ.ಗಂಗಮ್ಮ, ಗ್ರಾಪಂ ಮಾಜಿ ಅಧ್ಯಕ್ಷ ಕಲಿಯಂಡ ಸಂಪನ್ ಅಯ್ಯಪ್ಪ, ಮಾಜಿ ಸದಸ್ಯ ಬಚಾಮಂಡ ಲವ ಚಿಣ್ಣಪ್ಪ, ರಾಜ್ಯ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಹಾಜಿ ಕುಂಜಿಲ, ಕುಡಿಯರ ಮುತ್ತಪ್ಪ, ಶಾಲೆಯ ಆಡಳಿತ ಮಂಡಳಿ, ಹಳೇ ವಿದ್ಯಾರ್ಥಿ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ನಗರದಲ್ಲಿ ಸಂವಿಧಾನ ಜಾಗೃತಿ ಬೈಕ್ ರ್‍ಯಾಲಿ



ಚಾಮರಾಜನಗರದ ಪ್ರವಾಸಿಮಂದಿರದಲ್ಲಿ ಸಂವಿಧಾನ ಜಾಗೃತಿ ಬೈಕ್ ರ್‍ಯಾಲಿಗೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಹಾಗೂ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉದೇಶ್ ಚಾಲನೆ ನೀಡಿದರು.

ಚಾಮರಾಜನಗರ, ಫೆ.6–ಸಂವಿಧಾನ ಜಾಗೃತಿಗಾಗಿ ನಗರದಲ್ಲಿ ಹಮ್ಮಿಕೊಂಡಿದ್ದ ಬೈಕ್ ರ್‍ಯಾಲಿಗೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಹಾಗೂ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉದೇಶ್ ಚಾಲನೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪೊಲೀಸ್ ಇಲಾಖೆ, ನಗರಸಭೆ, ಸಮಾಜ ಕಲ್ಯಾಣ ಇಲಾಖೆ ಸೇರಿದಂತೆ ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ಸಂವಿಧಾನ ಅರಿವು ಮೂಡಿಸಲು ಆಯೋಜಿಸಿದ್ದ ಬೈಕ್ ರ್‍ಯಾಲಿಗೆ ನಗರದ ಪ್ರವಾಸಿ ಮಂದಿರದಲ್ಲಿ ಹಸಿರು ನಿಶಾನೆ ತೋರಿದರು.

ಪ್ರವಾಸಿ ಮಂದಿರದಿಂದ ಆರಂಭವಾದ ಬೈಕ್ ರ್‍ಯಾಲಿಯಲ್ಲಿ ಸಂವಿಧಾನದ ಮಹತ್ತರ ಸಂದೇಶಗಳನ್ನು ಸಾರುವ ಫಲಕಗಳನ್ನು ಪ್ರದರ್ಶಿಸಲಾಯಿತು. ಬೈಕ್ ರ್‍ಯಾಲಿ ಪ್ರಮುಖ ರಸ್ತೆಗಳಾದ ದೊಡ್ಡಂಗಡಿ ಬೀದಿ, ಚಿಕ್ಕಂಗಡಿ ಬೀದಿ, ಸಂತೇಮರಹಳ್ಳಿ ವೃತ್ತ, ಭುವನೇಶ್ವರಿ ವೃತ್ತ, ಜೋಡಿರಸ್ತೆ ಮೂಲಕ ಸಾಗಿ ಜಿಲ್ಲಾಡಳಿತ ಭವನದಲ್ಲಿ ಮುಕ್ತಾಯಗೊಂಡಿತು.

ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಸಂವಿಧಾನದ ಪೀಠಿಕೆ ಬೋಧಿಸಿದರು. ಬಳಿಕ ಮಾತನಾಡಿದ ಅವರು, ಜನವರಿ 26ರಿಂದ ಸಂವಿಧಾನದ ಬಗ್ಗೆ ನಾಗರಿಕರಲ್ಲಿ ಜಾಗೃತಿ ಮೂಡಿಸಲು ಜಿಲ್ಲಾದ್ಯಂತ ಅರಿವು, ಜಾಥಾ, ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅದರ ಭಾಗವಾಗಿ ಇಂದು ಬೈಕ್ ರ್‍ಯಾಲಿ ಆಯೋಜಿಸಲಾಗಿದೆ ಎಂದರು.

ನಗರಸಭಾ ಸದಸ್ಯರಾದ ಚಿನ್ನಮ್ಮ, ನೀಲಮ್ಮ, ಖಲೀಲುಲ್ಲಾ, ತೌಸೀಯಾ ಬಾನು, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ್, ಪೌರಾಯುಕ್ತ ಎಸ್.ವಿ.ರಾಮದಾಸ್, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ ಇತರರು ಇದ್ದರು.

ಜಿಲ್ಲೆಯ 890 ವಿಶೇಷ ಚೇತನರಿಗೆ ಸಲಕರಣೆ ವಿತರಣೆ

ಕಾರ್ಯಕ್ರಮಕ್ಕೆ ಸಿದ್ಧತೆ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಎಡಿಸಿ ಗೀತಾ ಹುಡೇದ ಸೂಚನೆ



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸಾಧನ ಸಲಕರಣೆ ವಿತರಣೆ ಪೂರ್ವಭಾವಿ ಸಭೆಯಲ್ಲಿ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿದರು.

ಚಾಮರಾಜನಗರ, ಫೆ.6– ಜಿಲ್ಲೆಯ 890 ವಿಶೇಷ ಚೇತನ ಫಲಾನುಭವಿಗಳಿಗೆ ಸಾಧನ ಸಲಕರಣೆಗಳನ್ನು ಫೆ.15ರಂದು ವಿತರಿಸಲಿದ್ದು, ಕಾರ್ಯಕ್ರಮಕ್ಕೆ ಪೂರ್ವ ಸಿದ್ಧತೆ ಕೈಗೊಳ್ಳುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ಸಾಧನ ಸಲಕರಣೆ ವಿತರಣೆ ಸಂಬಂಧ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಈಗಾಗಲೇ ಶಿಬಿರ ಆಯೋಜಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಿ ಸಾಧನ ಸಲಕರಣೆಗಳನ್ನು ಸಿದ್ಧಪಡಿಸಲಾಗಿದೆ. ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಸಲಕರಣೆಗಳ ವಿತರಣೆ ಕಾರ್ಯಕ್ರಮ ನಡೆಯಲಿದೆ. ಜಿಲ್ಲೆಯ ವಿವಿಧ ಭಾಗಗಳಿಂದ ಫಲಾನುಭವಿಗಳು ಬಂದು ಸಲಕರಣೆ ಪಡೆಯಲು ಎಲ್ಲಾ ವ್ಯವಸ್ಥೆಗಳನ್ನು ಸಮರ್ಪಕವಾಗಿ ಮಾಡಬೇಕು ಎಂದು ತಿಳಿಸಿದರು.

ಜಿಲ್ಲಾ ಕೇಂದ್ರದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ಫಲಾನುಭವಿಗಳನ್ನು ಅವರ ಗ್ರಾಮಗಳಿಂದ ವಾಹನಗಳ ಮೂಲಕ ಕರೆತರಬೇಕು. ಫಲಾನುಭವಿಗಳ ಪಟ್ಟಿಯನ್ನು ಪಡೆದು ಆಶಾ ಕಾರ್ಯಕರ್ತೆಯರ ಸಹಕಾರ ಪಡೆದು ಫಲಾನುಭವಿಗಳನ್ನು ಜವಾಬ್ದಾರಿಯುತವಾಗಿ ಕರೆತರಬೇಕು. ಕಾರ್ಯಕ್ರಮ ಮುಗಿದ ಬಳಿಕ ಅದೇ ವಾಹನದಲ್ಲಿ ಕಳುಹಿಸುವ ವ್ಯವಸ್ಥೆ ಆಗಬೇಕೆಂದು ಸೂಚಿಸಿದರು.

ಕಾರ್ಯಕ್ರಮದಲ್ಲಿ ವೈದ್ಯರ ತಂಡ ಹಾಗೂ ಇನ್ನಿತರ ಸಿಬ್ಬಂದಿ ನಿಯೋಜಿಸಬೇಕಿದೆ ವಿಶೇಷಚೇತನರ ಇಲಾಖೆ ವತಿಯಿಂದ ನಿಯೋಜನೆಯಾಗಿರುವ ವಿವಿಧೋದ್ದೇಶ ಕಾರ್ಯಕರ್ತರು ಆಯಾ ಭಾಗದಲ್ಲಿ ಈಗಾಗಲೇ ಸಲಕರಣೆ ಪಡೆಯಲು ಆಯ್ಕೆಗೊಂಡಿರುವ ಫಲಾನುಭವಿಗಳಿಗೆ ಮಾಹಿತಿ ನೀಡಿ ಕಾರ್ಯಕ್ರಮದ ಪ್ರಯೋಜನೆ ತಲುಪಲು ಅಗತ್ಯ ಕ್ರಮವಹಿಸಬೇಕು ಎಂದರು.

ನಗರಸಭೆ, ಇನ್ನಿತರ ಇಲಾಖೆಗಳ ಅಧಿಕಾರಿಗಳು ಸಹ ಕಾರ್ಯಕ್ರಮದ ಆಯೋಜನೆಗೆ ನಿಗದಿಪಡಿಸಿರುವ ಜವಾಬ್ದಾರಿಗಳನ್ನು ಚಾಚು ತಪ್ಪದೇ ನಿರ್ವಹಿಸಬೇಕು. ವಿಶೇಷಚೇತನರ ನೆರವಿಗೆ ಜಿಲ್ಲೆಯಲ್ಲಿ ಏರ್ಪಡಿಸಿರುವ ಈ ಮಹತ್ವದ ಕಾರ್ಯಕ್ರಮ ಯಶಸ್ವಿಗೊಳಿಸಬೇಕೆಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಮಂಜುನಾಥ್, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಸುರೇಶ್, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಚಂದ್ರಶೇಖರ್, ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.


ಫೆ.8, 9ರಂದು ವಿವಿಧೆಡೆ ಸಪ್ತಾಹ

ಚಾಮರಾಜನಗರ, ಫೆ.6– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಹರದನಹಳ್ಳಿ ವಿಭಾಗದಿಂದ ಫೆ.8 ಹಾಗೂ 9ರಂದು ವಿವಿಧೆಡೆ ಅರಿವು ಸಪ್ತಾಹ ಕಾರ್ಯಕ್ರಮ ಆಯೋಜಿಸಲಾಗಿದೆ.

ಫೆ.8ರಂದು ಬೆಳಗ್ಗೆ 10 ಗಂಟೆಗೆ ಹರದನಹಳ್ಳಿ, ಮಧ್ಯಾಹ್ನ 3.30 ಗಂಟೆಗೆ ಅರಕಲವಾಡಿ ಹಾಗೂ 9ರಂದು ಬೆಳಗ್ಗೆ 10 ಗಂಟೆಗೆ ಉಡಿಗಾಲ, ಮಧ್ಯಾಹ್ನ 3.30 ಗಂಟೆಗೆ ಹರವೆಯಲ್ಲಿ ಸೆಸ್ಕ್ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಧ್ಯಕ್ಷತೆಯಲ್ಲಿ ಸಪ್ತಾಹ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕುಪ್ಪುಸ್ವಾಮಿ ನಿಧನ

ಹನೂರು, ಫೆ.6– ತಾಲೂಕಿನ ಚಂಗವಾಡಿ ಗ್ರಾಮದ ಬೋವಿ ಸಮಾಜದ ಹಿರಿಯ ಮುಖಂಡ ಕುಪ್ಪುಸ್ವಾಮಿ (83) ಮಂಗಳವಾರ ನಿಧನರಾದರು.



ಮೃತರು ಬೋವಿ ಸಮಾಜದ ಜಿಲ್ಲಾಧ್ಯಕ್ಷ ಕೆ.ರಾಜು ಸೇರಿದಂತೆ ಮೂವರು ಪುತ್ರರು, ಪುತ್ರಿ, ಮೊಮ್ಮಕ್ಕಳು ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಬುಧವಾರ ಮಧ್ಯಾಹ್ನ ಮೃತರ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ: ಮಾಜಿ ಶಾಸಕರಾದ ಪರಿಮಳಾ ನಾಗಪ್ಪ, ಆರ್.ನರೇಂದ್ರ, ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಜನಧ್ವನಿ ಬಿ.ವೆಂಕಟೇಶ್, ಎಸ್.ನಿಶಾಂತ್, ಮಾನಸ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಎಸ್.ದತ್ತೇಶ್ ಕುಮಾರ್, ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಬಸವರಾಜು, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಪದಾಧಿಕಾರಿಗಳು ಸಂತಾಪ ಸೂಚಿಸಿದ್ದಾರೆ.

ಹಾಲಿನ ಪ್ರೋತ್ಸಾಹಧನ ಕಡಿತ ಖಂಡಿಸಿ ಬಿಜೆಪಿ ಪ್ರತಿಭಟನೆ



ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ನೀಡುತ್ತಿಲ್ಲ ಎಂದು ಬಿಜೆಪಿ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಚಾಮರಾಜನಗರ, ಫೆ.6–ರಾಜ್ಯ ಸರ್ಕಾರ ಹಾಲು ಉತ್ಪಾದಕರಿಗೆ ಪ್ರೋತ್ಸಾಹಧನ ನೀಡದಿರುವುದನ್ನು ಖಂಡಿಸಿ ಬಿಜೆಪಿ ಕಾರ್ಯಕರ್ತರು ಮಂಗಳವಾರ ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ನೂತನ ಬಿಜೆಪಿ ಕಚೇರಿಯಲ್ಲಿ ಮಾಜಿ ಶಾಸಕ ಎಸ್.ಬಾಲರಾಜು ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾಕಾರರು, ಅಲ್ಲಿಂದ ಮೆರವಣಿಗೆ ಹೊರಟು ಜೋಡಿರಸ್ತೆ ಮೂಲಕ ತಹಸೀಲ್ದಾರ್ ಕಚೇರಿಗೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಮಾಜಿ ಶಾಸಕ ಎಸ್.ಬಾಲರಾಜು ಮಾತನಾಡಿ, ಕಾಂಗ್ರೆಸ್ ಪ್ರಣಾಳಿಕೆಯಲ್ಲಿ ಹಾಲು ಉತ್ಪಾದಕರಿಗೆ 7 ರೂ. ಪ್ರೋತ್ಸಾಹಧನ ನೀಡುವುದಾಗಿ ಘೋಷಣೆ ಮಾಡಿತ್ತು. ಆದರೆ, ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ರೈತರಿಗೆ ಯಾವುದೇ ಪ್ರೋತ್ಸಾಹಧನ ನೀಡದೆ ವಂಚನೆ ಮಾಡಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ನೀಡುತ್ತಿದ್ದ ಪ್ರತಿ ಲೀಟರ್ ಹಾಲಿಗೆ 5 ರೂ. ಅನ್ನು ನೀಡುತ್ತಿಲ್ಲ. ರಾಜ್ಯ ಸರ್ಕಾರ ಬಿಟ್ಟಿ ಗ್ಯಾರಂಟಿಗಳನ್ನು ನೀಡಿ, ರೈತರನ್ನು ಶೋಷಣೆ ಮಾಡುತ್ತಿದೆ ಎಂದು ದೂರಿದರು.

ಪ್ರತಿಭಟನೆಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಮಾಜಿ ಅಧ್ಯಕ್ಷ ಆರ್.ಸುಂದರ್, ನಗರಸಭಾ ಸದಸ್ಯರಾದ ಶಿವರಾಜ್, ಚಂದ್ರಶೇಖರ, ಯುವ ಮೋರ್ಚಾ ಉಪಾಧ್ಯಕ್ಷ ಶಿವು ವಿರಾಟ್, ಪ್ರಧಾನ ಕಾರ್ಯದರ್ಶಿ ಸೂರ್ಯಬಾಲರಾಜ್, ಕೂಸಣ್ಣ, ಕಾಡಹಳ್ಳಿ ಮಹೇಶ್, ಅರಕಲವಾಡಿ ಮಹೇಶ್, ರಾಜು, ಮಹದೇವಸ್ವಾಮಿ, ನಟರಾಜು, ನಲ್ಲೂರು ಪರಮೇಶ್, ವೇಣುಗೋಪಾಲ್, ಚಂದ್ರು, ಬಾನುಪ್ರಕಾಶ್, ಶಿವರುದ್ರ, ಮಹೇಂದ್ರ, ಉತ್ತುವಳ್ಳಿ ಮಹೇಶ್, ಚಂದ್ರಶೇಖರ್, ಮಹದೇವಪ್ಪ, ಆನಂದ್ ಮಾದಪ್ಪ, ಮಹದೇವಶೆಟ್ಟಿ, ಮಹೇಶ್ ಪಟೇಲ್, ಮಹೇಶ್ ಇತರರು ಭಾಗವಹಿಸಿದ್ದರು.

ಉಮ್ಮತ್ತೂರಿನ ಉರುಕಾತೇಶ್ವರಿ ದೇವಸ್ಥಾನ ಬಂದ್: ಹೊರಗೆ ಪೂಜೆ ಸಲ್ಲಿಸಿದ ಭಕ್ತರು



ಉಮ್ಮತ್ತೂರಿನ ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನದ ಬಾಗಿಲು ತೆರೆಯದ ಕಾರಣ ಮಂಗಳವಾರ ಭಕ್ತರು ಹೊರಗೆಯೇ ಪೂಜೆ ಸಲ್ಲಿಸಿದರು.

ಚಾಮರಾಜನಗರ, ಫೆ.6– ತಾಲೂಕಿನ ಉಮ್ಮತ್ತೂರಿನ ಶ್ರೀ ಉರುಕಾತೇಶ್ವರಿ ಅಮ್ಮನವರ ದೇವಸ್ಥಾನದ ಬಾಗಿಲು ತೆರೆಯದ ಕಾರಣ ತಿಂಗಳ ಮೊದಲ ಮಂಗಳವಾರ ಭಕ್ತರು ದೇವಿಯ ದರ್ಶನವಿಲ್ಲದೆ, ಹೊರಗೆಯೇ ಪೂಜೆ ಸಲ್ಲಿಸಬೇಕಾಯಿತು.

ಉರುಕಾತೇಶ್ವರಿ ಅಮ್ಮನವರ ದೇವಸ್ಥಾನದ ಬೀಗದ ಕೀಯನ್ನು ಟ್ರಸ್ಟ್‌ಗೆ ನೀಡುವಂತೆ ಹೈಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಮುಜರಾಯಿ ಇಲಾಖೆಯಿಂದ ದೇವಸ್ಥಾನದ ಬಾಗಿಲು ತೆಗೆಯದ ಕಾರಣ ಭಕ್ತರು ಹೊರಗೆಯೇ ಪೂಜೆ ಸಲ್ಲಿಸಿದರು. ಭಿನ್ನಾಭಿಪ್ರಾಯ ಉಂಟಾಗಿ ದೇವಸ್ಥಾನ ಮುಜರಾಯಿ ಇಲಾಖೆ ವ್ಯಾಪ್ತಿಗೆ ನೀಡಲಾಗಿತ್ತು. ಅದರಂತೆ ಪ್ರತಿ ತಿಂಗಳ ಮೊದಲ ಮಂಗಳವಾರ ತಹಶೀಲ್ದಾರ್ ಸಮ್ಮುಖದಲ್ಲಿ ದೇವಸ್ಥಾನದ ಬಾಗಿಲು ತೆರೆದು ಪೂಜೆ ಸಲ್ಲಿಸಲಾಗುತ್ತಿತ್ತು. ಆದರೆ, ಇತ್ತೀಚೆಗೆ ಉರುಕಾತೇಶ್ವರ ಆಡಳಿತ ಮಂಡಳಿಯವರು ಇದರ ವಿರುದ್ಧ ಹೈಕೋರ್ಟ್‌ನಲ್ಲಿ ದಾವೆ ಹೂಡಿದ್ದರು. ಮತ್ತೆ ಟ್ರಸ್ಟ್ ಅಧೀನಕ್ಕೆ ದೇವಸ್ಥಾನ ನೀಡಬೇಕೆಂಬ ತೀರ್ಪು ಬಂದ ಹಿನ್ನೆಲೆಯಲ್ಲಿ ಟ್ರಸ್ಟ್‌ನವರು ದೇವಸ್ಥಾನದ ಕೀ ನೀಡಿ, ಪೂಜಾ ಕೈಂಕರ್ಯ ಸಲ್ಲಿಸಲು ಆಡಳಿತ ಮಂಡಳಿಗೆ ಅವಕಾಶ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್‌ಗೆ ಮನವಿ ಮಾಡಿದ್ದರು.

ಟ್ರಸ್ಟ್‌ನ ವಿರುದ್ಧವಾದ ಗುಂಪು ಹೈಕೋರ್ಟ್ ಆದೇಶ ಮರುಪರಿಶೀಲಿಸುವಂತೆ ಮೇಲ್ಮನವಿಗೆ ಹೋಗಿದ್ದಾರೆ. ತಹಶೀಲ್ದಾರ್ ಸಹ ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದಾರೆ. ಈ ಕಾರಣಕ್ಕಾಗಿ ದೇವಸ್ಥಾನದ ಬಾಗಿಲು ತೆರೆದರೆ ಗೊಂದಲ ಹಾಗೂ ಗ್ರಾಮದಲ್ಲಿ ಶಾಂತಿ ಸುವ್ಯವಸ್ಥೆ ಧಕ್ಕೆಯಾಗಬಹುದೆಂಬ ಕಾರಣದಿಂದ ಮುಂದಿನ ಆದೇಶದವರೆಗೆ ದೇವಸ್ಥಾನದ ಬಾಗಿಲು ತೆರೆಯದಿರಲು ತೀರ್ಮಾನಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಂಗಳವಾರ ಪೂಜೆ ಸಲ್ಲಿಸಲು ಆಗಮಿಸಿದ್ದ ಭಕ್ತರು, ದೇವಸ್ಥಾನ ಮುಂದೆ ದೇವಿಗೆ ಪೂಜೆ ಸಲ್ಲಿಸಿದರು.

ಇದೇ ವೇಳೆ ತಹಶೀಲ್ದಾರ್ ಬಸವರಾಜು ದೇವಸ್ಥಾನದ ಮುಂದೆ ನಾಮಫಲಕ ಅಳವಡಿಸಿ, ಪೊಲೀಸ್ ಬಂದೋಬಸ್ತ್ ಏರ್ಪಡಿಸಿದ್ದಾರೆ.

ಗ್ರಾಮಸ್ಥರು ಕಂಡಿದ್ದು ಹುಲಿಯಂತೆ! ಕ್ಯಾಮರಾದಲ್ಲಿ ಸೆರೆಯಾಗಿದ್ದು ಚಿರತೆಗಳು!!

ದೊಡ್ಡಕಾನ್ಯದಲ್ಲಿ ಆತಂಕದ ಪರಿಸ್ಥಿತಿ



ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿರುವ ಚಿರತೆ ಸಂಚಾರ

ಮೈಸೂರು, ಫೆ.6(ಎಸ್‌ಬಿಡಿ)– ಮೈಸೂರು ಸಮೀಪದ ಜಯಪುರ ಹೋಬಳಿ, ದೊಡ್ಡಕಾನ್ಯದಲ್ಲಿ ಮಂಗಳವಾರ ಎರಡು ಹುಲಿಗಳು ಕಾಣಿಸಿಕೊಂಡಿವೆ ಎಂದು ಸಾರ್ವಜನಿಕರು ದೂರು ನೀಡಿದ್ದರ ಹಿನ್ನೆಲೆಯಲ್ಲಿ ಚಿರತೆ ಕ್ಷಿಪ್ರ ಕಾರ್ಯಪಡೆ(ಎಲ್‌ಟಿಎಫ್) ಹಾಗೂ ಮೈಸೂರು ವಲಯ ಅರಣ್ಯ ಸಿಬ್ಬಂದಿ ಗ್ರಾಮಕ್ಕೆ ಧಾವಿಸಿ ಕೂಂಬಿಂಗ್ ನಡೆಸಿದ್ದಾರೆ.

ಈ ವೇಳೆ ಹೆಜ್ಜೆ ಗುರುತು ಹಾಗೂ ಸಮೀಪದ ತೋಟದಲ್ಲಿ ಅಳವಡಿಸಿರುವ ಸಿಸಿಟಿವಿ ಕ್ಯಾಮರಾ ದೃಶ್ಯಾವಳಿಯನ್ನು ಪರಿಶೀಲಿಸಿದಾಗ ಅಲ್ಲಿ ಚಿರತೆಗಳು ಸಂಚರಿಸುವುದು ಸ್ಪಷ್ಟವಾಗಿದೆ. ಈ ಬಗ್ಗೆ ಗ್ರಾಮಸ್ಥರಿಗೆ ತಿಳಿಸಿ, ಚಿರತೆ ಸೆರೆಗೆ ಅರಣ್ಯ ಸಿಬ್ಬಂದಿ ಕ್ರಮ ವಹಿಸಿದ್ದಾರೆ. ಸಿಸಿ ಕ್ಯಾಮರಾ ದೃಶ್ಯಾವಳಿ ಪ್ರಕಾರ ಕಳೆದ ಜ.20ರಂದು ಮುಂಜಾನೆ ಹಾಗೂ ಜ.24ರ ಸಂಜೆ ಚಿರತೆಗಳು ಅಲ್ಲಿ ಓಡಾಡಿದ್ದು, ಆದರೆ ಇಂದು ಗ್ರಾಮಸ್ಥರು ಕಂಡಿದ್ದು ಹುಲಿಯಲ್ಲ ಚಿರತೆ ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಆರೇಳು ತಿಂಗಳ ಹಿಂದೆ ಜಯಪುರ ಸಮೀಪದ ಚಿಕ್ಕನಹಳ್ಳಿ ಅರಣ್ಯ ಪ್ರದೇಶದ ಅರಸಿನಕೆರೆ ಗ್ರಾಮದಲ್ಲಿ ಹುಲಿ ಹಸುವಿನ ಮೇಲೆ ದಾಳಿ ನಡೆಸಿತ್ತು. ಮೂರು ತಿಂಗಳ ಹಿಂದೆ ಬ್ಯಾತಳ್ಳಿ, ದೊಡ್ಡಕಾನ್ಯ ಹಾಗೂ ಕಡಕೊಳ ಸುತ್ತಮುತ್ತ ಹುಲಿಗಳು ಕಾಣಿಸಿಕೊಂಡಿದ್ದವು. ಇದೀಗ ಮತ್ತೆ ದೊಡ್ಡಕಾನ್ಯದಲ್ಲಿ ಹುಲಿ ಕಾಣಿಸಿಕೊಂಡಿದೆ ಎಂದು ಜನ ಆತಂಕಗೊಂಡಿದ್ದರು.

ಪಿಎಚ್.ಡಿ ಪದವೀಧರೆ



ಮೈಸೂರು, ಫೆ. 6– ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ರಸಾಯನಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ.ಬಿ.ಎಸ್.ಮಧುಕರ್ ಅವರ ಮಾರ್ಗದರ್ಶನದಲ್ಲಿ ಬಿ.ಹೆಚ್. ಅನುಪಮ ಅವರು ಇನ್ವೆಸ್ಟಿಗೇಶನ್ ಆನ್ ಎಫೆಕ್ಟ್ ಆಫ್ ಮಾಡಿಫೈಡ್ ಮೆಟಲ್ ಆಕ್ಸೈಡ್ ನ್ಯಾನೋಪಾರ್ಟಿಕಲ್ಸ್ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಒಂದನೇ ಪುಟದಿಂದ

ಕರ್ನಾಟಕ ಸರ್ಕಾರ ಧರಣಿ

ನೀಡುತ್ತಿಲ್ಲ ಎಂಬುದನ್ನೇ ಮುಖ್ಯವಾಗಿಟ್ಟುಕೊಂಡು ಈ ಪ್ರತಿಭಟನೆ ನಡೆಯುತ್ತಿದೆ. ಈಗಾಗಲೇ ಕೇರಳ, ಪಶ್ಚಿಮಬಂಗಾಳ ಹಾಗೂ ತಮಿಳುನಾಡು ಸರ್ಕಾರಗಳು ಕೇಂದ್ರದ ವಿರುದ್ಧ ತಿರುಗಿಬಿದ್ದಿದ್ದು, ಅವುಗಳು ಸಹ ವಿನೂತನ ರೀತಿ ಪ್ರತಿಭಟನೆ ನಡೆಸಿವೆ.

ಗ್ಯಾರಂಟಿ ಯೋಜನೆಗಳಿಗೆ ಅನುದಾನ ನೀಡುತ್ತಿರುವುದರಿಂದ ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ರಾಜ್ಯ ಸರ್ಕಾರ ಆರ್ಥಿಕ ಮುಗ್ಗಟ್ಟು ಎದುರಿಸುತ್ತಿದೆ. ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಬರಬೇಕಿರುವ ತೆರಿಗೆ ಪಾಲು, ಅನುದಾನ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಗೆತ್ತಿಕೊಳ್ಳುವ ಯೋಜನೆಗಳ ಅನುದಾನದಲ್ಲಿ ಭಾರಿ ಕಡಿತ ಮಾಡಿರುವುದು ಅಭಿವೃದ್ಧಿಗೆ ಅಡ್ಡಗಾಲಾಗಿ ನಿಂತಿದೆ. ಇದರ ನಡುವೆ ರಾಜ್ಯ ಭೀಕರ ಬರಗಾಲ ಎದುರಿಸುತ್ತಿದ್ದು ರೈತರು ಕೋಟ್ಯಾಂತರ ರೂ. ಮೌಲ್ಯದ ಬೆಳೆ ಕಳೆದುಕೊಂಡಿರುವ ಜೊತೆಗೆ ರಾಜ್ಯ, ಬರುವ ಬೇಸಿಗೆಯಲ್ಲಿ ಕುಡಿಯುವ ನೀರು, ಮೇವು ಹಾಗೂ ವಿದ್ಯುತ್ ಸಂಕಷ್ಟಕ್ಕೆ ಸಿಲುಕುತ್ತದೆ.

ಇದನ್ನು ಎದುರಿಸಲು ರಾಜ್ಯ ಸರ್ಕಾರಕ್ಕೆ ಆರ್ಥಿಕ ಶಕ್ತಿಯ ಅಗತ್ಯವಿದೆ, ಆದರೆ, ಕೇಂದ್ರ, ರಾಜ್ಯದ ಪಾಲನ್ನು ನೀಡದಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈಕಟ್ಟಿ ಹಾಕಿದೆ. ಲೋಕಸಭಾ ಚುನಾವಣೆ ಹೊಸ್ತಿಲಲ್ಲಿ ಬರುವ ಬೇಸಿಗೆಯನ್ನು ಸಮರ್ಪಕವಾಗಿ ನಿಭಾಯಿಸದಿದ್ದರೆ ರಾಜಕೀಯವಾಗಿ ಹಿನ್ನಡೆಯಾಗುತ್ತದೆ. ಇದನ್ನು ಮನಗಂಡು ಮುಖ್ಯಮಂತ್ರಿ ಅವರು, ತಮ್ಮ ಮಂತ್ರಿಮಂಡಲದ ಸಚಿವರುಗಳಿಗೆ ಔತಣಕೂಟ ಏರ್ಪಡಿಸಿ ಅವರಿಂದ ಅಭಿಪ್ರಾಯ ಸಂಗ್ರಹಿಸಿ ನಂತರ ಇಲಾಖಾ ಪ್ರಧಾನಕಾರ್ಯದರ್ಶಿಗಳ ಸಭೆ ನಡೆಸಿ, ಅಭಿವೃದ್ಧಿ ಕಾರ್ಯಗಳ ಪೂರ್ಣ ಚಿತ್ರಣ ಪಡೆದು ಕೇಂದ್ರದ ವಿರುದ್ಧ ತಿರುಗಿಬೀಳಲು ತೀರ್ಮಾನಿಸಿದರು. ಈ ತೀರ್ಮಾನವೇ ನಾಳೆ ದೆಹಲಿಯ ಜಂತರ್–ಮಂತರ್‌ನಲ್ಲಿ ಕರ್ನಾಟಕ ಸರ್ಕಾರ, ಕೇಂದ್ರದ ವಿರುದ್ಧ ಪ್ರತಿಭಟನೆ ಮಾಡುವ ಮೂಲಕ ಒಂದು ಇತಿಹಾಸ ಸೃಷ್ಟಿಸುತ್ತಿದೆ.

ರಾಜ್ಯದ ಬಿಜೆಪಿ ಸಚಿವರು, ಸಂಸದರಿಗೂ ಪತ್ರ: ಪ್ರತಿಭಟನೆಯಲ್ಲಿ ಭಾಗಹಿಸಲು ರಾಜ್ಯವನ್ನು ಪ್ರತಿನಿಧಿಸುತ್ತಿರುವ ಕೇಂದ್ರ ಸಚಿವರೂ ಮತ್ತು ಸಂಸದರಿಗೂ ಮುಖ್ಯಮಂತ್ರಿ ಅವರು ಪತ್ರ ಬರೆದು ಮನವಿ ಮಾಡಿದ್ದಾರೆ. ಕೇಂದ್ರದ ವಿರುದ್ಧ ನಡೆಸುತ್ತಿರುವ ಪ್ರತಿಭಟನೆ ರಾಷ್ಟ್ರದ ಗಮನ ಸೆಳೆಯುವ ಉದ್ದೇಶದಿಂದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೋಮವಾರವೇ ದೆಹಲಿಗೆ ತೆರಳಿದರೆ, ಮುಖ್ಯಮಂತ್ರಿ ಹಾಗೂ ಅವರ ಸಂಪುಟದ ಸದಸ್ಯರು ಮತ್ತು ಶಾಸಕರು ಮಂಗಳವಾರ ದೆಹಲಿ ತಲುಪಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾರ್ಗದರ್ಶನದಲ್ಲೇ ಈ ಪ್ರತಿಭಟನೆ ನಡೆಯುತ್ತಿದೆ. ಧರಣಿ ನಂತರ ಮುಖ್ಯಮಂತ್ರಿ ಸೇರಿದಂತೆ ರಾಜ್ಯದ ಎಲ್ಲಾ ಸಚಿವ, ಶಾಸಕರು ಮತ್ತು ಸಂಸದರಿಗೆ ಖರ್ಗೆ ಅವರು ತಮ್ಮ ಮನೆಯಲ್ಲಿ ಔತಣಕೂಟ ಏರ್ಪಡಿಸಿದ್ದಾರೆ.

ಬನ್ನಿ ಬೆಂಬಲಿಸಿ

ಸಂಸದರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ರ ಬರೆದು ಆಹ್ವಾನ ನೀಡಿದ್ದಾರೆ. ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಆಗುತ್ತಿರುವ ನಿರಂತರ ಅನ್ಯಾಯ ಮತ್ತು ಅದರಲ್ಲೂ ಕರ್ನಾಟಕದ ವಿಚಾರವಾಗಿ ತೋರುತ್ತಿರುವ ಮಲತಾಯಿ ಧೋರಣೆಯು ನಿಮ್ಮಗಳಿಗೆ ತಿಳಿದ ವಿಷಯವಾಗಿದೆ, ಇದರ ವಿರುದ್ಧ ಪ್ರತಿಭಟಿಸಲು ಮತ್ತು ದೇಶದ ಗಮನ ಸೆಳೆಯಲು ತೀರ್ಮಾನಿಸಲಾಗಿದೆ. ನಾಳೆ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಉಪ ಮುಖ್ಯಮಂತ್ರಿ ಸೇರಿದಂತೆ ಎಲ್ಲಾ ಸಚಿವರು, ಶಾಸಕರು ಒಂದು ದಿನದ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದ್ದಾರೆ. ಕರ್ನಾಟಕಕ್ಕೆ ತೆರಿಗೆ ಪಾಲಿನ ಹಂಚಿಕೆಯಲ್ಲಿ ಆಗುತ್ತಿರುವ ಭಾರಿ ಅನ್ಯಾಯ, ಬರ ಪರಿಹಾರ ನೀಡದಿರುವುದು, ವಿವಿಧ ಯೋಜನೆ ಗಳಿಗೆ ಅನುಮತಿ ನೀಡುವಲ್ಲಿ ತೋರುತ್ತಿರುವ ನಿರ್ಲಕ್ಷ್ಯ, ವಿಳಂಬ ಇತ್ಯಾದಿಗಳಿಂದ ರಾಜ್ಯದ ಜನ ಜೀವನವನ್ನು ವಿಪರೀತವಾಗಿ ಬಾಧಿಸುತ್ತಿದೆ. ಈ ವಿಚಾರವನ್ನು ಜವಾಬ್ದಾರಿಯುತ ಚುನಾಯಿತ ಪ್ರತಿನಿಧಿಗಳಾದ ತಾವು ಅರಿತಿದ್ದೀರಿ ಎಂದು ಭಾವಿಸುತ್ತೇನೆ, ಆದ್ದರಿಂದ ಈ ಧರಣಿ ಸತ್ಯಾಗ್ರಹದಲ್ಲಿ ತಾವೂ ಪಾಲ್ಗೊಂಡು ಅದರ ಯಶಸ್ವಿಗೆ ನೆರವಾಗುವಂತೆ ವಿನಂತಿಸಿದ್ದಾರೆ. ಮುಖ್ಯಮಂತ್ರಿ ಅವರು ಇಂತಹ ಪತ್ರವನ್ನು ಖುದ್ದಾಗಿ ರಾಜ್ಯದಿಂದ ಆಯ್ಕೆಗೊಂಡಿರುವ ಸಂಸದರು ಮತ್ತು ಕರ್ನಾಟಕವನ್ನು ಪ್ರತಿನಿಧಿಸುವ ಕೇಂದ್ರ ಸಚಿವರುಗಳಿಗೆ ಬರೆದು ವಿನಂತಿ ಮಾಡಿದ್ದಾರೆ.

10 ವರ್ಷ ಜೈಲು, ಕೋಟಿ ರೂ. ದಂಡ

ಸಾರ್ವಜನಿಕ ಪರೀಕ್ಷೆಗಳ (ಅನ್ಯಾಯ ವಿಧಾನಗಳ ತಡೆಗಟ್ಟುವಿಕೆ) ಮಸೂದೆ, 2024 ಅನ್ನು ಪ್ರಾಯೋಗಿಕವಾಗಿ ನಡೆಸುತ್ತಿರುವ ಕೇಂದ್ರ ಸಚಿವ ಜಿತೇಂದ್ರ ಸಿಂಗ್, ಪ್ರಸ್ತಾವಿತ ಕಾನೂನನ್ನು ಪ್ರತಿಭಾನ್ವಿತ ವಿದ್ಯಾರ್ಥಿಗಳು ಮತ್ತು ಅಭ್ಯರ್ಥಿಗಳ ಹಿತಾಸಕ್ತಿ ಕಾಪಾಡಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ವಿಧೇಯಕದಲ್ಲಿನ ಪ್ರಮುಖಾಂಶಗಳು

- **ಪ್ರಶ್ನೆ ಪತ್ರಿಕೆಗಳನ್ನು ಸೋರಿಕೆ ಮಾಡುವವರಿಗೆ ಕನಿಷ್ಠ 3–5 ವರ್ಷಗಳ ಜೈಲು ಶಿಕ್ಷೆ, 10 ಲಕ್ಷ ರೂ. ದಂಡ ಸೇರಿದಂತೆ ಕಠಿಣ ಕ್ರಮಗಳನ್ನು ಸೂಚಿಸುತ್ತದೆ. ಸಂಘಟಿತ ಅಪರಾಧ ಪ್ರಕರಣಗಳಲ್ಲಿ 5–10 ವರ್ಷಗಳ ಸಜೆ, 1 ಕೋಟಿ ರೂ. ದಂಡ ದೊರೆಯಲಿದೆ.**
- **ಈ ಕಾನೂನಿನ ವ್ಯಾಪ್ತಿಯು ಕೇಂದ್ರ ಮತ್ತು ರಾಜ್ಯ ಲೋಕಸೇವಾ ಆಯೋಗಗಳು, ರೈಲ್ವೆ ಮತ್ತು ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆ ಸೇರಿ ವಿವಿಧ ಸಾರ್ವಜನಿಕ ಪರೀಕ್ಷೆಗಳನ್ನು ಒಳಗೊಂಡಿದೆ.**
- **ಶಿಕ್ಷಣ ಸಂಸ್ಥೆಗಳು ಅಕ್ರಮಗಳಲ್ಲಿ ತೊಡಗಿದ್ದರೆ ಆಸ್ತಿಯ ಜಪ್ತಿಯ ಜತೆಗೆ ಪರೀಕ್ಷಾ ವೆಚ್ಚ ವಸೂಲಿ ಮಾಡಲಾಗುವುದು.**
- **ಅಕ್ರಮಗಳು ಕಂಡುಬಂದರೆ ಪರೀಕ್ಷೆಗಳನ್ನು ನಡೆಸುವ ಸೇವಾ ಪೂರೈಕೆದಾರ ಸಂಸ್ಥೆಗಳಿಗೆ 1 ಕೋಟಿ ರೂ.ಗಳವರೆಗೆ ದಂಡ ವಿಧಿಸುವ ಬಗ್ಗೆ ಪ್ರಸ್ತಾವವಿದೆ. ಅಂತಹ ಸಂಸ್ಥೆಗಳು ಅಕ್ರಮ ಎಸಗಿರುವುದು ಸಾಬೀತಾದರೆ ನಾಲ್ಕು ವರ್ಷಗಳವರೆಗೆ ಸಾರ್ವಜನಿಕ ಪರೀಕ್ಷೆಗಳನ್ನು ಆಯೋಜಿಸುವುದನ್ನು ನಿರ್ಬಂಧಿಸಲಾಗುವುದು.**
- **ಪರೀಕ್ಷಾ ಅಕ್ರಮಗಳಲ್ಲಿ ತೊಡಗುವ ಸಂಘಟಿತ ಗ್ಯಾಂಗ್, ಮಾಫಿಯಾಗಳನ್ನು ನಿಯಂತ್ರಿಸುವ ಉದ್ದೇಶವನ್ನು ಮಸೂದೆ ಹೊಂದಿದೆ.**
- **ಪ್ರಶ್ನೆ ಪತ್ರಿಕೆ ಸೋರಿಕೆಯ ತನಿಖೆಯನ್ನು ಉಪ ಪೊಲೀಸ್ ವರಿಷ್ಠಾಧಿಕಾರಿ ಅಥವಾ ಸಹಾಯಕ ಪೊಲೀಸ್ ಆಯುಕ್ತರ ಶ್ರೇಣಿಗಿಂತ ಕಡಿಮೆಯಿಲ್ಲದ ಅಧಿಕಾರಿ ನಡೆಸಲಿದ್ದಾರೆ. ತನಿಖೆಯನ್ನು ಯಾವುದೇ ಕೇಂದ್ರ ಸಂಸ್ಥೆಗೆ ಒಪ್ಪಿಸುವ ಅಧಿಕಾರ ಕೇಂದ್ರ ಸರ್ಕಾರದ ಬಳಿಯೇ ಇರಲಿದೆ.**
- **ಈ ಕಾಯಿದೆ ಅಭ್ಯರ್ಥಿಯ ರಕ್ಷಣೆಗೆ ಒತ್ತು ನೀಡುತ್ತದೆ.**

ಆರೋಗ್ಯ ಸೇವೆ ಸಂಪೂರ್ಣ ಡಿಜಿಟಲೀಕರಣ

ಫಲಾನುಭವಿಗಳು ನೋಂದಣಿ ಮಾಡಿಸಿ ಸ್ಮಾರ್ಟ್ ಕಾರ್ಡ್ ಪಡೆದರೆ ಎಲ್ಲಿ ಬೇಕಾದರೂ ಆರೋಗ್ಯ ಸೇವೆ ಲಭ್ಯ: ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮಾಹಿತಿ

ಮೈಸೂರು,ಫೆ.6(ಎಂಟಿವೈ)– ಪ್ರಸ್ತುತ ಸಂದರ್ಭದಲ್ಲಿ ಡಿಜಿಟಲ್ ಆರೋಗ್ಯ ವ್ಯವಸ್ಥೆ ಅಗತ್ಯವಾಗಿದ್ದು, ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಸಂಸ್ಥೆ ಹಾಗೂ ವ್ಯಕ್ತಿಗಳೂ ಡಿಜಿಟಲ್ ವ್ಯವಸ್ಥೆಗೆ ಒಳಗೊಳ್ಳಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಸಲಹೆ ನೀಡಿದ್ದಾರೆ.



ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್‌ನ ಮೈಕ್ರೋಸೈಟ್‌ಗೆ ಚಾಲನೆ ನೀಡಿದರು.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮೈಸೂರು, ಬೆಳಗಾವಿ ಮತ್ತು ಉಡುಪಿ ಜಿಲ್ಲೆಗಳಲ್ಲಿ 'ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್'ನ ಮೈಕ್ರೋಸೈಟ್ ಉದ್ಘಾಟಿಸಿದ ಅವರು, ಮೊದಲ ಹಂತದಲ್ಲಿ ಈ ಜಿಲ್ಲೆಯಲ್ಲಿ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಭಾಗದ ಆರೋಗ್ಯ ಸೇವೆ ನೀಡುವ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳು, ವೈದ್ಯರು, ಶುಶ್ರೂಷಕರು ಹಾಗೂ ಇನ್ನಿತರ ಸಿಬ್ಬಂದಿ, ಆರೋಗ್ಯ ಸೇವೆ ಪಡೆಯುವ ಜನತೆಯನ್ನು ನೋಂದಣಿ ಮಾಡಿಸಬೇಕು. ಚಿಕಿತ್ಸೆ ಪಡೆಯುವ ರೋಗಿಗಳಿಗೆ ನೋಂದಣಿ ನಂತರ ಕಾರ್ಡ್ ನೀಡಲಾಗುತ್ತದೆ. ಆಧಾರ್ ಮಾದರಿ ಒಂದು ಯೂನಿಕ್ ನಂಬರ್ ಇರುತ್ತದೆ. ಇದನ್ನು ಬಳಕೆ ಮಾಡಿಕೊಂಡು ದೇಶದ ಯಾವುದೇ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆಯಬಹುದು. ಹಾಗಾಗಿ ಸಾರ್ವಜನಿಕರು, ಸೇವೆ ನೀಡುವವರು, ಆರೋಗ್ಯ ಕೇಂದ್ರಗಳು ಈ ವ್ಯವಸ್ಥೆಗೆ ನೋಂದಣಿಯಾಗಬಹುದು ಎಂದರು.

ಖಾಸಗಿ ಆಸ್ಪತ್ರೆಗಳು, ಪ್ರಯೋಗಾಲಯಗಳು ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್‌ನ ಬಲವರ್ಧನೆಗೆ ಸಹಕರಿಸಬೇಕು. ಯೋಜನೆಯಿಂದ ಹೆಚ್ಚು ಜನರಿಗೆ ಸೌಲಭ್ಯ ತಲುಪಿಸುವಂತೆ ಮಾಡಬೇಕು. ಅಲ್ಲದೆ, ತಂತ್ರಜ್ಞಾನದ ಸದ್ಬಳಕೆ ಮಾಡಿಕೊಂಡು ಆಯುಷ್ಮಾನ್ ಭಾರತ್ ಯೋಜನೆ ಯಶಸ್ವಿಗೊಳಿಸಬೇಕು. ರಾಜ್ಯದ ಎಲ್ಲ ನಾಗರಿಕರನ್ನು ಆಯುಷ್ಮಾನ್ ಭಾರತ್ ಆರೋಗ್ಯ ಖಾತೆಗೆ ಸೇರಿಸಬೇಕು. ಆಗ ಮಾತ್ರ ಈ ಯೋಜನೆಯ ಉದ್ದೇಶ ಸಾಕಾರಗೊಳ್ಳುತ್ತದೆ.

ಜನರು ತಮ್ಮ ಆರೋಗ್ಯಕ್ಕೆ ಸಂಬಂಧಿಸಿದ ಸಂಪೂರ್ಣ ಮಾಹಿತಿಯನ್ನು ಆನ್‌ಲೈನ್ ಮೂಲಕವೇ ಪಡೆದುಕೊಳ್ಳುವ ವ್ಯವಸ್ಥೆ ಜಾರಿಗೊಳಿಸುವ ಅಗತ್ಯವಿದೆ ಇದರಿಂದ ಆರೋಗ್ಯ ಸೌಲಭ್ಯ ಪಡೆಯುವುದಕ್ಕೆ ರೋಗಿಗಳಿಗೆ ಸಹಕಾರಿಯಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಹಿಂದೆ ಡಾ.ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದ ವೇಳೆ ದೇಶದಾದ್ಯಂತ ಜಾರಿಗೊಳಿಸಿದ ಆಧಾರ್ ವ್ಯವಸ್ಥೆ ಇಂದು ಹಲವು ಕ್ಷೇತ್ರಗಳಲ್ಲಿ ಉಪಯೋಗವಾಗಿದೆ. ಅದರಂತೆ ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಯೋಜನೆಯೂ ಉತ್ತಮ ಕೆಲಸಗಳನ್ನು ಮಾಡಲಿದೆ. ಆರಂಭದಲ್ಲಿಯೇ ಹೊಸ ಯೋಜನೆಗಳು ಪರಿಪೂರ್ಣವಾಗಿರುವುದಿಲ್ಲ. ಆದರೆ, ಅನುಭವ ಪಡೆಯುತ್ತಾ ಹೋದಂತೆ ಉತ್ತಮ ವ್ಯವಸ್ಥೆಯಾಗಿ ರೂಪುಗೊಳ್ಳುತ್ತದೆ. ರೋಗಿಗಳ ದತ್ತಾಂಶ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆ ನೀಡಿದರು.


ಆನ್‌ಲೈನ್‌ನಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿ ದಾಖಲಾಗಿರುತ್ತದೆ. ಇದರಿಂದ ಅನವಶ್ಯಕವಾಗಿ ರೋಗಿಗಳು ಹೆಲ್ತ್ ರೆಕಾರ್ಡ್‌ಗಳನ್ನು ಹೊತ್ತುಕೊಂಡು ಅಲೆಯಬೇಕಿಲ್ಲ. ಕ್ಷಣಾರ್ಧದಲ್ಲಿ ರೋಗಿಯ ಪೂರ್ವ ಮಾಹಿತಿ ಪರಿಶೀಲಿಸಿ ಚಿಕಿತ್ಸೆ ನೀಡಬಹುದು. ಇದರಿಂದ ಪರಿಣಾಮಕಾರಿ ಚಿಕಿತ್ಸೆ, ವೈದ್ಯರು ಉತ್ತಮ ನಿರ್ಧಾರ ಕೈಗೊಳ್ಳಲು ಅನುಕೂಲವಾಗುತ್ತದೆ. ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಸ್ಕೀಂಗಳನ್ನು ಪಡೆಯಲು, ಸಂಶೋಧನಾ ಚಟುವಟಿಕೆಗಳಿಗೂ ಅನುಕೂಲವಾಗುತ್ತದೆ. ತುರ್ತು ಸಂದರ್ಭಗಳಲ್ಲಿ ವೈದ್ಯರಿಗೂ ರೋಗಿಯ ಬಗ್ಗೆ ಹಿಂದಿನ ಮಾಹಿತಿ ಪಡೆದು ಚಿಕಿತ್ಸೆ ಮುಂದುವರೆಸಲು ನೆರವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಯೋಜನೆಯಲ್ಲಿ ಸೇವೆ ನೀಡುವವರ ಬಗ್ಗೆ, ದರಗಳ ಬಗ್ಗೆ ಮಾಹಿತಿ ಇರಬೇಕು. ರೋಗಿಗಳ ದತ್ತಾಂಶ ಸುರಕ್ಷತೆಗೆ ಖಾತರಿ ಇರಬೇಕು. ಇಂಥಹ ಕೆಲ ಗೊಂದಲ ನಿವಾರಣೆಯಾದರೆ ಯೋಜನೆ ಉತ್ತಮವಾಗಲಿದೆ. 1ರಿಂದ 12ನೇ ತರಗತಿ ವರೆಗಿನ ಮಕ್ಕಳನ್ನು ಕಡ್ಡಾಯವಾಗಿ ಯೋಜನೆ ಒಳಗೆ ತರಲು ಪ್ರಯತ್ನಿಸಬೇಕು. ಆ ಮೂಲಕ ಆರೋಗ್ಯ ರಕ್ಷಣೆಯತ್ತ ದೃಢ ಹೆಜ್ಜೆಯಿಡಲು ಕಾರ್ಯಕ್ರಮ ರೂಪಿಸಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಆರೋಗ್ಯ ಇಲಾಖೆ ಆಯುಕ್ತ ಡಿ. ರಂದೀಪ್, ನಿರ್ದೇಶಕಿ ಬಿ.ಎಸ್.ಪುಷ್ಪಲತಾ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಪ್ರಕೃತಿಯನ್ನು ಕಲ್ಪನೆಯಿಂದ ನೋಡದೆ, ಉಳಿಸಿ ನೋಡಿ

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ನ್ಯಾ.ಬಿ.ಜಿ.ದಿನೇಶ್



ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮೈದಾನದಲ್ಲಿ ಮಂಗಳವಾರ ಆಯೋಜಿಸಿದ್ದ ಮೈಸೂರು ದಕ್ಷಿಣ ವಲಯ ರ‍್ಯಾಲಿಗೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ನ್ಯಾ.ಬಿ.ಜಿ.ದಿನೇಶ್ ಚಾಲನೆ ನೀಡಿದರು.

ಮೈಸೂರು, ಫೆ.6(ಜಿಎ)–ಮನುಷ್ಯ ಕಾಲ್ಪನಿಕ ಸುಖ–ಸಂತೋಷಕ್ಕೆ ಮಾರು ಹೋಗುತ್ತಿದ್ದಾನೆ. ಪ್ರಕೃತಿ ಮಡಿಲಿನಲ್ಲಿ ಸಿಗುವ ಸುಂದರ ವಾತಾವರಣವನ್ನು ಕಲ್ಪನೆಯಿಂದ ನೋಡುವುದಕ್ಕಿಂತ, ಪರಿಸರವನ್ನು ಉಳಿಸಿ ನೋಡಬೇಕು. ಯುವ ಜನಾಂಗಕ್ಕೆ ಪರಿಸರದಿಂದ ಸಿಗುವ ಅನುಕೂಲಗಳ ಬಗ್ಗೆ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ನ್ಯಾ.ಬಿ.ಜಿ.ದಿನೇಶ್ ತಿಳಿಸಿದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ದಕ್ಷಿಣ ವಲಯ ಸ್ಥಳೀಯ ಸಂಸ್ಥೆ ವತಿಯಿಂದ ಶ್ರೀ ಜಯಚಾಮರಾಜೇಂದ್ರ ಸ್ಕೌಟ್ಸ್ ಮತ್ತು ಗೈಡ್ಸ್‌ನ ಮೈದಾನದಲ್ಲಿ ಮಂಗಳವಾರ ಆಯೋಜಿಸಿದ್ದ ಮೈಸೂರು ದಕ್ಷಿಣ ವಲಯ ರ‍್ಯಾಲಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಕೃತಿಕ ಸಂಪತ್ತನ್ನು ಮುಂದಿನ ಪೀಳಿಗೆಯವರು ಅನುಭವಿಸಬೇಕಾದರೆ, ಪ್ರಕೃತಿದತ್ತ ಸಂಪತ್ತು ನಾವು ಉಳಿಸಬೇಕು ಎಂದರು.

ಅತ್ಯಾಧುನಿಕ ಉಪಕರಣಗಳು ನಮ್ಮಲ್ಲಿ ಇರಬಹುದು. ಆದರೆ, ಪ್ರಕೃತಿಯನ್ನು ಹಣದಿಂದ ಖರೀದಿಸಲು ಸಾಧ್ಯವಿಲ್ಲ. ಪ್ರಕೃತಿಯನ್ನು ಪ್ರಕೃತಿಯಾಗಿಯೇ ಉಳಿಯಬಿಟ್ಟರೆ, ಮುಂದಿನ ಪೀಳಿಗೆಗೆ ಅನುಕೂಲವಾಗುತ್ತದೆ. ಇಲ್ಲವಾದರೆ, ಗಾಳಿ, ನೀರು, ಅರಣ್ಯ ಸೇರಿದಂತೆ ಪರಿಸರದ ಮೇಲೆ ಅಪಾಯ ಎದುರಾಗಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕಾಡನ್ನು ಕಡಿದು ಕಾಂಕ್ರಿಟ್ ಕಾಡನ್ನು ನಿರ್ಮಾಣ ಮಾಡಲು ಮುಂದಾಗುತ್ತಿದ್ದೇವೆ. ಇದರಿಂದ ಪರಿಸರದ ಮೇಲೆ ತುಂಬ ಪರಿಣಾಮ ಬೀರಲಿದ್ದು, ಪ್ರಕೃತಿಗೆ ವಿರುದ್ಧವಾಗಿ ನಾವು ಎಂದಿಗೂ ನಡೆದುಕೊಳ್ಳಬಾರದು. ಪ್ರಕೃತಿಯನ್ನು ಪ್ರಕೃತಿಯಂತೆಯೇ ಉಳಿಸಿ ಹೋಗಬೇಕು. ಸ್ಕೌಟ್ಸ್ ಮತ್ತು ಗೈಡ್ಸ್‌ನಲ್ಲಿ ವಿದ್ಯಾರ್ಥಿಗಳಿಗೆ ಪರಿಸರ ರಕ್ಷಣೆಗೆ ಪೂರಕವಾದ ವಾತಾವರಣದ ಬಗ್ಗೆ ತಿಳಿಸಲಾಗುತ್ತಿದೆ. ಪರಿಸರದ ಬಗ್ಗೆ ಬಾಲ್ಯದಿಂದಲೇ ತಿಳಿದುಕೊಂಡರೆ, ನಮ್ಮ ಪರಿಸರವನ್ನು ಉಳಿಸಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಮುಖ್ಯ ಕಮಿಷನರ್ ಪಿ.ವಿಶ್ವನಾಥ್, ಜಿಲ್ಲಾ ಕಾರ್ಯದರ್ಶಿ ಅಬ್ದುಲ್ ಜಮೀಲ್, ದಕ್ಷಿಣ ವಲಯ ಸ್ಥಳೀಯ ಸಂಸ್ಥೆ ಅಧ್ಯಕ್ಷ ಡಾ.ಬಿ.ಕೆ.ಅಜಯ್ ಕುಮಾರ್ ಜೈನ್ , ಎನ್.ಡಿ.ಕುಸುಮಾ, ಎಸ್.ಲತಾ, ವಿವಿಧ ಶಾಲೆಯ ನೂರಾರು ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಭಾಗವಹಿಸಿದ್ದರು.

ಫೆ.9, ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದಲ್ಲಿ 'ಪಂಚ ಗರುಡೋತ್ಸವ ಸಂಭ್ರಮ' ಕಾರ್ಯಕ್ರಮ



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಎಚ್.ವಿ.ಎಲ್.ಎನ್.ಆಚಾರ್ ಮಾತನಾಡಿದರು.

ಮೈಸೂರು, ಫೆ.6(ಜಿಎ)– ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನದ ಪಂಚ ಗರುಡೋತ್ಸವ ಸೇವಾ ಸಮಿತಿ ವತಿಯಿಂದ ಫೆ.9ರಂದು ದೇವಸ್ಥಾನದಲ್ಲಿ ಇದೇ ಪ್ರಥಮ ಬಾರಿಗೆ ಪಂಚ ಗರುಡೋತ್ಸವ ಸಂಭ್ರಮ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಮಿತಿಯ ಖಜಾಂಚಿ ಎಚ್.ವಿ.ಎಲ್.ಎನ್.ಆಚಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ಲಕ್ಷ್ಮೀ ವೆಂಕಟರಮಣ ಸ್ವಾಮಿ ದೇವಸ್ಥಾನ, ಶ್ರೀನಿವಾಸ ದೇವಸ್ಥಾನ, ಪುಸ್ತಕಂ ಸಂತಾನ ವೇಣುಗೋಪಾಲ ಸ್ವಾಮಿ ದೇವಸ್ಥಾನ, ಆಂಡಾಳ್ ಮಂದಿರದ ವೇಣುಗೋಪಾಲಸ್ವಾಮಿ ದೇವಸ್ಥಾನದ ಗರುಡ ವಾಹನ ಮೂರ್ತಿಗಳು ಇದರಲ್ಲಿ ಪಾಲ್ಗೊಳ್ಳಲಿವೆ ಎಂದರು.

ಅಂದು ಮಧ್ಯಾಹ್ನ 12.30ಕ್ಕೆ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಧಾರ್ಮಿಕ ಕಾರ್ಯಕ್ರಮಕ್ಕೆ ಚಾಲನೆ ನೀಡುವರು, ಶಾಸಕ ಟಿ.ಎಸ್.ಶ್ರೀವತ್ಸ ಸಾಂಸ್ಕೃತಿಕ ಕಾರ್ಯಕ್ರಮ ಉದ್ಘಾಟಿಸುವರು, ಸುಕೃತಿ ವೆಂಕಟರಾಮನ್ ಅವರಿಂದ ಭರತನಾಟ್ಯವಿದೆ. ಸಂಜೆ 4.30 ರಿಂದ 5.30 ರವರೆಗೆ ಸಭಾ ಕಾರ್ಯಕ್ರಮ ವಿದ್ದು, ನಂತರ ಪಂಚ ಗರುಡೋತ್ಸವಕ್ಕೆ ಶ್ರೀಮದಭಿನವ ವಾಗೀಶ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಚಾಲನೆ ನೀಡಲಾಗುವುದು ಎಂದು ಅವರು ಹೇಳಿದರು.

ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಭಾಷ್ಯಂ ಸ್ವಾಮೀಜಿ, ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ, ಶಾಸಕ ಕೆ.ಹರೀಶ್ ಗೌಡ, ಪೊಲೀಸ್ ಆಯುಕ್ತ ಬಿ.ರಮೇಶ್, ಮಾಜಿ ಶಾಸಕ ಎಸ್.ಎ.ರಾಮದಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪಾಲಿಕೆ ಮಾಜಿ ಸದಸ್ಯರಾದ ಭಾಗ್ಯ ಮಹದೇಶ್, ನಮ್ರತ ರಮೇಶ್ ಉಪಸ್ಥಿತರಿರುವರು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಕೆ.ಆರ್.ಯೋಗಾನರಸಿಂಹನ್, ಪ್ರದೀಪ್, ಲಕ್ಷ್ಮೀಶ್, ವೀರರಾಘವನ್, ನಾಗಮಣಿ ಸಂಪತ್ ಉಪಸ್ಥಿತರಿದ್ದರು.

ಸಂಗೀತ ವಿವಿಯಲ್ಲಿ ತ್ಯಾಗರಾಜ, ಪುರಂದರದಾಸ, ಕನಕದಾಸರ ಆರಾಧನಾ ಮಹೋತ್ಸವ ಆಚರಣೆ



ಮೈಸೂರು, ಫೆ.6(ಜಿಎ)–ಮೈಸೂರಿನ ಕರ್ನಾಟಕ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಸಂಗೀತ ತ್ರಿಮೂರ್ತಿಗಳಾದ ತ್ಯಾಗರಾಜ, ಪುರಂದರದಾಸ ಮತ್ತು ಕನಕದಾಸರ ಆರಾಧನಾ ಮಹೋತ್ಸವ ನಡೆಸಲಾಯಿತು.

ಈ ವೇಳೆ ಸುರಭಿ ಗಾನ ಕಲಾ ಮಂದಿರದ ಸ್ಥಾಪಕಿ ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಮಾತನಾಡಿ, ತ್ಯಾಗರಾಜರಾಗಲಿ, ಪುರಂದರದಾಸರಾಗಲಿ ಸಂಗೀತ ಕಲಿಯುವವರಿಗೆ ಕುಲಗುರುಗಳಾಗಿದ್ದು, ಅವರ ಆರಾಧನೆಗಾಗಿ ಕಾಯುವ ಸಂಗೀತಾಸಕ್ತರು ಅನೇಕರಿದ್ದಾರೆ. ತ್ಯಾಗರಾಜರಿಂದ ಅನೇಕ ವಿಷಯ ಕಲಿಯಬಹುದು. ಅವರ ಕೃತಿಗಳಲ್ಲಿ ಬರುವ ಉತ್ಸವಗಳು, ತ್ಯಾಗರಾಜರ ಪಂಚರತ್ನ ಕೃತಿಗಳನ್ನು ನಾವು ಅರ್ಥ ಮಾಡಿಕೊಳ್ಳಬೇಕಿದೆ ಎಂದರು.

ಪುಷ್ಯ ಬಹುಳ ಪಂಚಮಿಯಿಂದ ಮೂರು ತಿಂಗಳ ಕಾಲ ಸಂಗೀತ ಕ್ಷೇತ್ರಕ್ಕೆ ಒಂದು ಪರ್ವಕಾಲ. ಸಾಪಾಸ ಎನ್ನುವ ಮಗು ಕೂಡ ತ್ಯಾಗರಾಜರ ಅಂದರೂ ಮಹಾನುಭಾವುಲು ಸಂಗೀತ ಮತ್ತು ಆರಾಧನೆಗಳು ಕಲಿಕೆಯ ದಾರಿಯಾಗಿದೆ. ಪಿಳ್ಳಾರಿ ಗೀತೆಗಳಿಗೆ ಮಾತ್ರ ಪುರಂದರರನ್ನು ಸೀಮಿತ ಮಾಡಿದ್ದೇವೆ ಎಂದರು.

ಸಂಗೀತದೊಂದಿಗೆ ಸಾಹಿತ್ಯವನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಸಾಮಾನ್ಯರಿಗೂ ಕೂಡ ರಾಮ ನಿಲುಕಬಲ್ಲ ಎಂಬ ಮಾರ್ಗವನ್ನು ಹಾಕಿಕೊಟ್ಟವರು ತ್ಯಾಗರಾಜರು, ನಮ್ಮ ದೃಷ್ಟಿಯೂ ಆ ಕಡೆ ಹೋಗುವಂತಾಗಲಿ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ವಿವಿ ಕುಲಪತಿ ಪ್ರೊ.ನಾಗೇಶ್ ವಿ.ಬೆಟ್ಟಕೋಟೆ, ರಂಗಕರ್ಮಿ ರಾಜರಾಮ್, ಶ್ರೀನಾಥ್, ಶೃತಿ ರಂಜನಿ, ಶ್ರೀಲಕ್ಷ್ಮಿ, ರಮಾ, ಬಳ್ಳಾರಿ ರಾಘವೇಂದ್ರ ಉಪಸ್ಥಿತರಿದ್ದರು.

ಮಹಾಗಣಪತಿ ದೇವಸ್ಥಾನ ಲೋಕಾರ್ಪಣೆ




ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬಿ.ಸಿದ್ದೇಗೌಡ ಮಾತನಾಡಿದರು

ಮೈಸೂರು, ಫೆ.6(ಜಿಎ)– ಬೋಗಾದಿ– ಗದ್ದಿಗೆ ಮುಖ್ಯ ರಸ್ತೆಯ ಕಣಿಯನಹುಂಡಿ ಗೇಟ್ ಬಳಿಯ ಅರ್ಕಧಾಮದಲ್ಲಿ ಅರ್ಕ ಮಹಾ ಗಣಪತಿಯ ನೂತನ ದೇವಸ್ಥಾನ ಲೋಕಾರ್ಪಣೆ ನಡೆಯಲಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ದೇವಸ್ಥಾನ ಸಮಿತಿಯ ಬಿ.ಸಿದ್ದೇಗೌಡ ಈ ವಿಷಯ ತಿಳಿಸಿ, ಯೋಗ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆ ಮಾಡಿರುವ ಯೋಗಿ ಶ್ರೀನಿವಾಸ ಅರ್ಕ ಅವರು ಈ ದೇವಸ್ಥಾನ ನಿರ್ಮಿಸಿದ್ದು, ಫೆ.12 ರಂದು ಧಾರ್ಮಿಕ ಕಾರ್ಯಕ್ರಮ ಆರಂಭವಾಗಿ ಫೆ. 17 ರವರೆಗೂ ನಡೆಯಲಿವೆ. ಪ್ರತಿದಿನ ಸಂಜೆ ವೇದ ಪಾರಾಯಣ, ಸಾಂಸ್ಕೃತಿಕ ಕಾರ್ಯಕ್ರಮ ಇರಲಿವೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ದೇವಸ್ಥಾನ ಸಮಿತಿಯ ದೇವರಾಜು, ಈರೇಗೌಡ, ಅಶೋಕ ಉಪಸ್ಥಿತರಿದ್ದರು.

ಔಷಧಿ ಖರೀದಿ ಗೊಂದಲ ಶೀಘ್ರದಲ್ಲೇ ನಿವಾರಣೆ

● ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಭರವಸೆ ● ಆಸ್ಪತ್ರೆಗಳ ಹಳೆ ಕಟ್ಟಡಕ್ಕೆ ಪುನಶ್ಚೇತನ ನೀಡಲು 500 ಕೋಟಿ ವೆಚ್ಚ

ಮೈಸೂರು,ಫೆ.6(ಎಂಟಿವೈ)– ಔಷಧಿ ಖರೀದಿಸುವ ಪ್ರಕ್ರಿಯೆಯಲ್ಲಿನ ಕೆಲವೊಂದು ಆಡಳಿತಾತ್ಮಕ ಲೋಪದೋಷಗಳಿಂದಾಗಿ ಇತ್ತೀಚೆಗೆ ಆರೋಗ್ಯ ಇಲಾಖೆ ರಾಜ್ಯದಲ್ಲಿ ಸಮರ್ಪಕವಾಗಿ ಔಷಧ ವಿತರಿಸಲು ಸಾಧ್ಯವಾಗುತ್ತಿರಲಿಲ್ಲ. ಶೀಘ್ರದಲ್ಲಿಯೇ ಆ ದೋಷವನ್ನು ಸರಿಪಡಿಸಿ, ಅಗತ್ಯಕ್ಕೆ ಅನುಗುಣವಾಗಿ ಔಷಧಿ ಖರೀದಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಔಷಧ ಖರೀದಿ, ದಾಸ್ತಾನು, ಅವಧಿ ಮುಗಿದ ಔಷಧಗಳ ದಾಖಲೀಕರಣ, ಟೆಂಡರ್ ಪ್ರಕ್ರಿಯೆಯಲ್ಲಿ ಆಗಿರುವ ಕೆಲವೊಂದು ವ್ಯತ್ಯಾಸದಿಂದ ಸಮರ್ಪಕವಾಗಿ ಔಷಧಿ ಖರೀದಿಸಲು ಸಾಧ್ಯವಾಗಿಲ್ಲ. ನ್ಯೂನತೆ ಸರಿಪಡಿಸಲು ಕ್ರಮ ಕೈಗೊಳ್ಳಲಾಗಿದೆ. ಮುಂದಿನ 3–4 ತಿಂಗಳೊಳಗೆ ಔಷಧಿ ಖರೀದಿ ವ್ಯವಸ್ಥೆ ಸುಗಮವಾಗಲಿದೆ ಎಂದರು.

ಆಸ್ಪತ್ರೆಗಳ ಹೊಸ ಕಟ್ಟಡಗಳಿಗೆ ಅನುದಾನ ನೀಡುವುದರೊಂದಿಗೆ ಹಳೆಯ ಕಟ್ಟಡವನ್ನು ಸೋಂಕು ಮುಕ್ತವಾಗಿ ಸುಸಜ್ಜಿತಗೊಳಿಸಲಾಗುವುದು. ಈ ಮೂಲಕ ಹಳೆ ಕಟ್ಟಡಗಳನ್ನು ಸಂರಕ್ಷಿಸಲು ಕ್ರಮ ಕೈಗೊಳ್ಳಲಾಗಿದೆ. ರಾಜ್ಯದ ವಿವಿಧ ಆಸ್ಪತ್ರೆ ಕಟ್ಟಡಗಳ ದುರಸ್ತಿಗೆ 500 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಇತ್ತೀಚೆಗೆ ಬೆಳಕಿಗೆ ಬಂದ ಹೆಣ್ಣು ಭ್ರೂಣ ಹತ್ಯೆಗೆ ಸಂಬಂಧಿಸಿದ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿದೆ. ಇಲಾಖೆ ವತಿಯಿಂದ ನ್ಯಾಯಾಲಯಕ್ಕೆ ಬೇಕಾದ ಅಗತ್ಯ ಮಾಹಿತಿಗಳನ್ನು ಒದಗಿಸಿಕೊಡಲಾಗಿದೆ. ತಪ್ಪಿತಸ್ಥರಿಗೆ ಶಿಕ್ಷೆಯಾಗಲಿದೆ ಎಂದರು.

ವೈದ್ಯರು ತಮ್ಮ ಸೇವಾ ಅವಧಿ ಮುಗಿದ ನಂತರ ಖಾಸಗಿಯಾಗಿ ಪ್ರಾಕ್ಟೀಸ್ ಮಾಡಲು ಅವಕಾಶವಿದೆ. ಆದರೆ ಸರ್ಕಾರಿ ಆಸ್ಪತ್ರೆಗಳಿಗೆ ಬರುವ ರೋಗಿಗಳನ್ನು ಖಾಸಗಿ ಆಸ್ಪತ್ರೆಗೆ ಕಳುಹಿಸಿ ದುಬಾರಿ ವೆಚ್ಚದಲ್ಲಿ ಚಿಕಿತ್ಸೆ ಪಡೆಯುವಂತೆ ಮಾಡುವುದು ತಪ್ಪು. ಕೆಪಿಎಂಎ ಕಾಯಿದೆ ಪ್ರಕಾರ ಎಲ್ಲಾ ಖಾಸಗಿ ಆಸ್ಪತ್ರೆಗಳಲ್ಲಿ ನೀಡುವ ಚಿಕಿತ್ಸೆಗಳಿಗೆ ಸರ್ಕಾರ ಇಂತಿಷ್ಟು ಶುಲ್ಕ ನಿಗದಿ ಮಾಡಿದೆ. ಆದರೆ ಬಹುತೇಕ ಆಸ್ಪತ್ರೆಗಳಲ್ಲಿ ಚಿಕಿತ್ಸಾ ಶುಲ್ಕದ ಫಲಕ ಅಳವಡಿಸಿಲ್ಲ. ಮುಂದಿನ ದಿನಗಳಲ್ಲಿ ದುಬಾರಿ ಬಿಲ್‌ಗೆ ಕಡಿವಾಣ ಹಾಕಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು. ರೋಗಿಗಳು ಚಿಕಿತ್ಸೆಗಾಗಿ ದಾಖಲಿಸಿದ ಸಂದರ್ಭದಲ್ಲಿ ಅವರ ಮೊಬೈಲ್‌ಗೆ ಚಿಕಿತ್ಸೆ ವೆಚ್ಚಕ್ಕೆ ಸಂಬಂಧಿಸಿದ ಮಾಹಿತಿ ರವಾನಿಸುವ ವ್ಯವಸ್ಥೆ ಜಾರಿಗೊಳಿಸಲಾಗುತ್ತದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಕಾಣಿಸಿಕೊಂಡಿರುವ ಕೆಎಫ್‌ಡಿ (ಕೋತಿ ಜ್ವರ) ಸೋಂಕು ಹರಡದಂತೆ ಕ್ರಮ ಕೈಗೊಳ್ಳಲಾಗಿದೆ. ಈ ಸೋಂಕು ಸಾಮಾನ್ಯವಾಗಿ ಜನವರಿಯಿಂದ ಮಾರ್ಚ್ ತಿಂಗಳಲ್ಲಿ ಕಾಣಿಸಿಕೊಳ್ಳುತ್ತದೆ. ನಂತರ ಕ್ರಮೇಣ ಕಡಿಮೆಯಾಗುತ್ತದೆ. ಈ ಕಾಯಿಲೆಗೆ ಇಂದಿಗೂ ವ್ಯಾಕ್ಸಿನ್ ಕಂಡುಹಿಡಿದಿಲ್ಲ. ಐಸಿಎಂಆರ್ ಸಂಸ್ಥೆ ಈ ಬಗ್ಗೆ ಸಂಶೋಧನೆ ನಡೆಸುತ್ತಿದೆ. ಸದ್ಯದಲ್ಲಿಯೇ ಔಷಧ ಕಂಡುಹಿಡಿಯಲಾಗುವುದು. ಅಲ್ಲಿಯವರೆಗೆ ಈ ಸೋಂಕು ಕಾಣಿಸಿಕೊಳ್ಳದಂತೆ ಮುಂಜಾಗ್ರತೆ ವಹಿಸಲಾಗುತ್ತಿದೆ ಎಂದರು.

ಆರೋಗ್ಯ ಇಲಾಖೆಯಲ್ಲಿ ಸಿಬ್ಬಂದಿಗಳ ಕೊರತೆ ಇದೆ. ಇದಕ್ಕೆ ಸಂಬಂಧಿಸಿದಂತೆ ಸರಕಾರಕ್ಕೆ ಮನವರಿಕೆ ಮಾಡಿಕೊಡಲಾಗಿದೆ. ಸದ್ಯದಲ್ಲಿಯೇ 800 ಮಂದಿ ಶುಶ್ರೂಷಕಿಯರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಆರೋಗ್ಯ ಇಲಾಖೆ ಆಯುಕ್ತ ಡಿ. ರುದೀಪ್ ಹಾಗೂ ಇತರ ಅಧಿಕಾರಿಗಳು ಇದ್ದರು.





ಸುತ್ತೂರು ಜಾತ್ರಾ ಮಹೋತ್ಸವಕ್ಕೆ ವರ್ಣರಂಜಿತ ಚಾಲನೆ

● ವಾರ ಕಾಲ ಕಲೆ, ಸಂಸ್ಕೃತಿ, ಸಂಶೋಧನೆ, ಕೃಷಿ ಮೇಳ, ಮನರಂಜನೆ, ಸಾಹಸ ಕ್ರೀಡೆ ಹೀಗೆ ಹತ್ತು-ಹಲವು ವಿಶೇಷಗಳೊಂದಿಗೆ ಧಾರ್ಮಿಕ ಉತ್ಸವ ● ರಾಜ್ಯದ ನಾನಾ ಭಾಗದಿಂದ ಜನ ಜಾತ್ರೆ

ನಂಜನಗೂಡು, ಫೆ.6– ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿ ಜಗದ್ಗುರು ಶ್ರೀಶಿವರಾತ್ರಿ ಶಿವಯೋಗಿಗಳ ಜಾತ್ರಾ ಮಹೋತ್ಸವಕ್ಕೆ ಮಂಗಳವಾರ ವೈಭವಯುತ, ವರ್ಣ ರಂಜಿತ ಚಾಲನೆ ದೊರೆಯಿತು.

ಆ ಮೂಲಕ ನಾಡಿನ ವಿವಿಧ ಭಾಗಗ ಳಿಂದ ಆಗಮಿಸಿದ್ದ ಭಾರಿ ಜನಸ್ತೋಮದ ಉತ್ಸಾಹಕ್ಕೆ ಮೇರೆಯೇ ಇಲ್ಲ. ವೈವಿಧ್ಯಮಯ ಕಾರ್ಯಕ್ರಮಗಳೊಂದಿಗೆ ಆರು ದಿನಗಳ ಆದಿ ಜಗದ್ಗುರು ಶ್ರೀ ಶಿವರಾತ್ರಿ ಶಿವ ಯೋಗಿಗಳವರ ಜಾತ್ರಾ ಮಹೋತ್ಸವ ಅನಾವರಣಗೊಂಡಿತು.

ಮನರಂಜನೆ ಜೊತೆಗೆ ಜನರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳು ಜಾತ್ರೆ ಭಾಗವಾಗಿರಲಿದ್ದು, ಕೃಷಿಯಲ್ಲಿನ ಆಧುನಿಕ ತಂತ್ರಜ್ಞಾನ, ಆರೋಗ್ಯ ಕ್ಷೇತ್ರದಲ್ಲಿ ಆಗಿರುವ ಆವಿಷ್ಕಾರಗಳು, ಹೊಸ ಸಂಶೋಧನೆಗಳ ಮಾಹಿತಿಯನ್ನು ವಸ್ತು ಪ್ರದರ್ಶನದ ಮೂಲಕ ಜನರಲ್ಲಿ ಅರಿವು ಮೂಡಿಸುವುದು ಜಾತ್ರೆಯ ವಿಶೇಷಗಳಲ್ಲಿ ಒಂದಾಗಿದೆ. ಎಲ್ಲಾ ವರ್ಗದ ಜನರನ್ನು ಬೆಸೆಯುವ ಕ್ರೀಡಾ ಚಟುವಟಿಕೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಪರ್ಧೆ ಗಳು, ಜಾನಪದ, ಸೋಬಾನೆ, ದೇಶೀ ಆಟಗಳು, ಜಾನುವಾರು ಪರಿಷೆ, ದೇಶಿ ತಳಿಗಳ ಉತ್ತೇಜನ, ಸಾಮೂಹಿಕ ವಿವಾಹ, ಆರೋಗ್ಯ ತಪಾಸಣೆಯಂತಹ ಸಮಾಜ ಮುಖಿ ಚಟುವಟಿಕೆಗಳು ಜಾತ್ರೆಯೊಂದಿಗೆ ಬೆಸೆದುಕೊಂಡಿರುವುದು ಸುತ್ತೂರು ಜಾತ್ರೆ ಅರಿವಿನ ಜಾತ್ರೆ ಎಂಬುದನ್ನು ಸಾಕ್ಷೀಕರಿಸಲಿದೆ.

ಸುತ್ತೂರು ಶ್ರೀ ದೇಶಿಕೇಂದ್ರ ಸ್ವಾಮೀಜಿ ಗಳವರ ನೇತೃತ್ವದಲ್ಲಿ ನಡೆಯುತ್ತಿರುವ ಜಾತ್ರಾ ಮಹೋತ್ಸವದಲ್ಲಿ ಕನ್ನೇರಿ ಸಿದ್ದಗಂಗಾ ಸಂಸ್ಥಾನ ಮಠದ ಜಗದ್ಗುರು ಶ್ರೀ ಅದೃಶ್ಯ ಕಾಡಸಿದ್ದೇಶ್ವರ ಸ್ವಾಮೀಜಿ, ನಿಂಬಾಳ ಮಠದ ಜಡೆ ಶಾಂತಮಲ್ಲಿ ಕಾರ್ಜುನ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಕೃಷಿಮೇಳ, ಆರೋಗ್ಯ ತಪಾಸಣಾ ಶಿಬಿರವನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್, ವಸ್ತುಪ್ರದರ್ಶನವನ್ನು ಮಾಜಿ ಶಾಸಕಿ ರೂಪಾಲಿ ನಾಯಕ್ ಉದ್ಘಾಟಿಸಿದರು. ಸಾಂಸ್ಕೃತಿಕ ಮೇಳ ವನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ, ದೋಣಿ ವಿಹಾರವನ್ನು ಶಾಸಕ ಗಣೇಶ್ ಪ್ರಸಾದ್ ಉದ್ಘಾಟಿಸಿದರು. ಮುಖ್ಯ ಅತಿಥಿ ಗಳಾಗಿ ಎಂಎಲ್‌ಸಿ ಸಿ.ಎನ್.ಮಂಜೇ ಗೌಡ, ಹೈಕೋರ್ಟ್ ನಿವೃತ್ತ ನ್ಯಾಯ ಮೂರ್ತಿ ಎ.ಎಸ್.ಪಚ್ಚಾಪುರೆ, ಊಟಿ ಶಾಸಕ ಆರ್.ಗಣೇಶ್, ಪದ್ಮ ಪ್ರಶಸ್ತಿ ಪುರ ಸ್ಕೃತರಾದ ಪೆರ್ರಿ ಸಿಲ್ವೆನ್ ಫಿಲಿಯೋ ಜಾಟ್ ಮತ್ತು ಶ್ರೀಮತಿ ವಸುಂದರಾ ಫಿಲಿಯೋಜಾಟ್ ಭಾಗಿಯಾಗಿದ್ದರು.

ಗದ್ದುಗೆ ಆವರಣದಲ್ಲಿ ನಾದಸ್ವರ, ಜಾನಪದ ಸಂಗೀತದಂತಹ ಸಾಂಸ್ಕೃತಿಕ ಚಟುವಟಿಕೆಗಳು, ದ್ವಾದಶ ಜ್ಯೋತಿರ್ಲಿಂಗ ನೃತ್ಯ ರೂಪಕ, ಸುಗಮ ಸಂಗೀತ, ತಾಲೂಕಿನ ಹಲ್ಲರೆ ಗ್ರಾಮದ ಶ್ರೀರಾಮೇ ಶ್ವರ ಕೃಪಾಪೋಷಿತ ಯಕ್ಷಗಾನ, ಸೂತ್ರದ ಬೊಂಬೆ ಮೇಳದವರು ನಡೆಸಿಕೊಟ್ಟ ಯಕ್ಷಗಾನ, ಬೊಂಬೆಯಾಟ, ಜೊತೆಗೆ ಭರತನಾಟ್ಯ, ಜಗಜ್ಯೋತಿ ಬಸವೇಶ್ವರ ಮತ್ತು ದಕ್ಷಯಜ್ಞ ನಾಟಕಗಳು ಜಾತ್ರೆಯಲ್ಲಿ ನೆರೆದಿದ್ದ ಜನರಿಗೆ ಮುದ ನೀಡಿದವು.



ಸುತ್ತೂರು ಜಾತ್ರಾ ಮಹೋತ್ಸವಕ್ಕೆ ಮಂಗಳವಾರ ಅದ್ದೂರಿಯಾಗಿ ಚಾಲನೆ ನೀಡಲಾಯಿತು. ಈ ವೇಳೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಎಂಎಲ್‌ಸಿ ಸಿ.ಎನ್.ಮಂಜೇಗೌಡ ಇನ್ನಿತರರಿದ್ದರು.



ಇದಕ್ಕೂ ಮುನ್ನಾ ಕರ್ತೃ ಗದ್ದಿಗೆಯಲ್ಲಿ ಪ್ರಾತಃಕಾಲ 4 ಗಂಟೆಗೆ ಅನುಜ್ಞ, ಮಹಾ ಸಂಕಲ್ಪ ಪೂರ್ವಕ ಮಹಾ ರುದ್ರಾಭಿಷೇಕ, ಬೆಳಗ್ಗೆ 6.30ಕ್ಕೆ ಗ್ರಾಮದ ದೇವಸ್ಥಾನದಲ್ಲಿ ವಿಶೇಷ ಪೂಜೆ, ಸಣ್ಣ ಮಲ್ಲಿಪುರ ಸ್ನೇಹ ಸೌಹಾರ್ದ ಶಾಂತಿ ಪ್ರಾರ್ಥನಾ ಪಥ ಸಂಚಲನ ನೆರವೇರಿತು. ಬೆಳಗ್ಗೆ 7.30ಕ್ಕೆ ಕಸುವಿನಹಳ್ಳಿ ಗ್ರಾಮದ ಶ್ರೀಮೊರಂಬಾಳು ಗಂಗಾಧರೇಶ್ವರ ಪಟ್ಟದ ಮಠದ ಶಿವ ಕುಮಾರ ಸ್ವಾಮೀಜಿ ಶಟ್‌ಸ್ಥಲ ಧ್ವಜಾ ರೋಹಣ ನೆರವೇರಿಸಿದರು. ಅಲ್ಲದೆ ವಿಜಯಪುರ ಜಿಲ್ಲೆ ಅಥರ್ಗಾ ಗುರು ದೇವಾಶ್ರಮದ ಶ್ರೀಈಶಪ್ರಸಾದ ಸ್ವಾಮೀಜಿ ಧರ್ಮ ಸಂದೇಶ ನೀಡಿದರು. ನಂತರ ಬೆಳಗ್ಗೆ 8ಕ್ಕೆ ಆದಿ ಜಗದ್ಗುರು ಶ್ರೀಶಿವ ರಾತ್ರಿಶ್ವರ ಶಿವಯೋಗಿಗಳವರ ಉತ್ಸವ ಮೂರ್ತಿಗೆ ಅಭಿಷೇಕ ಮತ್ತು ಮಹಾ ಮಂಗಳಾರತಿ ನೆರವೇರಿಸಲಾಯಿತು. ನಂತರ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ಸಂಜೆ 4.30ಕ್ಕೆ ಕಪಿಲಾ ನದಿಯಿಂದ ಹಸು ಕರುವಿನೊಂದಿಗೆ ಅಗ್ರೋದಕವನ್ನು ತಂದು ಮೂಲ ಮಠ ದಿಂದ ಶಿವರಾತ್ರೀಶ್ವರ ಶಿವಯೋಗಿಗಳ ವರ ಉತ್ಸವ ಮೂರ್ತಿಯನ್ನು ಶ್ರೀಮಠ ದಿಂದ ಕರ್ತೃ ಗದ್ದಿಗೆವರೆಗೆ ಛತ್ರಿ ಚಾಮರ ಗಳೊಂದಿಗೆ ಮೆರವಣಿಗೆ ಮೂಲಕ ತರಲಾಯಿತು. ಶಿವ ಗದ್ದುಗೆಯಲ್ಲಿ ಉತ್ಸವ ಮೂರ್ತಿಯನ್ನು 3 ಪ್ರದಕ್ಷಿಣೆ ಹಾಕಿಸಿದ ನಂತರ ಕರ್ತೃ ಗದ್ದುಗೆಯಲ್ಲಿ ಬಿಜ ಯಂಗೈಸಲಾಯಿತು. ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ಸಂಜೆ 6 ಗಂಟೆಗೆ ವೀರಭದ್ರೇಶ್ವರ ಸ್ವಾಮಿ ಕೊಂಡೋತ್ಸವ ವಿಜೃಂಭಣೆ ಯಿಂದ ಜರುಗಿತು. ರಾತ್ರಿ 7 ಗಂಟೆಗೆ ಕರ್ತೃ ಗದ್ದಿಗೆಯಲ್ಲಿ ಪುಣ್ಯಹ, ನಾಂದಿ, ಕಲಶ ಸ್ಥಾಪನೆ ನೆರವೇರಿಸಲಾಯಿತು. ಜಾತ್ರೆ ಮೊದಲ ದಿನವೇ ಸುತ್ತೂರು ಶ್ರೀಕ್ಷೇತ್ರದಲ್ಲಿ ಸಾವಿರಾರು ಜನರಿಗೆ ಮಹಾ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಜನರು ಅತ್ಯಂತ ಉತ್ಸಾಹದಿಂದ ಜಾತ್ರಾ ಮಹೋತ್ಸವದಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು. ನಾಳೆಯಿಂದ ಭಕ್ತಾದಿಗಳ ಸಂಖ್ಯೆಯಲ್ಲಿಯೂ ಹೆಚ್ಚಾ ಗುವ ನಿರೀಕ್ಷೆ ಹೊಂದಲಾಗಿದೆ.

ಬೆಳೆ ಸಮೀಕ್ಷೆಯೊಂದಿಗೆ ದತ್ತಾಂಶ ತಾಳೆಯಾಗದೇ ಮುಂಗಾರು ಹಂಗಾಮಿನ 99 ಅರ್ಜಿಗಳು ತಿರಸ್ಕೃತ: ರೈತರ ಆಕ್ಷೇಪಣೆಗೆ 15 ದಿನ ಕಾಲಾವಕಾಶ

ಮೈಸೂರು, ಫೆ.6(ಎಸ್‌ಪಿಎನ್)– ಪ್ರಧಾನಮಂತ್ರಿ ಫಸಲ್ ಭೀಮಾ ಯೋಜ ನೆಯ 2022ನೇ ಸಾಲಿನ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ದತ್ತಾಂಶ ಗಳನ್ನು ಬೆಳೆ ವಿಮೆ ನೋಂದಣಿ (ಉದ್ದು, ಅಲಸಂದೆ, ಹೆಸರು, ಭತ್ತ, ರಾಗಿ, ಮುಸು ಕಿನ ಜೋಳ, ನೆಲಗಡಲೆ)ಯಾಗಿರುವ ಅರ್ಜಿಗಳೊಂದಿಗೆ ಪರಿಶೀಲಿಸಿದಾಗ ಬೆಳೆ ಸಮೀಕ್ಷೆಯೊಂದಿಗೆ ದತ್ತಾಂಶ ತಾಳೆಯಾ ಗದೇ ಮುಂಗಾರು ಹಂಗಾಮಿನ 99 ಅರ್ಜಿಗಳು ತಿರಸ್ಕೃತಗೊಂಡಿದ್ದು, ಆಕ್ಷೇ ಪಣೆಗೆ ರೈತರಿಗೆ 15 ದಿನ ಕಾಲಾವಕಾಶ ನೀಡಲಾಗಿದೆ. ಪ್ರಸ್ತುತ ತಿರಸ್ಕೃತಗೊಂಡ ಅರ್ಜಿಗಳನ್ನು ಸಹಾಯಕ ಕೃಷಿ ನಿರ್ದೇ ಶಕ ಕಚೇರಿ, ಹೋಬಳಿ ಮಟ್ಟದ ರೈತ ಸಂಪರ್ಕ ಕೇಂದ್ರ, ಗ್ರಾಪಂ ಕಚೇರಿಗಳ ಸೂಚನಾ ಫಲಕಗಳಲ್ಲಿ ಸಹಾಯಕ ನಿರ್ದೇ ಶಕರು ಸೂಚಿಸಿದ್ದು, ಬೆಳೆ ವಿಮಾ ಅರ್ಜಿ ತಿರಸ್ಕೃತಗೊಂಡ ಬಗ್ಗೆ ರೈತರಿಂದ ಆಕ್ಷೇಪಣೆ ಗಳು ಇದ್ದಲ್ಲಿ, 2022–23ರಲ್ಲಿ ಬೆಳೆ ವಿಮೆಗೆ ನೋಂದಾಯಿಸಿದ ಬೆಳೆ ದಾಖಲಾಗಿರುವ ಪಹಣಿ ಪತ್ರಿಕೆ, ಬೆಂಬಲ ಬೆಲೆ, ಪ್ರಯೋ ಜನ ಪಡೆದಿದ್ದಲ್ಲಿ ಅದರ ರಶೀದಿ ಎಪಿಎಂಸಿ ಮಾರುಕಟ್ಟೆಗೆ ಸಲ್ಲಿಸಬೇಕು.

ಅಧಿಕ ಹಣ ಸಂಪಾದನೆ ಅತಿಯಾಸೆಯಿಂದ 42 ಲಕ್ಷ ಹಣ ಕಳೆದುಕೊಂಡ ಮೈಸೂರು ಮಹಿಳೆ!

ಮೈಸೂರು, ಫೆ.6– ಕಡಿಮೆ ಅವಧಿ ಯಲ್ಲಿ ಹೆಚ್ಚು ಆದಾಯದ ಆಸೆ ಹುಟ್ಟಿಸಿ ಹಣ ದೋಚುವ ಪ್ರಕರಣಗಳು ನಿರಂತರ ವಾಗಿ ನಡೆದಿದ್ದು, ಹೀಗೆಯೇ ಮೈಸೂರಿನ ಮಹಿಳೆಯೊಬ್ಬರು ಸುಮಾರು 42 ಲಕ್ಷ ರೂ. ಹಣ ಕಳೆದುಕೊಂಡಿದ್ದಾರೆ.

ಇಲ್ಲಿನ ಚಾಮರಾಜಪುರಂ ನಿವಾಸಿ ಸಂಗೀತಾ ಹಣ ಕಳೆದುಕೊಂಡವರು. ಆನ್‌ಲೈನ್ ಬ್ಯುಸಿನೆಸ್ ನೆಪದಲ್ಲಿ ಇವರನ್ನು ಖದೀಮರು ವಂಚಿಸಿದ್ದಾರೆ. ಟೆಲಿಗ್ರಾಂ ಮೂಲಕ ಪರಿಚಯ ಮಾಡಿಕೊಂಡ ವಂಚಕನೊಬ್ಬ ಆನ್‌ಲೈನ್ ವ್ಯವಹಾರ ಮಾಡುವುದಾಗಿ ಸಂಗೀತಾ ಅವರನ್ನು ನಂಬಿಸಿದ್ದ. ಆತನ ನಾಜೂಕಾದ ಮಾತು ಗಳನ್ನು ಸತ್ಯವೆಂದು ನಂಬಿದ ಸಂಗೀತಾ ಅವರು, ಹಂತ ಹಂತವಾಗಿ ಒಟ್ಟು 42.80 ಲಕ್ಷ ನೀಡಿದ್ದಾರೆ. ನಂತರದಲ್ಲಿ ಆತ ವಂಚಕ ಎನ್ನುವುದು ಗೊತ್ತಾಗಿ, ಗೋಳಿಟ್ಟಿದ್ದಾರೆ. ಈ ಸಂಬಂಧ ನಗರದ ಸೆನ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ವಂಚಕನ ಪತ್ತೆಗೆ ಪೊಲೀಸರು ಕ್ರಮ ವಹಿಸಿದ್ದಾರೆ.



ರೆಸಾರ್ಟ್ ಅಂಡ್ ಜಂಗಲ್ ಲಾಡ್ಜಸ್‌ನ ನೂತನ ಅಧ್ಯಕ್ಷರಾಗಿ ಎಚ್.ಡಿ. ಕೋಟೆ ಶಾಸಕ ಅನಿಲ್ ಚಿಕ್ಕಮಾದು ಜವಾಬ್ದಾರಿ ವಹಿಸಿಕೊಂಡ ಸಂದರ್ಭದಲ್ಲಿ ಶಾಸಕರಾದ ಡಿ.ರವಿಶಂಕರ್, ಕೆ. ಹರೀಶ್‌ಗೌಡ, ಮೈಮುಲ್ ನಿರ್ದೇಶಕ ಈರೇಗೌಡ, ಮಾಜಿ ಜಿಲ್ಲಾ ಪಂಚಾಯತ್ ಸದಸ್ಯ ಪಿ.ರವಿ, ಮೈಸೂರು ಜಿಲ್ಲಾ ಕುರುಬರ ಸಂಘದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ ಅವರನ್ನು ಅಭಿನಂದಿಸಿದರು.

ಆದರ್ಶ ವಿದ್ಯಾಲಯಗಳಲ್ಲಿ ಪಿಯು ಕಾಲೇಜು ಆರಂಭ

ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ಘೋಷಣೆ



ಮೈಸೂರು,ಫೆ.6 (ಪಿಎಂ)– ಆದರ್ಶ ವಿದ್ಯಾಲಯಗಳನ್ನು ಮೇಲ್ದರ್ಜೆಗೇರಿಸಿ, ಪಿಯು ಕಾಲೇಜು ಆರಂಭಿಸಲಾಗುವುದು ಎಂದು ಪ್ರಾಥ ಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದರು.

ಮೈಸೂರಿನ ಜಿಪಂ ಸಭಾಂಗಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಇಲಾಖಾ ಪ್ರಗತಿ ಪರಿಶೀಲನಾ ಸಭೆ ಯಲ್ಲಿ ಮಾತನಾಡಿದ ಅವರು, ಆದರ್ಶ ವಿದ್ಯಾಲಯಗಳಲ್ಲಿ ಪದವಿಪೂರ್ವ ಕಾಲೇಜು ಆರಂಭಿಸುವ ಸಂಬಂಧ ಅಗತ್ಯವಿರುವ ಅನುದಾನ ಕೂಡ ಒದಗಿ ಸಲು ಎಲ್ಲಾ ಸಿದ್ಧತೆ ಮಾಡಿಕೊಳ್ಳ ಲಾಗುತ್ತಿದೆ ಎಂದು ಹೇಳಿದರು.

ಎರಡೂ ಜಿಲ್ಲೆಗಳಲ್ಲಿ ಶಾಲೆಗಳಿಂದ ಮಕ್ಕಳು ಹೊರಗುಳಿಯುವುದು ಶೂನ್ಯಕ್ಕೆ ಇಳಿಸಬೇಕು. ಸರ್ಕಾರಿ ಶಾಲಾ– ಕಾಲೇಜುಗಳಿಗೆ ವಿದ್ಯುತ್ ಮತ್ತು ನೀರು ಉಚಿತಗೊಳಿಸಿದ್ದು, ಉಚಿತ ವಿದ್ಯುತ್ ಸೌಲಭ್ಯ ಬಳಸಿಕೊಂಡು ಸಂಜೆ ವೇಳೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲು ಕ್ರಮ ವಹಿಸಬೇಕು. ಆ ಮೂಲಕ ಶೈಕ್ಷಣಿಕವಾಗಿ ಉತ್ಕೃಷ್ಟತೆಯನ್ನು ಹೊಂದಿ ರುವ ನಮ್ಮ ಸರ್ಕಾರಿ ಶಾಲಾ ಶಿಕ್ಷಕರನ್ನು ಸದ್ಬಳಕೆ ಮಾಡಿಕೊಂಡು ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಮುಂದಾಗಬೇಕು. ಈ ಸಂಬಂಧ ಡಿಡಿಪಿಐ ಮತ್ತು ಜಿಪಂ ಸಿಇಓ ಕ್ರಮ ವಹಿಸಬೇಕೆಂದು ಸೂಚನೆ ನೀಡಿದರು.

ವಾರದಲ್ಲಿ 3 ದಿನ ವಿಶೇಷ ತರಗತಿ: ಎಸ್‌ಡಿಎಂಸಿ ಸದಸ್ಯರು, ಶಿಕ್ಷಕರು ಹಾಗೂ ಅಧಿಕಾರಿಗಳು ಸಮಾಲೋಚಿಸಿ ವಾರದಲ್ಲಿ ಕನಿಷ್ಠ ಮೂರು ದಿನಗಳು ವಿಶೇಷ ತರಗತಿ ತೆಗೆದುಕೊಳ್ಳಲು ಕ್ರಮ ವಹಿಸಬೇಕು. ಎಲ್ಲೆಲ್ಲಿ ಕಂಪ್ಯೂಟರ್ ಬಳಕೆ ಮಾಡುತ್ತಿಲ್ಲವೋ ಅಲ್ಲೆಲ್ಲ ಅವು ಗಳನ್ನು ವಿದ್ಯಾರ್ಥಿಗಳ ಬಳಕೆಗೆ ಮುಕ್ತ ಗೊಳಿಸಬೇಕು. ಒಂದೇ ಇದ್ದರೂ ಬಳಸಿ ಕೊಂಡು ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ನೀಡಬೇಕು ಎಂದರು.

ಅಗತ್ಯವಿದ್ದರೆ ಕ್ಲಸ್ಟರ್ ಮಾಡಿ: ಮಲೆ ನಾಡು ಭಾಗದಲ್ಲಿ ಒಂದು ಶಾಲೆಯಲ್ಲಿ ಕೆಲವೇ ವಿದ್ಯಾರ್ಥಿಗಳು ಮಾತ್ರವೇ ಇರುವುದೂ ಇದೆ. ಕೇವಲ 10 ಮಕ್ಕಳು ಇರುವ ಶಾಲೆಗಳು ಸಾವಿರಾರು ಸಂಖ್ಯೆಯಲ್ಲಿವೆ. ಈ ರೀತಿಯಾದರೆ ಅಲ್ಲಿ ತರಗತಿಯ ವಾತಾವರಣ ಇರುವುದಿಲ್ಲ. ಅದೇ ಪರಿಸ್ಥಿತಿ ಇಲ್ಲಿಯೂ ಇದ್ದರೆ ಕ್ಲಸ್ಟರಿಂಗ್ ಮಾಡಬೇಕು. ಅದರಿಂದ ವಿದ್ಯಾರ್ಥಿಗಳಿಗೆ ಶಿಕ್ಷಕರ ಕೊರತೆಯೂ ನೀಗಲಿದೆ. ಪ್ರಸ್ತುತ 43 ಸಾವಿರ ಶಿಕ್ಷಕರ ಕೊರತೆ ಇದ್ದು, ಈ ರೀತಿಯ ಕ್ರಮದಿಂದ ಈ ಸಮಸ್ಯೆಗೆ ಬಹುತೇಕ ಪರಿಹಾರ ದೊರೆಯಲಿದೆ. ಇಲ್ಲಿ ಅಗತ್ಯವಿದ್ದರೆ ಆಯಾಯ ಕ್ಷೇತ್ರದ ಶಾಸಕರೊಂದಿಗೆ ಚರ್ಚಿಸಿ ಮುಂದುವರೆಯಿರಿ. ಯಾವುದೇ ಪಕ್ಷದ ಶಾಸಕರಾದರೂ ಸರಿಯೇ ಅವರ ಗಮನಕ್ಕೆ ತರದೇ ಕ್ಲಸ್ಟರ್ ಮಾಡಬಾರದು ಎಂದು ನಿರ್ದೇಶನ ನೀಡಿದರು.

ಅಡ್ಡದಾರಿಯಲ್ಲಿ ಕೆಲ ಶಿಕ್ಷಕರು: ಶಾಲೆ ಯಲ್ಲಿ ಕೆಲವೇ ವಿದ್ಯಾರ್ಥಿಗಳು ಇರುವ ಪರಿಸ್ಥಿತಿಯನ್ನು ದುರ್ಬಳಕೆ ಮಾಡಿ ಕೊಳ್ಳುವ ಶಿಕ್ಷಕರೂ ಕೆಲವರು ಇದ್ದಾರೆ. ಕೆಲ ಶಿಕ್ಷಕರು ತಮ್ಮ ಸಂಬಳದಲ್ಲಿ ಬಡ್ಡಿ ವ್ಯವಹಾರ ಮಾಡಿ, ರಿಯಲ್ ಎಸ್ಟೇಟ್ ಮಾಡಿಕೊಂಡು ತಾವೇ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳುತ್ತಾರೆ. ನನ್ನ ಇಲಾಖೆಯಲ್ಲಿ ಇದು ಆಗುತ್ತಿದ್ದು, ಇದನ್ನು ಸಂಪೂರ್ಣವಾಗಿ ನಿಲ್ಲಿಸಿಯೇ ತೀರುತ್ತೇನೆ ಎಂದು ಎಚ್ಚರಿಕೆ ನೀಡಿದರು.

15 ದಿನಗಳೊಳಗೆ ವರದಿ ನೀಡಬೇಕು: ಮುಂದಿನ 15 ದಿನಗಳ ಒಳಗೆ ಸಂವಿಧಾನ ಪೀಠಿಕೆ ವಾಚನ, ವಿಶೇಷ ತರಗತಿ ಕಾರ್ಯ ಗತಗೊಳಿಸಿರುವ ಬಗ್ಗೆ ವಿಡಿಯೋ ಸಮೇತ ವರದಿಯನ್ನು ಸಿಇಓ ಮೂಲಕ ಇಲಾಖೆಗೆ ಕಳುಹಿಸಬೇಕೆಂದು ಎಸ್.ಮಧು ಬಂಗಾರಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಂವಿಧಾನ ಪೀಠಿಕೆ ವಾಚಿಸದಿದ್ದರೆ ಕ್ರಮ: ಶಾಲಾ ಅಸೆಂಬ್ಲಿಯಲ್ಲಿ ವಿದ್ಯಾರ್ಥಿ ಗಳು ಪ್ರತಿನಿತ್ಯ ಭಾರತ ಸಂವಿಧಾನದ ಪೀಠಿಕೆ ವಾಚಿಸಬೇಕೆಂಬುದನ್ನು ಕಡ್ಡಾಯ ಗೊಳಿಸಲಾಗಿದೆ. ಭೇದಭಾವವನ್ನು ಬುಡಸಮೇತ ಕಿತ್ತೊಗೆಯುವುದು ಇದರ ಉದ್ದೇಶ. ನಾವು ರಾಜಕಾರಣಿಗಳು ಜಾತಿ–ಧರ್ಮದ ಆಧಾರದಲ್ಲಿ ಓಟು ಕೇಳುವುದನ್ನು ಮಾಡಿ ಮಕ್ಕಳ ಮನ ಸ್ಥಿತಿಯೂ ಹಾಳಾಗುತ್ತಿದೆ. ಇದನ್ನು ಹೋಗಲಾಡಿಸಲು ಸಂವಿಧಾನ ಪೀಠಿಕೆ ವಾಚನಕ್ಕೆ ಕ್ರಮ ವಹಿಸಿದ್ದೇವೆ ಎಂದು ಸಚಿವರು ಹೇಳಿದರು. ನನಗೆ ಶಾಲೆಯಲ್ಲಿ ಕಲಿಸದ ಕಾರಣ ಸತ್ಯವಾಗಲು ಸಂವಿಧಾನ ಪೀಠಿಕೆ ನೋಡದೇ ಹೇಳಲು ನನಗೆ ಬರುವುದಿಲ್ಲ. ಆದರೆ ನಮ್ಮ ಸರ್ಕಾರದ ಕ್ರಮದಿಂದ ಇಂದಿನ ಮಕ್ಕಳು ಅದಾಗಲೇ ಕಲಿಯುತ್ತಿದ್ದಾರೆ. ಇಲ್ಲವಾದರೆ ರಾಜಕಾರಣಿಗಳ ಪರಸ್ಪರ ಟೀಕಾಪ್ರಹಾರಗಳನ್ನು ಮೊಬೈಲ್‌ಗಳಲ್ಲಿ ನೋಡಿ ಅದೇ ರೀತಿಯ ಮನಸ್ಥಿತಿ ಬೆಳೆಸಿಕೊಳ್ಳುವ ಅಪಾಯವಿದೆ ಎಂದರು.

ಪ್ರಣಾಳಿಕೆಯಲ್ಲಿ ಹೇಳಿದಂತೆ ಪಠ್ಯ ಪುಸ್ತಕ ಪರಿಷ್ಕರಣೆ ಮಾಡಿದ್ದೇವೆ. ಇದು ಯಾವುದೇ ಪಕ್ಷದ ಪರ–ವಿರೋಧದ ನಡೆಯಲ್ಲ. ನನ್ನ ಇಲಾಖೆಯಡಿ 1 ಕೋಟಿ 20 ಲಕ್ಷ ಮಕ್ಕಳು ಶಿಕ್ಷಣ ಕಲಿಯುತ್ತಿದ್ದು, ದೇವರ ಸ್ಥಾನದಲ್ಲಿರುವ ಈ ಮಕ್ಕಳಿಗೆ ಅನ್ಯಾಯ ಆಗಬಾರದು ಎಂಬ ದೃಷ್ಟಿಯಲ್ಲಿ ಈ ಕ್ರಮ ವಹಿಸ ಲಾಗಿದೆ. ಇದರಲ್ಲಿ ಯಾವುದೇ ರಾಜ ಕೀಯ ಉದ್ದೇಶವಿಲ್ಲ ಎಂದು ತಿಳಿಸಿ ದರು. 'ನಮ್ಮ ಶಾಲೆ ನಮ್ಮ ಜವಾಬ್ದಾರಿ ಕಾರ್ಯಕ್ರಮ'ದಡಿ ರಾಜ್ಯದ ಸರ್ಕಾರಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿ ಗಾಗಿ ಆಯಾಯ ಶಾಲೆಗಳ ಹಳೇ ವಿದ್ಯಾರ್ಥಿಗಳ ಸಂಘಗಳನ್ನು ರಚಿಸಬೇಕು. ಆ ಮೂಲಕ ಆಸಕ್ತರ ನೆರವಿನೊಂದಿಗೆ ಶಾಲೆಯ ಅಭಿವೃದ್ಧಿಗೆ ಕ್ರಮ ವಹಿಸಬೇಕು ಎಂದು ಸಚಿವರು ಸಲಹೆ ನೀಡಿದರು.

ಮೈಸೂರು ಜೈಲ್ ಮೇಲೆ ದಿಢೀರ್ ದಾಳಿ: ಸಿಮ್ ಕಾರ್ಡ್ ಸೇರಿ ಹಲವು ಪದಾರ್ಥ ವಶ

ಜೈಲಿನಿಂದಲೇ 'ಡೀಲ್' ನಡೆಯುತ್ತಿರುವ ಬಗ್ಗೆ ಕ್ಷಿಪ್ರ ಕಾರ್ಯಾಚರಣೆ

ಮೈಸೂರು, ಫೆ.6(ಎಸ್‌ಬಿಡಿ)– ಮೈಸೂರು ನಗರ ಪೊಲೀಸರು ಇಲ್ಲಿನ ಕೇಂದ್ರ ಕಾರಾಗೃಹದ ಮೇಲೆ ಮಂಗಳವಾರ ದಿಢೀರ್ ದಾಳಿ ನಡೆಸಿ, ಮೊಬೈಲ್ ಸಿಮ್ ಇನ್ನಿತರ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶದಂತೆ ಡಿಸಿಪಿಗಳಾದ ಎಂ.ಮುತ್ತು ರಾಜ್ ಹಾಗೂ ಎಸ್.ಜಾಹ್ನವಿ ನೇತೃತ್ವ ದಲ್ಲಿ ಕೇಂದ್ರ ಕಾರಾಗೃಹದ ಮೇಲೆ ದಾಳಿ ನಡೆಸಿ, ಕಾರಾಗೃಹದ ಹೊರ ಹಾಗೂ ಒಳ ಆವರಣ, ಇಲ್ಲಿನ ವಾಸಿಗಳ ಬ್ಯಾರಕ್ ಗಳು, ಶೌಚಾಲಯಗಳು, ಅಡುಗೆ ಕೋಣೆ ಸೇರಿದಂತೆ ಎಲ್ಲಾ ಕಡೆ ತೀವ್ರ ತಪಾಸಣೆ ನಡೆಸಲಾಯಿತು. ಈ ವೇಳೆ ಒಂದು ಸಿಮ್, ಚಾಕು, ಒಂದಷ್ಟು ಹಣ, ಮೊಬೈಲ್ ಚಾರ್ಜರ್‌ಗಳು ಪತ್ತೆಯಾಗಿದ್ದು, ಈ ಸಂಬಂಧ ಕಾನೂನು ಕ್ರಮ ಕೈಗೊಳ್ಳ ಲಾಗುತ್ತಿದೆ. ಆದರೆ ಗಾಂಜಾ ಸೇರಿದಂತೆ ಯಾವುದೇ ಮಾದಕ ವಸ್ತುಗಳು, ದೊಡ್ಡ ಮಾರಕಾಸ್ತ್ರಗಳು ಪತ್ತೆಯಾಗಿಲ್ಲ.

ಐದು ತಂಡ: ಡಿಸಿಪಿಗಳ ಮಾರ್ಗ ದರ್ಶನದಲ್ಲಿ ಎಸಿಪಿಗಳಾದ ದೇವರಾಜ ಉಪ ವಿಭಾಗದ ಶಾಂತಮಲ್ಲಪ್ಪ, ವಿಜಯ ನಗರ ಉಪ ವಿಭಾಗದ ಗಜೇಂದ್ರ ಪ್ರಸಾದ್, ನರಸಿಂಹರಾಜ ಉಪ ವಿಭಾಗದ ಸುಧಾಕರ್, ಕೃಷ್ಣರಾಜ ಉಪ ವಿಭಾಗದ ರಮೇಶ್ ಕುಮಾರ್ ಹಾಗೂ ಸಿಎಆರ್ ಎಸಿಪಿ ಜಯರಾಮು ನೇತೃತ್ವದ ಐದು ತಂಡಗಳು ಏಕಕಾಲಕ್ಕೆ ಇಡೀ ಕಾರಾಗೃಹ ವನ್ನು ಜಾಲಾಡಿದವು. ವಿವಿಧ ಠಾಣೆಗಳ ಇನ್ಸ್‌ಪೆಕ್ಟರ್‌ಗಳು, ಸಬ್ ಇನ್ಸ್‌ಪೆಕ್ಟರ್‌ಗಳು, ಕಮಾಂಡೋ ಪಡೆ ಹಾಗೂ ಸಿಬ್ಬಂದಿ ತಂಡಗಳಲ್ಲಿದ್ದರು. ಶ್ವಾನದಳದ ಮೂಲಕವೂ ಬ್ಯಾರಕ್‌ಗಳು ಸೇರಿದಂತೆ ಎಲ್ಲಾ ಕಡೆ ಯಲ್ಲೂ ತಪಾಸಣೆ ನಡೆಸಲಾಯಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮೈಸೂರು ಕೇಂದ್ರ ಕಾರಾಗೃಹದ ಮೇಲೆ ನಗರ ಪೊಲೀಸರು ದಿಢೀರ್ ದಾಳಿ ನಡೆಸಿ, ಪರಿಶೀಲನೆ ನಡೆಸಿದರು.

ಜೈಲಲ್ಲಿ ಸಿಮ್!: ಕಾರಾಗೃಹದಲ್ಲಿ ಸಿಮ್ ಪತ್ತೆಯಾಗಿರುವುದು ಗಂಭೀರ ಸಂಗತಿಯಾಗಿದೆ. ಕಾರಾಗೃಹ ವಾಸಿಗಳಿಗೆ ಹೊರಗಿನ ಸಂಪರ್ಕ ಲಭ್ಯವಾಗದಂತೆ ತೀವ್ರ ಕಟ್ಟೆಚ್ಚರ ವಹಿಸಿದ್ದರೂ ಅಲ್ಲಿ ಸಿಮ್ ಸಿಕ್ಕಿದ್ದು ಹೇಗೆ ಎಂಬುದು ಆತಂಕಕಾರಿ ಸಂಗತಿ. ಕೆಲ ಜೈಲುಗಳಲ್ಲಿ ಅಪರಾಧಿಗಳು ಒಳಗಿದ್ದುಕೊಂಡೇ ಹೊರಗೆ ಡೀಲ್ ನಡೆಸು ರುವುದೂ ವರದಿಯಾಗಿದೆ ಇದೀಗ ಮೈಸೂರು ಜೈಲಿನಲ್ಲಿ ಪತ್ತೆಯಾಗಿರುವ ಸಿಮ್‌ನ ಜಾಡು ಹಿಡಿದು ಪರಿಶೀಲಿಸಲು ಪೊಲೀಸರು ಮುಂದಾಗಿದ್ದಾರೆ. ಸಿಮ್, ಚಾರ್ಜರ್‌ಗಳು ಪತ್ತೆಯಾಗಿವೆ ಎಂದಾದರೆ ಮೊಬೈಲ್ ಕೂಡ ಇರಬಹುದು. ದಾಳಿ ಸಂದರ್ಭದಲ್ಲೇ ಯಾರಿಗೂ ತಿಳಿಯದಂತೆ ಅದನ್ನು ನಾಶ ಪಡಿಸಿರಬಹುದು. ಇದೆಲ್ಲವೂ ತನಿಖೆ ಯಿಂದ ತಿಳಿಯಬೇಕಿದೆ.

ಕೇಸ್ ದಾಖಲಿಸುತ್ತೇವೆ

ಮೈಸೂರು ಕಾರಾಗೃಹದಲ್ಲಿ ದಿಢೀರ್ ತಪಾಸಣೆ ನಡೆಸಿದಾಗ ಸಿಮ್ ಪತ್ತೆಯಾಗಿದ್ದು, ಆ ಬಗ್ಗೆ ಕೇಸ್ ದಾಖಲಿಸಲಾಗುವುದು. ಸಿಮ್ ಜೈಲಿ ನೊಳಗೆ ಹೋಗಿದ್ದೇಗೆ? ಅದನ್ನು ಯಾರು ಬಳಸುತ್ತಿದ್ದರು? ಎಂದು ವಿಚಾರಣೆ ನಡೆಸಲಾಗುವುದು. ಬಾತ್ ರೂಂ ಬಳಿ ಎರಡು ಸಣ್ಣ ಚಾಕು ಸಿಕ್ಕಿವೆ. ಆದರೆ ಬ್ಯಾರಕ್‌ನಲ್ಲಿ ಯಾವುದೇ ಮಾರಕಾಸ್ತ್ರ ಸಿಕ್ಕಿಲ್ಲ. ನಮ್ಮ ಅಧಿಕಾರಿಗಳು ಏಕಕಾಲಕ್ಕೆ ಪರಿಶೀಲನೆ ನಡೆಸಿದ್ದು, ಗಾಂಜಾ ಇನ್ನಿತರ ಯಾವುದೇ ಮಾದಕ ವಸ್ತುಗಳು ಪತ್ತೆಯಾಗಿಲ್ಲ.



–ಬಿ.ರಮೇಶ್, ನಗರ ಪೊಲೀಸ್ ಆಯುಕ್ತರು

ಸುತ್ತೂರು ಜಾತ್ರೆ ಜನರ ಅರಿವಿನ ಜಾತ್ರೆಯಾಗಿದೆ

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್

ನಂಜನಗೂಡು, ಫೆ.6– ಸುತ್ತೂರು ಜಾತ್ರೆಯಲ್ಲಿ ಸಾಮಾಜಿಕ, ಶೈಕ್ಷಣಿಕ, ಕೃಷಿ, ಆರೋಗ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಆದ ಹೊಸ ಆವಿಷ್ಕಾರಗಳ ಬಗ್ಗೆ ಜನರಿಗೆ ಅರಿವು ಮೂಡಿಸುತ್ತಿರುವ ಕಾರಣ ಇಡೀ ರಾಜ್ಯದಲ್ಲೇ ಸುತ್ತೂರು ಜಾತ್ರಾ ಮಹೋತ್ಸವ ಮಹತ್ವ ಪಡೆದಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಶ್ರೀಕ್ಷೇತ್ರ ಸುತ್ತೂರಿನಲ್ಲಿ ನಡೆಯುತ್ತಿರುವ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವ ಯೋಗಿಗಳ ಜಾತ್ರಾ ಮಹೋತ್ಸವದಲ್ಲಿ ವಸ್ತು ಪ್ರದರ್ಶನ, ಕೃಷಿ ಮೇಳ, ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಆಹಾರ ಮತ್ತು ಆರೋಗ್ಯಕ್ಕೆ ನೇರ ಸಂಬಂಧವಿದ್ದು, ಆಹಾರದ ಪದ್ಧತಿಗಳು ಉತ್ತಮವಾಗಿದ್ದರೆ ಆರೋಗ್ಯ ಚೆನ್ನಾಗಿರುತ್ತದೆ. ಮನುಷ್ಯನಿಗೆ ಅನೇಕ ರೋಗ ರುಜಿನಗಳು ಬರುತ್ತಿರುವುದು ನಮ್ಮ ಜೀವನ ಶೈಲಿ, ಆಹಾರ ಕ್ರಮದಿಂದ. ಅದನ್ನು ನಿಯಂತ್ರಿಸುವುದು ಬಹಳ ಮುಖ್ಯವಾಗಿದೆ. ಯುವ ಪೀಳಿಗೆಯಲ್ಲಿ ಈ ಬಗ್ಗೆ ಹೆಚ್ಚಿನ ಅರಿವು ಜಾಗೃತಿ ಮೂಡಿಸುವ ಉದ್ದೇಶದಿಂದ ಜಾತ್ರಾ ಮಹೋತ್ಸವದಲ್ಲಿ ಆಹಾರ ಮೇಳ, ಆರೋಗ್ಯ ತಪಾಸಣೆ, ಕೃಷಿ ಮೇಳ ಆಯೋಜಿಸಿ, ಆಧ್ಯಾತ್ಮಿಕ ಸಂದೇಶಗಳನ್ನು ಬಿತ್ತರಿಸಲಾಗುತ್ತಿದೆ ಎಂದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎಸ್.ಮಚ್ಚಾಪುರ ಮಾತನಾಡಿ, ಜಾತ್ರೆಗಳು ಭಾರತೀಯ ಸಂಸ್ಕೃತಿಯ ಪ್ರತೀಕವಾಗಿದ್ದು, ಮನುಷ್ಯ ಆನಂದ ಪಡೆದು ಜೀವನದಲ್ಲಿ ಸಾರ್ಥಕತೆ ಪಡೆಯುವ ಸನ್ನಿವೇಶದ ದಾರಿದೀಪವಾಗಿದೆ ಎಂದರು.



ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಆಯೋಜಿಸಿದ್ದ ಆರೋಗ್ಯ ಶಿಬಿರವನ್ನು ಸಚಿವ ದಿನೇಶ್ ಗುಂಡೂರಾವ್ ಉದ್ಘಾಟಿಸಿದರು.

ಪದ್ಮ ಪ್ರಶಸ್ತಿ ಪುರಸ್ಕೃತ ಪೆರ್ರಿ ಸಿಲ್ವೆನ್ ಫಿಲಿಯೋಜಾಟ್ ಮಾತನಾಡಿ, ಸಂಸ್ಕೃತಕ್ಕೆ ಜಾಗತಿಕ ಮನ್ನಣೆ ಇದ್ದು, ಯುರೋಪಿಯನ್ ರಾಷ್ಟ್ರಗಳಲ್ಲಿ ಹೆಚ್ಚಿನ ಜನಮನ್ನಣೆ ಗಳಿಸಿದೆ. ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳು ಶಿವನ ಕಾಣುವ, ಶಿವನ ಆರಾಧನೆಯ ಪದ್ಧತಿಗಳಾಗಿವೆ. ನಾನು ಶೈವ ಪದ್ಧತಿಯನ್ನು ಹೆಚ್ಚು ಇಷ್ಟ ಪಡುತ್ತೇನೆ. ಆದ್ದರಿಂದಲೇ ಸಂಸ್ಕೃತವನ್ನು ಹೆಚ್ಚು ಇಷ್ಟ ಪಡುತ್ತೇನೆ ಎಂದರು.

ಕನ್ನೇರಿಯ ಸಿದ್ದಗಿರಿ ಸಂಸ್ಥಾನ ಮಠದ ಶ್ರೀಅದೃಶ್ಯ ಕಾಡ ಸಿದ್ದೇಶ್ವರ ಸ್ವಾಮೀಜಿ ಮಾತನಾಡಿ, ದೇವಾಲಯಗಳು, ಶ್ರದ್ಧಾ ಕೇಂದ್ರಗಳು ನಾಡಿನ ಜನರನ್ನು ಒಂದೆಡೆ ಕಟ್ಟಿಹಾಕುವ ಕೇಂದ್ರಗಳಾಗಿದ್ದು ಜಾತ್ರೆಗಳು ಜನರನ್ನು ಒಗ್ಗೂಡಿಸುವ ಕೇಂದ್ರಗಳಾಗಿವೆ. ನಮ್ಮ ದೇಶ, ಸಂಸ್ಕೃತಿ ಗಟ್ಟಿಯಾಗಿ ಉಳಿಯಲು ದೇವಾಲಯಗಳು, ಶ್ರದ್ಧಾ ಕೇಂದ್ರಗಳೇ ಕಾರಣ. ನಮ್ಮ ಹಿರಿಯರು ಜೀವನವನ್ನು ಆನಂದಮಯವಾಗಿಸಲು ತಿಥಿ ಪರ್ವದ ಮೂಲಕ ಉತ್ಸವಗಳನ್ನು, ಸ್ಮೃತಿ ಪರ್ವದ ಮೂಲಕ ಐತಿಹಾಸಿಕ ಘಟನೆಗಳ ಸಂಭ್ರಮವನ್ನು, ರಥ ಪರ್ವದ ಮೂಲಕ ಉಪಾಸನೆಯನ್ನು, ಋತು ಪರ್ವಗಳೆಂಬ ಹಬ್ಬಗಳ ಮೂಲಕ ನಮ್ಮ ಜೀವನ ಶೈಲಿ ಬದಲಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದಾರೆ. ಅವುಗಳಲ್ಲಿ ವೈಜ್ಞಾನಿಕತೆ ಅಡಗಿದೆ. ಶಿಲ್ಪ ಶಾಸ್ತ್ರಗಳಲ್ಲೂ ವಿಜ್ಞಾನ ಅಡಗಿದೆ. ಇದನ್ನು ಅರಿಯದ ಕೆಲವು ವಿದ್ವಾಂಸರೆಂದು ಹೇಳಿಕೊಳ್ಳುವ ಬುದ್ಧಿಜೀವಿಗಳು ದೇವಾಲಯಗಳು ಏಕೆ ಬೇಕು. ಜಾತ್ರೆಗಳು ಏಕೆ ಬೇಕು ಎಂದು ಕತ್ತೆ ಕಿರುಚಿದಂತೆ ಕಿರುಚುತ್ತಿದ್ದಾರೆ ಎಂದರು.

> ಸುತ್ತೂರು ಜಾತ್ರಾ ಮಹೋತ್ಸವದಲ್ಲಿ 2ನೇ ಬಾರಿ ಭಾಗಿಯಾಗಿದ್ದೇನೆ. ವರ್ಷದಿಂದ ವರ್ಷಕ್ಕೆ ಜಾತ್ರೆ ದೊಡ್ಡ ಮಟ್ಟದಲ್ಲಿ ಜರುಗುತ್ತಿದೆ. ಸುತ್ತೂರು ಮಠವು ಚಿಕ್ಕ ಸರ್ಕಾರವೆಂದರೆ ತಪ್ಪಾಗಲಾರದು. ಕೃಷಿ ಸೇರಿದಂತೆ ಎಲ್ಲಾ ರಂಗದಲ್ಲೂ ಜನರಿಗೆ ಅರಿವು ಮೂಡಿಸುತ್ತಾ ಸರ್ಕಾರ ಮಾಡುವ ಕೆಲಸವನ್ನು ಸುತ್ತೂರು ಮಠ ನಿರ್ವಹಿಸುತ್ತಿರುವ ಕಾರಣ ಶ್ರೀ ಮಠವು ರಾಜ್ಯಕ್ಕೆ ಕಿರೀಟದಂತಾಗಿದೆ. ಅಲ್ಲದೇ ಶಾಲಾ ಮಕ್ಕಳ ಪ್ರತಿಭೆಗೆ ಅವಕಾಶ ಕಲ್ಪಿಸುವ ವೇದಿಕೆಯಲ್ಲಿ ನಾನು ಭಾಗಿಯಾಗಿರುವುದು ಸಂತೋಷ ತಂದಿದೆ.
>
> -ಮಧು ಬಂಗಾರಪ್ಪ, ಶಿಕ್ಷಣ ಸಚಿವ

ನಿಂಬಾಳ ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಕೆ.ಸಿ.ಶಿವಪ್ಪ, ಬೆಟಸೂರು ಮಠ್, ಊಟಿ ಶಾಸಕ ಆರ್.ಗಣೇಶ್, ಶ್ರೀಮತಿ ವಸುಂದರಾ ಫಿಲಿಯೋಜಾಟ್, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಜಿ.ಎಲ್.ತ್ರಿಪುರಾಂತಕ ಸ್ವಾಗತ ಕೋರಿದರು. ಸೋಮಶೇಖರ್ ನಿರೂಪಿಸಿದರು.

ಹೆಚ್‌ಡಿಡಿ, ಹೆಚ್‌ಡಿಕೆ ತೋರಿದ ಹಾದಿಯಲ್ಲಿ ನಡೆಯುತ್ತೇನೆ

ಕೆ.ಆರ್.ನಗರ, ಫೆ.6– ನನ್ನಲ್ಲಿರುವ ಸಂಘಟನಾ ಸಾಮರ್ಥ್ಯ ಮತ್ತು ನಾಯಕತ್ವದ ಗುಣ ಮೆಚ್ಚಿ ವರಿಷ್ಠರು ನೀಡಿರುವ ಪದವಿಯನ್ನು ಸಮರ್ಥವಾಗಿ ನಿರ್ವಹಿಸುವ ಮೂಲಕ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ತೋರಿದ ಹಾದಿಯಲ್ಲಿ ನಡೆಯುತ್ತೇನೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.



ಜೆಡಿಎಸ್ ಕಾರ್ಯಾಧ್ಯಕ್ಷರಾಗಿ ನೇಮಕವಾದ ಹಿನ್ನೆಲೆಯಲ್ಲಿ 'ಮೈಸೂರು ಮಿತ್ರ' ನೊಂದಿಗೆ ಮಾತನಾಡಿದ ಅವರು, ನನ್ನನ್ನು ನಂಬಿ ನೀಡಿದ ಅಧಿಕಾರ ಯಶಸ್ವಿಯಾಗಿ ನಿರ್ವಹಿಸುವ ಮೂಲಕ ಪಕ್ಷ ಸಂಘಟನೆ ಹಾಗೂ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಹಾಗೂ ಬಿಜೆಪಿ ಮೈತ್ರಿ ಅಭ್ಯರ್ಥಿಗಳ ಗೆಲುವಿಗೆ ಶ್ರಮಿಸುತ್ತೇನೆ ಆದರೆ ನಾನು ಮೊದಲೇ ಹೇಳಿದಂತೆ ಚುನಾವಣಾ ರಾಜಕೀಯದಿಂದ ದೂರ ಉಳಿಯುತ್ತೇನೆ ಎಂದರು.

ನನ್ನದೇನಿದ್ದರೂ ತತ್ವ ಸಿದ್ಧಾಂತ ನಿಷ್ಠೆ ರಾಜಕಾರಣ. ಅಧಿಕಾರಕ್ಕಾಗಿ ಸಮಯ ಸಾಧಕ ರಾಜಕಾರಣ ಮಾಡುವುದಿಲ್ಲ. ಅದರ ಅಗತ್ಯವೂ ನನಗಿಲ್ಲ. ಲೋಕಸಭಾ ಚುನಾವಣೆಯಲ್ಲಿ ಕ್ಷೇತ್ರ ಹಂಚಿಕೆ ವಿಚಾರದಲ್ಲಿ ಪ್ರಧಾನಿ ಮೋದಿ, ಮಾಜಿ ಪ್ರಧಾನಿ ದೇವೇಗೌಡ, ಮಾಜಿ ಸಿಎಂಗಳಾದ ಕುಮಾರಸ್ವಾಮಿ ಹಾಗೂ ಯಡಿಯೂರಪ್ಪನವರು ಅಂತಿಮ ತೀರ್ಮಾನ ಕೈಗೊಳ್ಳುತ್ತಾರೆ. ಅದಕ್ಕೆ ನಾವೆಲ್ಲಾ ನಾವೆಲ್ಲಾ ಬದ್ಧ ಎಂದರು.

ಎಷ್ಟು ಕ್ಷೇತ್ರ, ಯಾವ ಕ್ಷೇತ್ರ ಎಂದು ನಿಗದಿಯಾಗಿಲ್ಲ: ಕೇವಲ ಪತ್ರಿಕೆಗಳು ಮತ್ತು ದೃಶ್ಯ ಮಾಧ್ಯಮಗಳು, ಸಾಮಾಜಿಕ ಜಾಲತಾಣಗಳಲ್ಲಿ ಮಾತ್ರ ಜೆಡಿಎಸ್‌ಗೆ ಐದಾರು ಕ್ಷೇತ್ರ ಅಥವಾ ಮೈಸೂರು, ಮಂಡ್ಯ, ಹಾಸನ, ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಬೆಂಗಳೂರು ಗ್ರಾಮಾಂತರ ಎಂದು ವರದಿಯಾಗುತ್ತಿದೆ. ಇದೆಲ್ಲಾ ಸತ್ಯಕ್ಕೆ ದೂರವಾದ ವಿಷಯ. ಎಷ್ಟು ಕ್ಷೇತ್ರ, ಯಾವ ಕ್ಷೇತ್ರ ಎಂದು ಇನ್ನೂ ನಿರ್ಣಯವಾಗಿಲ್ಲ. ವರಿಷ್ಠರು ನಿರ್ಣಯದಂತೆ ಕ್ಷೇತ್ರ ಹಂಚಿಕೆಯಾಗಲಿದ್ದು, ಅಭ್ಯರ್ಥಿಗಳನ್ನು ಗೆಲ್ಲಿಸುವ ಜವಾಬ್ದಾರಿ ನಮ್ಮದಾಗಿದೆ ಎಂದರು.

ಕೆಲವರು ತಮ್ಮ ವೈಯಕ್ತಿಕ ಹಿತಾಸಕ್ತಿ, ಅಧಿಕಾರದ ಆಸೆಗಾಗಿ ಈ ಕ್ಷೇತ್ರ ಬಿಟ್ಟು ಕೊಡುವುದಿಲ್ಲ. ಆ ಕ್ಷೇತ್ರ ಬಿಟ್ಟು ಕೊಡುತ್ತೇವೆ ಎಂದು ಹೇಳಿಕೆ ನೀಡುತ್ತಿದ್ದು, ಇದರಿಂದ ಪಕ್ಷದ ವರಿಷ್ಠರಿಗೆ ಬೇಸರವಾಗಿದೆ. ಇದನ್ನೆಲ್ಲಾ ಗಮನಿಸುತ್ತಿರುವ ವರಿಷ್ಠರು ಸೂಕ್ತ ಸಮಯದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತಾರೆ. ಕೇಂದ್ರದಲ್ಲಿ ಮತ್ತೊಮ್ಮೆ ಮೋದಿ ಪ್ರಧಾನಿಯಾಗಬೇಕೆಂಬ ಆಸೆ ಇರುವವರು ಯಾರೂ ಕ್ಷೇತ್ರ ಹಾಗೂ ಅಭ್ಯರ್ಥಿಗಳ ಬಗ್ಗೆ ಚರ್ಚಿಸುವುದಿಲ್ಲ ಎಂದು ಹೆಸರೇಳದೆ ಮಂಡ್ಯದಲ್ಲಿ ಜೆಡಿಎಸ್ ಬಗ್ಗೆ ಹಗುರವಾಗಿ ಮಾತನಾಡಿದ ಮಾಜಿ ಶಾಸಕ ಪ್ರೀತಂ ಗೌಡರಿಗೆ ಟಾಂಗ್ ನೀಡಿದರು.

28 ಕ್ಷೇತ್ರಗಳಲ್ಲೂ ಮೈತ್ರಿ ಅಭ್ಯರ್ಥಿಗಳಿಗೆ ಗೆಲುವು: ಕಾಂಗ್ರೆಸ್ ಆಡಳಿತದಿಂದ ಬೇಸತ್ತಿರುವ ರಾಜ್ಯದ ಜನತೆ ಮುಂಬರುವ ಲೋಕಸಭಾ ಚುನಾವಣೆಯಲ್ಲಿ 28 ಕ್ಷೇತ್ರಗಳಲ್ಲೂ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಲಿದ್ದಾರೆ. ಆ ಮೂಲಕ ರಾಜ್ಯದಲ್ಲಿ ದಾಖಲೆ ನಿರ್ಮಿಸುತ್ತೇವೆ ಎಂದು.

ಹುಣಸೂರು ತಾಲೂಕು ಕಚೇರಿಗೆ ದಿಢೀರ್ ಭೇಟಿ

ಸಿಬ್ಬಂದಿ ತರಾಟೆ ತೆಗೆದುಕೊಂಡ ಸಚಿವ ಕೃಷ್ಣ ಭೈರೇಗೌಡ

ಹುಣಸೂರು, ಫೆ.6– ನಗರದ ತಾಲೂಕು ಕಚೇರಿಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ದಿಢೀರ್ ಭೇಟಿ ನೀಡಿ ಇಲಾಖೆ ಸಿಬ್ಬಂದಿಗೆ ಚುರುಕು ಮುಟ್ಟಿಸಿದರು.

ಈ ವೇಳೆ ಮಾತನಾಡಿದ ಅವರು, ಸಾರ್ವಜನಿಕರಿಗೆ ಕಂದಾಯ ಇಲಾಖೆ ಮೌಲ್ಯಯುತ ಸೇವೆ ಸಲ್ಲಿಸಿ ವಿಶ್ವಾಸ ಗಳಿಸುವ ಬದಲು ಅರ್ಜಿಗಳನ್ನು ವಿಲೆ ಇಟ್ಟು ನಾಗರಿಕರಿಗೆ ಹಿಂಸೆ ನೀಡುವ ಪ್ರವೃತ್ತಿಯಿಂದ ಇಲಾಖೆ ಮೇಲೆ ಅಸಹ್ಯ ಬರುವಂತಾಗಿದೆ ಎಂದು ಗುಡುಗಿದರು.



ಹುಣಸೂರಿನ ತಾಲೂಕು ಕಚೇರಿಗೆ ಸಚಿವ ಕೃಷ್ಣ ಭೈರೇಗೌಡ ಭೇಟಿ ನೀಡಿದರು.

ರಾಜ್ಯ ಸರ್ಕಾರ ಪೌತಿ ಖಾತೆ ಅಭಿಯಾನ ನಡೆಸಿ ಅರ್ಜಿ ಸಲ್ಲಿಸಿದ ನಾಗರಿಕರಿಗೆ ಪೌತಿ ಖಾತೆ ಮಾಡಲು ಕ್ರಮವಹಿಸಲು ಸೂಚಿಸಿದ್ದರೂ ಹುಣಸೂರು ಕೇಂದ್ರದಲ್ಲಿ ಆರಂಭವೇ ಆಗಿಲ್ಲ ಎಂದು ಶಿರಸ್ತೇದಾರ ಶ್ರೀಪಾದ್‌ಗೆ ತರಾಟೆ ತೆಗೆದುಕೊಂಡರು.

ಪೋಡಿ ಆಂದೋಲನಕ್ಕೆ ಪೂರಕವಾಗಿ ಬೇಕಿರುವ ಅಗತ್ಯ ದಾಖಲೆ ಸಿದ್ಧತೆ ಕೈಗೊಂಡು ದುರಸ್ತಿಗೆ ಕಳುಹಿಸಿ ಖಾತೆ ಮಾಡಿಸುವ ಕೆಲಸ ಆಗಬೇಕಿದೆ. ಈ ಕೆಲಸವೂ ನಡೆದಿಲ್ಲ. ಕಚೇರಿಯಲ್ಲಿ ಪ್ರತಿಯೊಬ್ಬರ ಮೇಜಿನ ಮೇಲೆ ಕಡತ ಇಟ್ಟುಕೊಂಡು ಸಾರ್ವಜನಿಕರಿಗೆ ಕೆಲಸ ಮಾಡುತ್ತಿರುವುದಾಗಿ ಬಿಂಬಿಸುತ್ತಿದ್ದೀರಿ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಂದಾಯ ಇಲಾಖೆಗೆ ಬರುವ ಅರ್ಜಿಯನ್ನು ಇ–ಆಫೀಸ್ ಆ್ಯಪ್‌ನಲ್ಲಿ ನೋಂದಣಿ ಮಾಡುವಂತೆ ಸೂಚಿಸಿ ಜಿಲ್ಲಾವಾರು ತರಬೇತಿ ನೀಡಿದ್ದರು ಬಳಸುತ್ತಿಲ್ಲ ಹುಣಸೂರು ಕಂದಾಯ ಇಲಾಖೆಯಲ್ಲಿ ಇ–ಆಫೀಸ್ ಆ್ಯಪ್ ಬಳಸದೆ ಎಷ್ಟು ಅರ್ಜಿಗಳು ಬಂದಿದೆ ಎಂಬುದು ತಿಳಿಯದಾಗಿದೆ ಎಂದರು.

ಇದೇ ವೇಳೆ ಕಂದಾಯ ಇಲಾಖೆಯ ಇ–ಆಫೀಸ್ ವೆಬ್‌ಸೈಟ್ ತೆರೆಯಲು ಸಿಬ್ಬಂದಿಗೆ ಸೂಚಿಸಿದ ಸಚಿವರು, ಕೆಲವು ಸಮಯ ಗುಮಾಸ್ತರೊಂದಿಗೆ ಕಾದು ನಿಂತರಾದರು ವೆಬ್‌ಸೈಟ್ ತೆರೆಯುವಲ್ಲಿ ಸಿಬ್ಬಂದಿ ವೈಫಲ್ಯತೆ ಕಂಡು ಕೆಂಡಾಮಂಡಲವಾದರು. ನಿತ್ಯ ಇ–ಆಫೀಸ್ ಆ್ಯಪ್ ತೆರೆದು ಸ್ವೀಕೃತ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವ ಪರಿಪಾಠ ಅಳವಡಿಸಿಕೊಂಡಿದ್ದರೆ ಕೆಲಸ ನಿರ್ವಹಿಸಲು ಆಗುತ್ತಿತ್ತು ವೆಬ್ ತೆರೆಯಲು ಬಾರದ ನಿಮಗೆ ಸಾರ್ವಜನಿಕರ ಅಹವಾಲು ದಾಖಲಿಸಲು ಬರುವುದಾದರೂ ಹೇಗೆ ? ಎಂದರು.

ಜಿಲ್ಲಾಧಿಕಾರಿಗಳ ಗಮನಕ್ಕೆ ತಂದು ಹುಣಸೂರು ತಾಲೂಕಿನಲ್ಲಿ ಪೌತಿ ಖಾತೆ ಮತ್ತು 1–5 ಅಭಿಯಾನ ನಡೆಸುವಂತೆ ಸೂಚಿಸಿದ್ದೇನೆ ಮುಂದಿನ 15 ದಿನದೊಳಗಾಗಿ ಇಲಾಖೆಯಲ್ಲಿ ಅಭಿಯಾನ ನಡೆದು ಉಪವಿಭಾಗಾಧಿಕಾರಿ ಸಮಗ್ರ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಬರ ಪರಿಹಾರದ ಪಟ್ಟಿಯಲ್ಲಿ ರಾಗಿ ಸೇರ್ಪಡೆ

ಇದೇ ವೇಳೆ ಸಚಿವರು ಪ್ರಶ್ನೆಯೊಂದಕ್ಕೆ ಉತ್ತರಿಸಿ ಬರ ಪರಿಹಾರದ ಪಟ್ಟಿಯಲ್ಲಿ ರಾಗಿ ಕೈ ಬಿಟ್ಟಿಲ್ಲ ರಾಜ್ಯದ ಆದೇಶದಲ್ಲಿ ಕೈ ಬಿಟ್ಟಿದ್ದರೆ ಕೃಷಿ ಸಚಿವಾಲಯದ ಗಮನಕ್ಕೆ ತಂದಲ್ಲಿ ಸೂಕ್ತ ಕ್ರಮ ವಹಿಸುತ್ತೇನೆ. ಸ್ಥಳೀಯವಾಗಿ ಕೈಬಿಟ್ಟಿದಲ್ಲಿ ಜಿಲ್ಲಾಧಿಕಾರಿ ಗಮನಕ್ಕೆ ತಂದು ಸರಿಪಡಿಸಲು ಸೂಚಿಸುತ್ತೇನೆ ಎಂದರು.

ನಾಳೆ ಗ್ರಾಪಂ ಸದಸ್ಯರ ಸಂಘದಿಂದ ಧರಣಿ

ನಂಜನಗೂಡು, ಫೆ.6– ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಫೆ.8ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ರಾಜ್ಯ ಗ್ರಾಪಂ ಸದಸ್ಯರ ಸಂಘದಿಂದ ಧರಣಿ ನಡೆಸಲಾಗುವುದು ಎಂದು ಸಂಘದ ತಾಲೂಕು ಅಧ್ಯಕ್ಷ ಗಿರೀಶ್ ತಿಳಿಸಿದರು. ನಗರದ ಪತ್ರಕರ್ತರ ಭವನದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಕೇರಳ ಮಾದರಿ ಗ್ರಾಪಂ ಅಧ್ಯಕ್ಷರಿಗೆ 15 ಸಾವಿರ, ಸದಸ್ಯರಿಗೆ 10 ಸಾವಿರ ಗೌರವ ಧನ ನಿಗದಿ ಮಾಡಬೇಕು. ಬಸ್‌ಪಾಸ್, ಆರೋಗ್ಯ ವಿಮೆ, ಪಿಂಚಣಿ ಸೌಲಭ್ಯ ಸೇರಿದಂತೆ ನಮ್ಮ 30 ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಧರಣಿ ನಡೆಸಲಾಗುವುದು ಎಂದರು.



ಸರ್ಕಾರ ಗ್ರಾಪಂ ಸದಸ್ಯರ ಹಕ್ಕುಗಳನ್ನು ಮೊಟಕುಗೊಳಿಸುತ್ತಿದೆ. ಗ್ರಾಪಂಗಳ ಆಡಳಿತ ಸಂಪೂರ್ಣವಾಗಿ ಸರ್ಕಾರದ ಹಾಗೂ ಅಧಿಕಾರಿಗಳ ಅಧೀನದಲ್ಲಿದೆ. ನಿರ್ದಿಷ್ಟ ಕಾಲಮಿತಿಯಲ್ಲಿ ಇ–ಸ್ವತ್ತು ಆಂದೋಲನ ನಡೆಸುವ ಮೂಲಕ ತೆರಿಗೆ ವ್ಯಾಪ್ತಿಗೆ ಒಳಪಟ್ಟ ಎಲ್ಲಾ ಆಸ್ತಿಗಳ ಇ–ಸ್ವತ್ತು ದಾಖಲೆ ಸೃಜಿಸಿ ವಿತರಿಸಬೇಕು ಎಂದು ಆಗ್ರಹಿಸಿದರು. ನೇರಳೆ ಗ್ರಾಪಂ ಅಧ್ಯಕ್ಷ ಗಿರೀಶ್ ಮಾತನಾಡಿದರು.ಸುದ್ದಿಗೋಷ್ಠಿಯಲ್ಲಿ ಗ್ರಾಪಂ ಸದಸ್ಯರಾದ ಪರಶಿವಮೂರ್ತಿ, ಮಹದೇವನಾಯಕ, ಅವಿನಾಶ್ ಉಪಸ್ಥಿತರಿದ್ದರು.

ಹಲ್ಲರೆ ಘಟನೆ ಖಂಡಿಸಿ ನಾಯಕ ಸಂಘದಿಂದ ಪ್ರತಿಭಟನೆ

ನಂಜನಗೂಡು, ಫೆ.6– ಇತ್ತೀಚೆಗೆ ತಾಲೂಕಿನ ಹಲ್ಲರೆಯಲ್ಲಿ ನಡೆದ ಘರ್ಷಣೆ ಖಂಡಿಸಿ ನಗರದ ತಾಲೂಕು ಕಚೇರಿ ಎದುರು ಮಂಗಳವಾರ ತಾಲೂಕು ನಾಯಕರ ಸಂಘದಿಂದ ಪ್ರತಿಭಟನೆ ನಡೆಸಲಾಯಿತು.

ನಾಯಕ ಸಂಘದ ಗೌರವಾಧ್ಯಕ್ಷ ಚಿಕ್ಕರಂಗನಾಯಕ ಮಾತನಾಡಿ, ಸಂಘವು ಹಲ್ಲರೆ ಘಟನೆ ಖಂಡಿಸುತ್ತದೆ. ಗ್ರಾಮದಲ್ಲಿ ಸಹೋದರರಂತೆ ಬದುಕುತ್ತಿದ್ದ ಪರಿಶಿಷ್ಟ ಜಾತಿ, ಪಂಗಡ ಸಮುದಾಯದ ನಡುವೆ ಅಂಬೇಡ್ಕರ್ ನಾಮಫಲಕ ನೆಡುವ ವಿಚಾರದಲ್ಲಿ ಪ್ರಚೋದನೆ ನೀಡಿ ಗಲಭೆಗೆ ಕಾರಣರಾದ ಹೊರಗಿನ ಕಿಡಿಗೇಡಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ನಾಮಫಲಕ ನೆಡುವ ವಿಚಾರವಾಗಿ ಗ್ರಾಪಂ ಸದಸ್ಯರ ಗಮನಕ್ಕೆ ತರದೆ ಏಕಪಕ್ಷೀಯವಾಗಿ ನಿರ್ಣಯ ಕೈಗೊಳ್ಳಲಾಗಿದೆ. ಹೊರಗಡೆಯಿಂದ ಗ್ರಾಮಕ್ಕೆ ಬಂದ ಜನ ಪ್ರಚೋದನೆ ನೀಡಿ ಗಲಭೆಗೆ ಕಾರಣರಾಗಿದ್ದಾರೆ. ಗಲಾಟೆಯಿಂದ ಗ್ರಾಮದ ಹಲವು ಮಂದಿ ಅಮಾಯಕರು ಬಂಧನಕ್ಕೆ ಒಳಗಾಗಿದ್ದಾರೆ. ಅವರನ್ನು ಬಿಡುಗಡೆ ಮಾಡಬೇಕು. ನಾಯಕ ಜನಾಂಗದವರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಆಗ್ರಹಿಸಿದರು.



ಹಲ್ಲರೆ ಘಟನೆ ಖಂಡಿಸಿ ನಾಯಕರ ಸಂಘದಿಂದ ತಹಸೀಲ್ದಾರ್‌ಗೆ ಮನವಿ ಸಲ್ಲಿಸಲಾಯಿತು.

ಮೈಸೂರು ಮತ್ತು ಚಾಮರಾಜನಗರ ನಾಯಕ ಸಂಘದ ಉಪಾಧ್ಯಕ್ಷ ಸುಬ್ಬಣ್ಣ ಮಾತನಾಡಿದರು. ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಶಾಸಕ ದರ್ಶನ್ ಧ್ರುವನಾರಾಯಣ್ ಗ್ರಾಮಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದ್ದಾರೆ. ಗ್ರಾಮದಲ್ಲಿ ಯಥಾಸ್ಥಿತಿ ಕಾಪಾಡಲಾಗುತ್ತಿದೆ. ಗಲಭೆಗೆ ಸಂಬಂಧಿಸಿದಂತೆ ಸಮಗ್ರ ತನಿಖೆ ನಡೆಸಲಾಗುತ್ತಿದೆ. ಎರಡು ಸಮಾಜಗಳ ಜನರ ಜೊತೆಗೆ ಶೀಘ್ರದಲ್ಲಿ ಶಾಂತಿ ಸಭೆ ನಡೆಸಿ ಪ್ರಕರಣ ಸುಖಾಂತ್ಯಗೊಳಿಸಲಾಗುವುದು ಎಂದರು.

ಪ್ರತಿಭಟನೆಯಲ್ಲಿ ಜಿಲ್ಲಾ ನಾಯಕ ಸಂಘದ ಅಧ್ಯಕ್ಷ ರಾಮಚಂದ್ರ, ಮುಖಂಡರಾದ ಕೆ.ಡಿ.ಮಂಜು, ದೊರೆಸ್ವಾಮಿನಾಯಕ, ಸಿದ್ದರಾಜು, ಪಿ.ಶ್ರೀನಿವಾಸ್, ಹೆಡತಲೆ ನಾಗರಾಜು, ಬಂಗಾರುನಾಯಕ, ಚಿಕ್ಕಯ್ಯನ ಛತ್ರ ಚಂದ್ರು, ಹುಲ್ಲಹಳ್ಳಿ ಶಿವಣ್ಣ, ನಾಗೇಂದ್ರ, ಶ್ರೀಕಂಠ ನಾಯಕ, ಕಳಲೆ ಗ್ರಾಪಂ ಅಧ್ಯಕ್ಷ ಮಹೇಶ್, ಗೋಣಹಳ್ಳಿ ಕುಮಾರ್, ಪ್ರಕಾಶ್ ಉಪಸ್ಥಿತರಿದ್ದರು.

ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿರುವ ಕ್ರಮ ಖಂಡಿಸಿ

ದಸಂಸ ಕಾರ್ಯಕರ್ತರಿಂದ ಅರೆಬೆತ್ತಲೆ ಪ್ರತಿಭಟನೆ

ತಿ.ನರಸೀಪುರ, ಫೆ.6– ಪಟ್ಟಣದ ಕೆಎಸ್‌ಐಸಿ ಕಾರ್ಖಾನೆಯಲ್ಲಿ ಕಳೆದ ನಾಲ್ಕೈದು ವರ್ಷದಿಂದ ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿರುವ ಕ್ರಮ ಖಂಡಿಸಿ ದಸಂಸ ಕಾರ್ಯಕರ್ತರು ಪಟ್ಟಣದಲ್ಲಿ ಮಂಗಳವಾರ ಅರೆಬೆತ್ತಲೆ ಪ್ರತಿಭಟನೆ ನಡೆಸಿದರು.

ಪಟ್ಟಣದ ಕೆಎಸ್‌ಐಸಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಕಾರ್ಖಾನೆ ಆಡಳಿತ ವಿರೋಧಿ ನೀತಿ ಖಂಡಿಸಿ, ಕೆಎಸ್‌ಐಸಿ ನಿಗಮ ಹಾಗೂ ಸರ್ಕಾರ ವಿರುದ್ಧ ಬಿತ್ತಿಪತ್ರ ಪ್ರದರ್ಶಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ರೇಷ್ಮೆ ಸಚಿವ ಕೆ.ವೆಂಕಟೇಶ್, ಕೆಡಿಪಿ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ನಿಗಮದ ವ್ಯವಸ್ಥಾಪಕ ನಿರ್ದೇಶಕರ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.



ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿರುವ ಕ್ರಮ ಖಂಡಿಸಿ ದಸಂಸ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ದಸಂಸ (ಬಣರಹಿತ) ಜಿಲ್ಲಾ ಸಂಚಾಲಕ ಆಲಗೂಡು ಸಿ.ಉಮಾ ಮಹದೇವ್ ಮಾತನಾಡಿ, ಪಟ್ಟಣದ ಕೆಎಸ್‌ಐಸಿ ರೇಷ್ಮೆ ನೂಲು ತೆಗೆಯುವ ಘಟಕದಲ್ಲಿ ಕ್ಷುಲ್ಲಕ ಕಾರಣಕ್ಕೆ ಕೆಲಸದಿಂದ ತೆಗೆದು ಹಾಕಿರುವ ಕಾರ್ಮಿಕರನ್ನು ಮರು ನೇಮಕ ಮಾಡಬೇಕು. ಕಾರ್ಮಿಕರ ಶೋಷಣೆ ಮತ್ತು ದಲಿತ ವಿರೋಧಿತನ ನಿಲ್ಲಬೇಕು ಎಂದು ಹಲವು ತಿಂಗಳಿಂದ ಪ್ರತಿಭಟನೆ ಮಾಡುತ್ತಿದ್ದರೂ, ಈ ಬಗ್ಗೆ ಕ್ರಮ ಕೈಗೊಳ್ಳದೇ ಅಕ್ರಮವಾಗಿ ಮೀಸಲಾತಿ ವಂಚಿಸಿ ಹೊರಗುತ್ತಿಗೆ ಕಾರ್ಮಿಕರನ್ನು ನೇಮಕಾತಿ ಮಾಡಿರುವುದನ್ನು ರದ್ದು ಪಡಿಸಬೇಕು ಎಂದು ಒತ್ತಾಯಿಸಿದರು.

ಈ ಸಂಬಂಧ ಮುಖ್ಯಮಂತ್ರಿ ಹಾಗೂ ಸಚಿವರಿಗೆ ಮನವಿ ಸಲ್ಲಿಸಿದರೂ, ಯಾವುದೇ ಪ್ರಯೋಜನವಾಗಿಲ್ಲ. ಹೀಗಾಗಿ ಅರೆಬೆತ್ತಲೆ ಪ್ರತಿಭಟನೆ ನಡೆಸುತ್ತಿದ್ದೇವೆ. ಈಗಲಾದರೂ ನಮ್ಮ ಮನವಿಗೆ ಸ್ಪಂದಿಸದಿದ್ದರೇ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದರು.

ಇದೇ ವೇಳೆ ಪಟ್ಟಣದ ಖಾಸಗಿ ಬಸ್ ನಿಲ್ದಾಣದ ರಸ್ತೆ, ಲಿಂಕ್ ರಸ್ತೆ, ಕೆನರಾ ಬ್ಯಾಂಕ್ ರಸ್ತೆ ಮೂಲಕ ಅರೆಬೆತ್ತಲೆ ಮೆರವಣಿಗೆಯಲ್ಲಿ ಸಾಗಿ ತಾಲೂಕು ಕಚೇರಿ ಆವರಣದಲ್ಲಿ ಗ್ರೇಡ್–2 ತಹಸೀಲ್ದಾರ್ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಶಿವರಾಜು, ಮಹಾದೇವ, ಸಿದ್ದರಾಜು, ಶಿವಪ್ರಕಾಶ್, ರಾಜು, ನಾಗೇಶ್, ಕಾರ್ಮಿಕ ಮುಖಂಡ ನಾಗೇಂದ್ರ, ಮಂಟಯ್ಯ, ಮಹಾದೇವ, ರಂಗಸಮುದ್ರ ಕೇಶವ, ದಲಿತ ಮಹಿಳಾ ಒಕ್ಕೂಟದ ಲತಾ, ದೊಡ್ಡ ಬಸವ, ಪ್ರದೀಪ, ನಿಂಗರಾಜು ಸೇರಿದಂತೆ ದಸಂಸ ಕಾರ್ಯಕರ್ತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	**(ದೂ: 2521923)**
ಯಥಾಭವ (ಕ)	2 ಪ್ರದರ್ಶನಗಳು
ಅಯಲಾನ್ (ತ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಕಾಟೇರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಫೈಟರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬ್ಯಾಚ್ಯುಲರ್ ಪಾರ್ಟಿ (ಕ)	4 ಪ್ರದರ್ಶನಗಳು
ರಾಜಕಮಲ್	
ವಡಕ್ಕುಪಟ್ಟಿ ರಾಮಸ್ವಾಮಿ (ತ)	4 ಪ್ರದರ್ಶನಗಳು
ಸಂಗಂ	
ಉಪಾಧ್ಯಕ್ಷ (ಕ)	4 ಪ್ರದರ್ಶನಗಳು
ಲಿಡೋ	
ಅಲೆಕ್ಸ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಫೈಟರ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶಂಕರ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ನೋ ಶೋ
ಸ್ಕ್ರೀನ್ 2	ಕ್ರಷ್ (ಕ): ಬೆ.10.30ಕ್ಕೆ, ಬ್ಯಾಚುಲರ್ ಪಾರ್ಟಿ (ಕ): ಮ.1.05ಕ್ಕೆ, ಕಾಟೇರ (ಕ): ಮ.3.55ಕ್ಕೆ, ನೆಕ್ಸ್ಟ್ ಗೋಲ್ ವಿನ್ಸ್ (ಇಂ): ರಾ.7.20ಕ್ಕೆ, ರಾ.9.50ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.10.05ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 4	ಹನುಮಾನ್ (ಕ): ಬೆ.9.55ಕ್ಕೆ, ಫೈಟರ್ (ಹಿಂ): ಮ.1ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಫೈಟರ್ (3ಡಿ)(ಹಿಂ): ಬೆ.7.40ಕ್ಕೆ, ಬೆ.11.15ಕ್ಕೆ, ಮ.2.50ಕ್ಕೆ, ಸಂ.6.25ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಬ್ಯಾಚುಲರ್ ಪಾರ್ಟಿ (ಕ): ಬೆ9.20ಕ್ಕೆ, ಸಂ.4ಕ್ಕೆ, 10.20ಕ್ಕೆ, ಫೈಟರ್ (ಹಿಂ): ಮ.12.25ಕ್ಕೆ, ಉಪಾಧ್ಯಕ್ಷ (ಕ): ರಾ.7.05ಕ್ಕೆ.
ಸ್ಕ್ರೀನ್ 3	ಉಪಾಧ್ಯಕ್ಷ (ಕ): ಬೆ.9ಕ್ಕೆ, ಹನುಮಾನ್ (ಕ): ಮ.12.05ಕ್ಕೆ, ಕಾಟೇರ (ಕ): ಮ.3.25ಕ್ಕೆ, ಕೇಸ್ ಆಫ್ ಕೊಂಡಾಣ (ಕ): ರಾ.10.30ಕ್ಕೆ ಮಲೈಕೊಟ್ಟೈ ವಾಲಿಬನ್ (ಮ): ರಾ.7.05ಕ್ಕೆ.
ಸ್ಕ್ರೀನ್ 4	ಫೈಟರ್ (3ಡಿ)(ಹಿಂ): ಬೆ.10.30ಕ್ಕೆ, ಮ.2.05ಕ್ಕೆ, ಸಂ.5.40ಕ್ಕೆ, ರಾ.9.15ಕ್ಕೆ.

ಮೈಸೂರು ವಿಷನ್ ಸಿನಿಮಾ

MVC

ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ಕ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಮಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲೋ 2 (ಕ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಅನಿಮಲ್ (ಹಿಂ): ಬೆ.8.10ಕ್ಕೆ, ಬೆ.9.15ಕ್ಕೆ, ಬೆ.9.45ಕ್ಕೆ, ಬೆ.10.15ಕ್ಕೆ, ಮ.1.20ಕ್ಕೆ, ಮ.2.20ಕ್ಕೆ, ಸಂ.5.25ಕ್ಕೆ, ಸಂ.5.55ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ರಾ.10ಕ್ಕೆ, ರಾ.10.30ಕ್ಕೆ, ಅನಿಮಲ್ (ಕ): ಮ.1.50ಕ್ಕೆ, ಅನ್ನಪೂರ್ಣಿ (ತ): ಸಂ.4.15ಕ್ಕೆ, ಕಾಥಲ್ ದಿ ಕೋರ್ (ಮ): ರಾ.10.15ಕ್ಕೆ, ಪಾರ್ಕಿಂಗ್ (ತ): ಮ.1.25ಕ್ಕೆ, ರಾ.7.20ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಬೆ.9.20ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಸಪ್ತ ಸಾಗರದಾಚೆ ಎಲ್ಲೋ 2 (ಕ): ಮ.12.35ಕ್ಕೆ, ರಾ.7.05ಕ್ಕೆ, ಶೋಶಿತೆ (ಕ): ಬೆ.11ಕ್ಕೆ, ಟೈಗರ್ 3 (ಹಿಂ): ಮ.3.45ಕ್ಕೆ, ರಾ.10.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸರ್ಕಾರಿ ಪಿಯು ಕಾಲೇಜಲ್ಲಿ ವಾರ್ಷಿಕೋತ್ಸವ



ವಾರ್ಷಿಕೋತ್ಸವ ಸಮಾರಂಭದಲ್ಲಿ ವಿದ್ಯಾರ್ಥಿಗಳು ಬಹುಮಾನ ಪಡೆದರು.

ತಿ.ನರಸೀಪುರ, ಫೆ.6– ಪಟ್ಟಣದ ಹಳೇ ಸಂತೆಮಾಳದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಕಾಲೇಜು ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು. ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಹೆಚ್.ವಿ.ಉದಯ್ ಕುಮಾರ್, ಗ್ರಾಮೀಣ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸರ್ಕಾರಿ ಕಾಲೇಜು ಯೋಗ್ಯವಾಗಿದೆ. ವಾರ್ಷಿಕೋತ್ಸವ ಪ್ರತಿಯೊಬ್ಬ ವಿದ್ಯಾರ್ಥಿಯ ನೆನಪಿನಲ್ಲಿ ಉಳಿಯಲಿದ್ದು, ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಉಜ್ವಲಗೊಳ್ಳಲಿ ಎಂದು ಹಾರೈಸಿದರು.

ಇದೇ ವೇಳೆ ವಾರ್ಷಿಕೋತ್ಸವ ಅಂಗವಾಗಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಕಾಲೇಜಿನ ವಾಣಿಜ್ಯ ಎ ವಿಭಾಗದ ವಿದ್ಯಾರ್ಥಿಗಳು ಪ್ರಥಮ, ದ್ವಿತೀಯ, ತೃತೀಯ ಮತ್ತು ಸಮಾಧಾನಕರ ಬಹುಮಾನಗಳನ್ನು ವಿಜ್ಞಾನ ಮತ್ತು ಕಲಾ ವಿಭಾಗದ ವಿದ್ಯಾರ್ಥಿಗಳು ಪಡೆದರು.

ಈ ವೇಳೆ ಕಾಲೇಜು ಅಭಿವೃದ್ಧಿ ಸಮಿತಿ ಉಪಾಧ್ಯಕ್ಷೆ ರತ್ನಮ್ಮ, ಪ್ರಾಂಶುಪಾಲ ಎನ್.ಮೋಹನ್ ಕುಮಾರ್, ಉಪನ್ಯಾಸಕರಾದ ಡಾ.ಎಸ್.ಮಂಗಳಮೂರ್ತಿ, ಎನ್.ಜವರಯ್ಯ, ಟಿ.ಗಿರೀಶ್, ಸುಮಂಗಲಿ ಅಕ್ಕಿ ಜಮುನಾಶ್ರೀ, ವಸಂತಲಕ್ಷ್ಮಿ, ಸುಮಿತ್ರಮ್ಮ, ಶಿವರಂಜಿನಿ, ಸುಮಲತಾ, ಸಿದ್ದರಾಜು, ವಿಜಯಸ್ವಾಮಿ, ಪ್ರದೀಪ್, ಅಂಜನ್ ಕುಮಾರ್, ರಾಜೇಂದ್ರ ಪ್ರಸಾದ್, ರಾಜಶೇಖರ್, ರಾಜಮ್ಮ, ಭಾಗ್ಯಶ್ರೀ, ಕವಿತಾ, ಶುಭಮಣಿ, ಕಾವ್ಯ, ಮಣಿ, ಪಾರ್ವತಿ ಹಾಗೂ ಇನ್ನಿತರರಿದ್ದರು.

ಡ್ಯಾನಿಯಲ್ ಫೆರ್ನಾಂಡೀಸ್ ನಿಧನ



ಹುಣಸೂರು, ಫೆ.6– ನಗರದ ಕಲ್ಕುಣಿಕೆ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ ಹಾಗೂ ಅರಣ್ಯ ಇಲಾಖೆ ನಿವೃತ್ತ ನೌಕರ ಡ್ಯಾನಿಯಲ್ ಫೆರ್ನಾಂಡೀಸ್(68) ಸೋಮವಾರ ರಾತ್ರಿ ನಿಧನರಾದರು.ಮೃತರು ಪತ್ನಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಕೋರ್ಟ್ ಹಿಂಭಾಗದ ಕ್ರಿಶ್ಚಿಯನ್ ಸ್ಮಶಾನದಲ್ಲಿ ಮಂಗಳವಾರ ಮಧ್ಯಾಹ್ನ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಜಾತ್ಯತೀತ ಜನತಾದಳದ ಪಕ್ಷದ ನೂತನ
ಕಾರ್ಯಾಧ್ಯಕ್ಷರಾಗಿ ನೇಮಕಗೊಂಡ
ಮಾಜಿ ಸಚಿವರಾದ
ಸನ್ಮಾನ್ಯ ಶ್ರೀ ಸಾರಾ ಮಹೇಶ್
ರವರಿಗೆ
ಹೃತ್ಪೂರ್ವಕ ಅಭಿನಂದನೆಗಳು
VISMAYA